ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ನ್ಯಾಯಕ್ಕಾಗಿ ಆಗ್ರಹ
ಉನ್ನಾವೊ ಅತ್ಯಾಚಾರ ಪ್ರಕರಣದ ಸಂತ್ರಸ್ತೆಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ನಾಗರಿಕರು ದೆಹಲಿಯ ಜಂತರ್‌ಮಂತರ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

'ಯುದ್ಧಾಂತ್ಯ– ರಷ್ಯಾ, ಉಕ್ರೇನ್‌ಗೆ ಆಸಕ್ತಿ' 8
ಐವರಿಂದ ಚಿನ್ನಾಭರಣ ದರೋಡೆ 4B

ಡ್ರಗ್ಸ್ ಜಾಲ: ಬೆಚ್ಚಿದ ಬೆಂಗಳೂರು

'ಮಹಾ' ಎಎನ್‌ಟಿಎಫ್ ಕಾರ್ಯಾಚರಣೆ
₹56 ಕೋಟಿಯ ಪದಾರ್ಥ, ಯಂತ್ರ ವಶ

ಪ್ರಜಾವಾಣಿ ವಾರ್ತೆ/ಪಿಟಿಐ

ಠಾಣೆ/ಬೆಂಗಳೂರು: ಹೊಸ ವರ್ಷಾಚರಣೆಗೆ ಭರ್ಜರಿ ತಯಾರಿ ನಡೆದಿರುವ ನಡುವೆಯೇ, ಬೆಂಗಳೂರು ಪೊಲೀಸರ ಸಹಕಾರದಲ್ಲಿ ರಾಜಧಾನಿಯಲ್ಲಿ ಕಾರ್ಯಾಚರಣೆ ನಡೆಸಿದ ಮಹಾರಾಷ್ಟ್ರದ ಮಾದಕವಸ್ತು ನಿಗ್ರಹ ಕಾರ್ಯಪಡೆ, ಭಾರಿ ಪ್ರಮಾಣದ ಡ್ರಗ್ಸ್ ತಯಾರಿಕಾ ಘಟಕವನ್ನು ಪತ್ತೆ ಹಚ್ಚಿದ್ದು, ₹55.88 ಕೋಟಿ ಮೌಲ್ಯದ ಮಾದಕ ವಸ್ತುವನ್ನು ವಶಪಡಿಸಿಕೊಂಡಿದೆ.

ಮುಂಬೈನಲ್ಲಿ ಸೆರೆಸಿಕ್ಕ ಆರೋಪಿಯೊಬ್ಬ ಕೊಟ್ಟ ಸುಳಿವು ಆಧರಿಸಿ, ಮೈಸೂರಿನಲ್ಲಿ ದಾಳಿ ನಡೆಸಿದ್ದ ಮಹಾರಾಷ್ಟ್ರದ ಮಾದಕವಸ್ತು ನಿಗ್ರಹ ಕಾರ್ಯಪಡೆ (ಎಎನ್‌ಟಿಎಫ್) ₹390 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ವಶಕ್ಕೆ ಪಡೆದಿತ್ತು. ಇದು ಇಡೀ ರಾಜ್ಯವನ್ನು ದಂಗು ಬಡಿಸಿತ್ತು. ಈಗ ಬೆಂಗಳೂರಿನಲ್ಲಿಯೂ ಮಾದಕವಸ್ತು ಜಾಲವನ್ನು ಎಎನ್‌ಟಿಎಫ್ ಭೇದಿಸಿದ್ದು, ರಾಜ್ಯದಾದ್ಯಂತ ಮಾದಕ ವಸ್ತು ತಯಾರಿ, ಮಾರಾಟದ ದಂಧೆ ಅವ್ಯಾಹತವಾಗಿ ನಡೆಯುತ್ತಿರುವ ಬಗ್ಗೆ ಸಂಶಯ ಮೂಡಿಸಿದೆ.

ಬೆಂಗಳೂರು ಪೊಲೀಸರ ನೆರವಿನಲ್ಲಿ ಕಾರ್ಯಾಚರಣೆ ನಡೆಸಿದ ಎಎನ್‌ಟಿಎಫ್, ನಗರದಲ್ಲಿ ರಹಸ್ಯವಾಗಿ ನಡೆಯುತ್ತಿದ್ದ ಮೆಫೆಡ್ರೋನ್ ತಯಾರಿಸುವ ಮೂರು ಕಾರ್ಖಾನೆಗಳನ್ನು ಧ್ವಂಸಗೊಳಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಈ ವರೆಗೆ ನಾಲ್ವರನ್ನು ಬಂಧಿಸಲಾಗಿದ್ದು, ಇಬ್ಬರು ಶಂಕಿತರ ಪತ್ತೆ ಕಾರ್ಯಾಚರಣೆ ಮುಂದುವರಿದಿದೆ.

5

ಡ್ರಗ್ಸ್ ದಂಧೆಯ ವಿರುದ್ಧ ಅಕ್ಟೋಬರ್, ನವೆಂಬರ್ ತಿಂಗಳಿಂದ ಪೊಲೀಸರು ರಾಜ್ಯದಾದ್ಯಂತ ಹೆಚ್ಚಿನ ಕಾರ್ಯಾಚರಣೆ ಕೈಗೊಂಡಿದ್ದಾರೆ. ಪೊಲೀಸರು ಈ ವರೆಗೆ ₹165 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ
ಜಿ. ಪರಮೇಶ್ವರ, ಗೃಹ ಸಚಿವ

ಮೂರು ವರ್ಷದಲ್ಲಿ ಡ್ರಗ್ಸ್ ನಾಶಪಡಿಸಿದ ವಿವರ

ವರ್ಷ	ಡ್ರಗ್ಸ್ (ಕೆ.ಜಿ.)	ಮೌಲ್ಯ (ಕೋಟಿಗಳಲ್ಲಿ)
2023	12,340	₹18.07
2024	7,016	₹16.27
2025	10,084	₹104.17

ವಿಧಾನಸಭೆಗೆ ಗೃಹ ಸಚಿವ ಪರಮೇಶ್ವರ ನೀಡಿದ್ದ ಮಾಹಿತಿ

₹1.20 ಕೋಟಿ ಮೌಲ್ಯದ ಡ್ರಗ್ಸ್ ಕಚ್ಚಾವಸ್ತು ವಶ: ಪರಮೇಶ್ವರ

ಆರೋಪಿಗಳಿಂದ ವಶಪಡಿಸಿಕೊಂಡ ಮಾದಕ ವಸ್ತು ತಯಾರಿಸುವ ಕಚ್ಚಾವಸ್ತುಗಳನ್ನು ಎನ್‌ಎಟಿಎಫ್ ಅಧಿಕಾರಿಗಳು ಪರಿಶೀಲಿಸಿದರು

ಬೆಂಗಳೂರು: ಎಎನ್‌ಟಿಎಫ್ ಮತ್ತು ಬೆಂಗಳೂರು ಪೊಲೀಸರು ಜಂಟಿಯಾಗಿ ನಗರದ ಕಾರ್ಖಾನೆಯೊಂದರ ಮೇಲೆ ಶನಿವಾರ ದಾಳಿ ನಡೆಸಿ ₹1.20 ಕೋಟಿ ಮೌಲ್ಯದ ಡ್ರಗ್ಸ್ ಕಚ್ಚಾವಸ್ತು ಜಪ್ತಿ ಮಾಡಿದ್ದಾರೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಭಾನುವಾರ ಸಭೆ ನಡೆಸಿದ ಅವರು ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. 'ಕಾರ್ಖಾನೆಯಲ್ಲಿ ಯಾವುದೇ ಡ್ರಗ್ಸ್ ತಯಾರಿಸುತ್ತಿರಲಿಲ್ಲ. ಡ್ರಗ್ಸ್ ತಯಾರಿಕೆಯ ಕಚ್ಚಾವಸ್ತು, ಯಂತ್ರೋಪಕರಣಗಳು, ರಾಸಾಯನಿಕಗಳು ಪತ್ತೆಯಾಗಿವೆ. ದಾಳಿ ವೇಳೆ ₹55.88 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆಯಾಗಿದೆ ಎಂಬುದಾಗಿ ಎಎನ್‌ಟಿಎಫ್ ನೀಡಿರುವ ಹೇಳಿಕೆ ಸತ್ಯಕ್ಕೆ ದೂರ ಎಂದು ಹೇಳಿದರು.

'ಮೂರು ಕಡೆ ಡ್ರಗ್ಸ್ ತಯಾರಿಕ ಕಾರ್ಖಾನೆ ಇತ್ತು ಎಂಬುದು ಸುಳ್ಳು. ಕಾರ್ಯಾಚರಣೆ ವೇಳೆ ನಗರದ ಡಿಸಿಪಿ ಸಹ ಎಎನ್‌ಟಿಎಫ್ ಪೊಲೀಸರೊಂದಿಗೆ ಇದ್ದರು' ಎಂದು ಅವರು ಹೇಳಿದರು.

5

'ಆಡಳಿತದ ಮೇಲೆ ಡ್ರಗ್ಸ್ ಮಾಫಿಯಾ ಪ್ರಭಾವ'

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದ್ದು, ಡ್ರಗ್ಸ್ ಮಾಫಿಯಾದವರು ಆಡಳಿತದ ಮೇಲೆ ಪ್ರಭಾವ ಬೀರುತ್ತಿವೆ. ಮಂತ್ರಿಗಳಿಗೆ ಹತ್ತಿರ ಇರುವವರು ಮತ್ತು ಇವರ ಪಕ್ಷದ ಪದಾಧಿಕಾರಿಗಳೇ ಈ ಕೃತ್ಯಗಳಲ್ಲಿ ಶಾಮೀಲಾಗಿರುವ ಶಂಕೆ ಇದೆ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ವಿವಿಧ ರೀತಿಯ ಮಾದಕ ವಸ್ತುಗಳು ತಯಾರಾಗಿ, ಸಾಗಣೆ ಮತ್ತು ಮಾರಾಟ ಆಗುತ್ತಿವೆ. ಆದರೆ, ಇದನ್ನು ತಡೆಗಟ್ಟುವಲ್ಲಿ ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದೆ' ಎಂದು ಕಿಡಿಕಾರಿದರು.

'ಮಹಾರಾಷ್ಟ್ರ ಪೊಲೀಸರು ಕಲಬುರಗಿ, ಮೈಸೂರಿಗೆ ಬಂದು ದಾಳಿ ನಡೆಸುತ್ತಾರೆ. ಮಹಾರಾಷ್ಟ್ರ ಪೊಲೀಸರಿಗೆ ಡ್ರಗ್ಸ್ ಫ್ಯಾಕ್ಟರಿ ಎಲ್ಲಿದೆ ಎಂಬುದು ಗೊತ್ತಾಗುತ್ತದೆ. ಆದರೆ, ನಮ್ಮ ಪೊಲೀಸರಿಗೆ ಮಾಹಿತಿಯೇ ಇಲ್ಲ. ಗೃಹ ಸಚಿವರು ಮಾತ್ರ ತಮಗೆ ಏನೂ ಗೊತ್ತಿಲ್ಲ, ಪರಿಶೀಲಿಸುತ್ತೇನೆ, ನೋಡುತ್ತೇನೆ ಎಂಬ ಸಿದ್ಧ ಉತ್ತರ ನೀಡುತ್ತಾರೆ. ಇವರು ರಾಜೀನಾಮೆ ಕೊಡುವುದು ಸೂಕ್ತ' ಎಂದರು.

ಕಾರವಾರದ ಕದಂಬ ನೌಕಾನೆಲೆಯಲ್ಲಿ 'ಐಎನ್‌ಎಸ್ ವಾಘಶೀರ್' ಜಲಾಂತರ್ಗಾಮಿ ನೌಕೆಯ ಮೇಲೆ ನಿಂತು ರಾಷ್ಟ್ರಪತಿ ದ್ರೌಪದಿ ಮುರ್ಮು ನೌಕಾದಳದ ಸಿಬ್ಬಂದಿಯತ್ತ ಕೈಬೀಸಿದರು

ಜಲಾಂತರ್ಗಾಮಿಯಲ್ಲಿ ರಾಷ್ಟ್ರಪತಿ

ಕದಂಬ ನೌಕಾನೆಲೆ: 'ಐಎನ್‌ಎಸ್ ವಾಘಶೀರ್'ನಲ್ಲಿ ಯಾನ

ಪ್ರಜಾವಾಣಿ ವಾರ್ತೆ

ಕಾರವಾರ: ಇಲ್ಲಿನ ಕದಂಬ ನೌಕಾನೆಲೆಯಲ್ಲಿ 'ಐಎನ್‌ಎಸ್ ವಾಘಶೀರ್' ಜಲಾಂತರ್ಗಾಮಿ ನೌಕೆಯಲ್ಲಿ (ಸಬ್ ಮೆರೀನ್) ರಾಷ್ಟ್ರಪತಿ ದ್ರೌಪದಿ ಮುರ್ಮು ಭಾನುವಾರ ಎರಡು ತಾಸಿಗೂ ಹೆಚ್ಚು ಸಂಚಾರ ನಡೆಸಿದರು.

ಈ ಮೂಲಕ ಎಪಿಜೆ ಅಬ್ದುಲ್ ಕಲಾಂ ಬಳಿಕ ಜಲಾಂತರ್ಗಾಮಿ ನೌಕೆಯಲ್ಲಿ ಸಂಚರಿಸಿದ ಎರಡನೇ ರಾಷ್ಟ್ರಪತಿ ಅವರಾದರು. ದ್ರೌಪದಿ ಮುರ್ಮು ಅವರು ಕದಂಬ ನೌಕಾನೆಲೆಗೆ ಭೇಟಿ ನೀಡಿದ ಮೊದಲ ರಾಷ್ಟ್ರಪತಿ ಆಗಿದ್ದಾರೆ.

ನೌಕಾದಳದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಗೋವಾದಿಂದ ಬೆಳಿಗ್ಗೆ 9 ಗಂಟೆಗೆ ನೌಕಾನೆಲೆಗೆ ಬಂದ ರಾಷ್ಟ್ರಪತಿ ಅವರನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಬರಮಾಡಿಕೊಂಡರು. ಬಳಿಕ ನೌಕಾದಳದ ದಿರಿಸು ಧರಿಸಿ, ಜಲಾಂತರ್ಗಾಮಿ ನೌಕೆಯ ಬಳಿ ತೆರಳಿದ ಅವರು, ನೌಕಾದಳದ ಸಿಬ್ಬಂದಿಯತ್ತ ಕೈಬೀಸುತ್ತ ಜಲಾಂತರ್ಗಾಮಿ ನೌಕೆಯೊಳಗೆ ಹೋದರು.

ನೌಕೆ ಸಮುದ್ರದ ಒಳಗೆ ಎರಡು ತಾಸು ಸಂಚರಿಸಿತು. ನೌಕೆಯೊಳಗೆ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿ ಜತೆ ಚರ್ಚೆ ನಡೆಸಲಾಯಿತು ಎಂದು ಸಂಚಾರದ ಬಳಿಕ ರಾಷ್ಟ್ರಪತಿ ಅವರ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಳ್ಳಲಾಗಿದೆ.

'ದೇಶದ ಕಡಲ ಕಾರ್ಯತಂತ್ರದಲ್ಲಿ ಜಲಾಂತರ್ಗಾಮಿ ಪಡೆಯ ಪಾತ್ರ, ಕಾರ್ಯಾಚರಣೆಯ ಸಾಮರ್ಥ್ಯ ಮತ್ತು ಕೊಡುಗೆಗಳ ಬಗ್ಗೆ ರಾಷ್ಟ್ರಪತಿ ಮಾಹಿತಿ ಪಡೆದರು. ಜಲಾಂತರ್ಗಾಮಿ ಪಡೆಯ ಸಮರ್ಪಣೆ, ಬದ್ಧತೆ ಮತ್ತು ನಿಸ್ವಾರ್ಥ ಸೇವಾ ಮನೋಭಾವವನ್ನು ಶ್ಲಾಘಿಸಿದರು.

ವಾಘಶೀರ್ ಜಲಾಂತರ್ಗಾಮಿ ನೌಕೆ ಭಾರತೀಯ ನೌಕಾಪಡೆಯ ವೃತ್ತಿಪರ ಶ್ರೇಷ್ಠತೆ, ಯುದ್ಧ ಸನ್ನದ್ಧತೆ ಮತ್ತು ರಾಷ್ಟ್ರೀಯ ಭದ್ರತೆಗೆ ಅಚಲ ಬದ್ಧತೆಯ ಪ್ರತೀಕ ಎಂದು ಕೊಂಡಾಡಿದರು' ಎಂದು ವಿವರಿಸಿದ್ದಾರೆ.

Attractive ROI on Deposits
General / Institutions | Senior Citizens
For 150 Days
6.25%* 7.00%*
For 16 Months
7.00%* 7.25%*
*T&C (ROI p.a.)
COSMOS CO-OP. BANK LTD. MULTISTATE SCHEDULED BANK
Enriching Life!
080-26619950 / 22421999

ಕೋಗಿಲು ಒತ್ತುವರಿ ತೆರವು: ಸಿ.ಎಂ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಗಿಲು ಗ್ರಾಮದಲ್ಲಿ ನಡೆಸಲಾದ ಒತ್ತುವರಿ ತೆರವು ಕಾರ್ಯದಲ್ಲಿ ಮನೆ ಕಳೆದುಕೊಂಡವರಿಗೆ ಪರಿಹಾರ ಕಲ್ಪಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಬೆಳಿಗ್ಗೆ ಸಭೆ ಕರೆದಿದ್ದು, ಎಲ್ಲರಿಗೂ ಒಳ್ಳೆಯದಾಗುವ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆ ಇದೆ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ತೆರವು ಕಾರ್ಯಾಚರಣೆ ನಡೆದ ಪ್ರದೇಶದಲ್ಲೇ ಟೆಂಟ್‌ಗಳನ್ನು ನಿರ್ಮಿಸಿಕೊಂಡಿರು-ವವರನ್ನು ಭಾನುವಾರ ಭೇಟಿ ಮಾಡಿದ ಜಮೀರ್ ಅಹಮದ್, ಅವರ ಜತೆ ಮಾತುಕತೆ ನಡೆಸಿದರು. ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಜತೆಗಿದ್ದರು.

'ಇಲ್ಲಿನ ನಿವಾಸಿಗಳಿಗೆ ಈಗಾಗಲೇ ಹಲವು ಬಾರಿ ನೋಟಿಸ್ ನೀಡಲಾಗಿತ್ತು. ತೆರವು ಕಾರ್ಯಾಚರಣೆ ವೇಳೆ ಇಲ್ಲಿನ ಎಲ್ಲ ನಿವಾಸಿಗಳಿಗೂ ಸುತ್ತಮುತ್ತಲ ಪ್ರದೇಶದಲ್ಲಿರುವ ಐದು ಕಲ್ಯಾಣ ಮಂಟಪಗಳಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಸತಿ ಮತ್ತು ಊಟದ ವ್ಯವಸ್ಥೆ ಮಾಡಿದ್ದರು. ಆದರೆ ನಿವಾಸಿಗಳ್ಯಾರೂ ಅಲ್ಲಿಗೆ ಹೋಗಿಲ್ಲ. ಈ ವಿಚಾರದಲ್ಲಿ ಕೇರಳ ರಾಜಕಾರಣಿಗಳು ಮಾಡುತ್ತಿರುವ ಆರೋಪದಲ್ಲಿ ಹುರುಳಿಲ್ಲ' ಎಂದು ಜಮೀರ್ ಹೇಳಿದರು.

4B

ಕಾನೂನು ಪ್ರಕಾರ ಕ್ರಮ: ಡಿ.ಕೆ.ಶಿವಕುಮಾರ್

'ಕೋಗಿಲು ಗ್ರಾಮದಲ್ಲಿ ಸ್ಥಳೀಯ ವ್ಯಕ್ತಿಯೊಬ್ಬ ಹಣ ಪಡೆದುಕೊಂಡು, ಗುಡಿಸಲು ನಿರ್ಮಿಸಿಕೊಳ್ಳಲು ಬಿಟ್ಟಿದ್ದಾನೆ. ಈ ಬಗ್ಗೆ ವರದಿ ತರಿಸಿಕೊಂಡಿದ್ದೇನೆ. ಇಲ್ಲಿ ಎಲ್ಲ ಸಮುದಾಯದವರೂ ಇದ್ದು, ಕಾನೂನು ಪ್ರಕಾರವೇ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆ.ಸಿ.ವೇಣುಗೋಪಾಲ್ ಅವರು ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿ. ಅವರು ನಮಗೆ ಸಲಹೆ ನೀಡಬಾರದೆ? ಬಿಜೆಪಿ ರಾಷ್ಟ್ರೀಯ ನಾಯಕರು ನೀಡುವ ಸಲಹೆಯನ್ನು ರಾಜ್ಯ ನಾಯಕರು ಕೇಳುವುದಿಲ್ಲವೇ' ಎಂದು ಅವರು ಪ್ರಶ್ನಿಸಿದರು.

'ಬುಲ್ಡೋಜರ್ ನೀತಿ'

'ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಅವರ ಸರ್ಕಾರದ ಬುಲ್ಡೋಜರ್ ನೀತಿಯನ್ನು ಕರ್ನಾಟಕ ಸರ್ಕಾರ ಅನುಸರಿಸುತ್ತಿದೆ' ಎಂದು ಕೇರಳ ಆಡಳಿತಾರೂಢ ಎಲ್‌ಡಿಎಫ್ ಶಾಸಕ ಕೆ.ಟಿ.ಜಲೀಲ್ ಆಪಾದಿಸಿದರು.

ಭಾನುವಾರ ಕೋಗಿಲು ಗ್ರಾಮಕ್ಕೆ ಭೇಟಿ ನೀಡಿ, ನಿರಾಶ್ರಿತರ ಜತೆ ಮಾತುಕತೆ ನಡೆಸಿದ ಅವರು ಸುದ್ದಿಗಾರರ ಜತೆ ಮಾತನಾಡಿದರು.

ರಾಜ್ಯಸಭೆಯ ಎಲ್‌ಡಿಎಫ್ ಸದಸ್ಯ ಎ.ಎ.ರಹೀಂ ಅವರು ಶನಿವಾರ ಇಲ್ಲಿಗೆ ಭೇಟಿ ನೀಡಿ, ನಿರಾಶ್ರಿತರ ಜತೆ ಚರ್ಚೆ ನಡೆಸಿದ್ದರು.

ದಿಗ್ವಿಜಯ್ ಕುಟುಕಿದ 'ಕೈ' ಪಡೆ

ಪ್ರಜಾವಾಣಿ ವಾರ್ತೆ/ಪಿಟಿಐ



ದಿಗ್ವಿಜಯ್ ಸಿಂಗ್

ನವದೆಹಲಿ: ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಅವರು ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಕಾರ್ಯವೈಖರಿ, ಸಂಘಟನಾ ಚಾತುರ್ಯ ಹೊಗಳಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಬೆನ್ನಲ್ಲೇ, ಸ್ವಪಕ್ಷೀಯರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

'140 ವರ್ಷಗಳ ಇತಿಹಾಸ ಹೊಂದಿರುವ ಪಕ್ಷವು ವಿಭಜಕ ಶಕ್ತಿಯೊಂದರಿಂದ ಕಲಿಯುವುದು ಏನೂ ಇಲ್ಲ' ಎಂದು ಕಾಂಗ್ರೆಸ್ ನಾಯಕರಾದ ಪವನ್ ಖೇರಾ ಹಾಗೂ ಮಾಣಿಕಂ ಟ್ಯಾಗೋರ್ ಕುಟುಕಿದ್ದರೆ, ಹಿರಿಯ ನಾಯಕ ಶಶಿ ತರೂರ್, 'ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ' ಎಂದು ಹೇಳುವ ಮೂಲಕ ದಿಗ್ವಿಜಯ್ ಸಿಂಗ್ ಅವರ ಮಾತಿಗೆ ದನಿಗೂಡಿಸಿದ್ದಾರೆ.

'ಆರ್‌ಎಸ್‌ಎಸ್‌ನಿಂದ ಕಾಂಗ್ರೆಸ್ ಪಕ್ಷ ಕಲಿಯುವಂಥದ್ದು ಏನೂ ಇಲ್ಲ. ಅದರಲ್ಲೂ, ಮಹಾತ್ಮ ಗಾಂಧಿ ಅವರಿಂದ ಮರುಸಂಘಟನೆಯಾಗಿರುವ ಪಕ್ಷವು ಆರ್‌ಎಸ್‌ಎಸ್‌ನಿಂದ ಏನು ಕಲಿಯಬೇಕಿದೆ' ಎಂದು ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಪ್ರಶ್ನಿಸಿದ್ದಾರೆ.

5

ನಾಯಕರು ಹೇಳಿದ್ದೇನು?

ನಮ್ಮ ಪಕ್ಷಕ್ಕೆ 140 ವರ್ಷ ಇತಿಹಾಸವಿದ್ದು, ಇದರಿಂದ ನಾವು ಸಾಕಷ್ಟು ಕಲಿಯಬಹುದಾಗಿದೆ. ಸಂಘಟನೆ ಬಲಪಡಿಸುವ ಕುರಿತು ನಮಗೆ ಯಾರೂ ಹೇಳಿಕೊಡಬೇಕಿಲ್ಲ. ಯಾವುದೇ ಪಕ್ಷವಿರಲಿ ಶಿಸ್ತು ಬಹಳ ಮುಖ್ಯ
ಶಶಿ ತರೂರ್

ದ್ವೇಷದ ತಳಹದಿ ಮೇಲೆ ಹಾಗೂ ದ್ವೇಷವನ್ನೇ ಹಬ್ಬಿಸುವ ತತ್ವದ ಮೇಲೆ ಕಟ್ಟಿದ ಸಂಘಟನೆಯೇ ಆರ್‌ಎಸ್‌ಎಸ್. ಅಲ್‌ಕೈದಾ ಕೂಡ ದ್ವೇಷ ಹಬ್ಬಿಸುವ ಸಂಘಟನೆ. ನೀವು ಅಲ್‌ಕೈದಾದಿಂದ ಏನಾದರೂ ಕಲಿಯಬಹುದೇ? ಈ ಸಂಘಟನೆಯಿಂದ ಕಲಿಯಲಿಕ್ಕಾದರೂ ಏನಿದೆ?
ಮಾಣಿಕಂ ಟ್ಯಾಗೋರ್

ನಾವು ಆರ್‌ಎಸ್‌ಎಸ್ ಪ್ರತಿಪಾದಿಸುವ ಸಿದ್ಧಾಂತವನ್ನು ವಿರೋಧಿಸುತ್ತೇವೆ. ಹೀಗಾಗಿ ನಾವು ಅವರಿಂದ ಕಲಿಯುವಂಥದ್ದು ಖಂಡಿತವಾಗಿಯೂ ಏನೂ ಇಲ್ಲ
ಸಲ್ಮಾನ್ ಖುರ್ಷೀದ್

ಚಿನಕುರುಳಿ ಪ್ರಕಾಶ್ ಶೆಟ್ಟಿ

ಅರಾವಳಿ: 'ಸುಪ್ರೀಂ'ನಲ್ಲಿ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಅರಾವಳಿ ಬೆಟ್ಟ ಮತ್ತು ಶ್ರೇಣಿಗಳ ಬಗೆಗಿನ ಮರುವ್ಯಾಖ್ಯಾನ ಕುರಿತು ಆಕ್ಷೇಪ ವ್ಯಕ್ತವಾಗಿರುವ ಕಾರಣ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಸುಪ್ರೀಂ ಕೋರ್ಟ್ ಈ ಬಗ್ಗೆ ಸೋಮವಾರ ವಿಚಾರಣೆ ನಡೆಸಲಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಕೆ ಮಾಹೇಶ್ವರಿ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರನ್ನೊಳಗೊಂಡ ರಜಾ ಕಾಲದ ಪೀಠವು ಪ್ರಕರಣದ ವಿಚಾರಣೆ ನಡೆಸುವ ಸಾಧ್ಯತೆಯಿದೆ.

ವಿವಾದವೇನು?

ಅರಾವಳಿ ಬೆಟ್ಟ ಮತ್ತು ಶ್ರೇಣಿಗಳ ಸಂರಕ್ಷಣೆಗಾಗಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸಮಿತಿ ನೀಡಿದ್ದ ಏಕರೂಪದ ವ್ಯಾಖ್ಯಾನವನ್ನು ಸುಪ್ರೀಂ ಕೋರ್ಟ್ ನವೆಂಬರ್ 20ರಂದು ಅನುಮೋದಿಸಿತ್ತು. ತಜ್ಞರು ವರದಿ ಸಲ್ಲಿಸಿದ ನಂತರ ಹರಿಯಾಣ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಹೊಸದಾಗಿ ಗಣಿಗಾರಿಕೆ ಕೈಗೊಳ್ಳಲು ಅನುಮತಿ ನೀಡುವುದನ್ನು ಇದೇ ವೇಳೆ ನಿರ್ಬಂಧಿಸಿತ್ತು.

ರಾಜಸ್ಥಾನ, ಗುಜರಾತ್, ಹರಿಯಾಣದಲ್ಲಿರುವ ಅರಾವಳಿ ಜಿಲ್ಲೆಗಳಲ್ಲಿನ ನೂರು ಮೀಟರ್ ಮತ್ತು ಅದಕ್ಕಿಂತ ಎತ್ತರದ ಭೂಪ್ರದೇಶಗಳನ್ನು ಅರಾವಳಿ ಬೆಟ್ಟಗಳು ಮತ್ತು 500 ಮೀಟರ್ ಅಂತರದಲ್ಲಿರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಬೆಟ್ಟಗಳನ್ನು ಅರಾವಳಿ ಶ್ರೇಣಿಗಳೆಂದು ಪರಿಗಣಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು.

ಈ ಮರುವ್ಯಾಖ್ಯಾನದಿಂದಾಗಿ ಅರಾವಳಿ ವ್ಯಾಪ್ತಿಯ ನೂರು ಮೀಟರ್‌ಗಿಂತ ಕಡಿಮೆ ಎತ್ತರದ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಮಾನವ ಹಸ್ತಕ್ಷೇಪ ನಡೆದು ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಆಕ್ಷೇಪಿಸಿ ರಾಜಸ್ಥಾನ, ಹರಿಯಾಣ ಮತ್ತು ಗುಜರಾತ್‌ನಲ್ಲಿ ವ್ಯಾಪಕ ಪ್ರತಿಭಟನೆಗಳು ಆರಂಭಗೊಂಡಿವೆ.



ರಂಗಾಯಣ; ಬಹುರೂಪಿ ಉತ್ಸವಕ್ಕೆ ಬೆಳ್ಳಿ ಹಬ್ಬದ ಸಂಭ್ರಮ; ಜನವರಿ 12ರಿಂದ ಆರಂಭ

ಈ ಬಾರಿ 'ಬಹುರೂಪಿ ಬಾಬಾಸಾಹೇಬ್'

● ಕೆ.ನರಸಿಂಹಮೂರ್ತಿ

ಮೈಸೂರು: ಇಲ್ಲಿನ ರಂಗಾಯಣವು 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ'ದ ಬೆಳ್ಳಿ ಹಬ್ಬಕ್ಕೆ ಸಜ್ಜಾಗುತ್ತಿದ್ದು, ಈ ಬಾರಿ ಸಂವಿಧಾನಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರ ತತ್ವಗಳನ್ನೇ ಕೇಂದ್ರವಾಗಿರಿಸಿಕೊಂಡು ಉತ್ಸವವನ್ನು ರೂಪಿಸಲಾಗುತ್ತಿದೆ. 'ಸಮತೆಯೆಡೆಗೆ ನಡಿಗೆ' ಆಶಯದಲ್ಲಿ 'ಬಹುರೂಪಿ ಬಾಬಾಸಾಹೇಬ್' ಶೀರ್ಷಿಕೆಯಲ್ಲಿ ನಾಟಕೋತ್ಸವ ಮೈದಳೆಯಲಿದೆ.

ಜನವರಿ 12ರಿಂದ ಏಳು ದಿನ ವಿವಿಧ ಭಾಷೆಗಳ ವೈವಿಧ್ಯಮಯ ನಾಟಕ, ಗಾಯನ ಕಾರ್ಯಕ್ರಮಗಳು, ಸಿನಿಮಾ ಪ್ರದರ್ಶನ, ರಾಷ್ಟ್ರೀಯ ವಿಚಾರಸಂಕಿರಣ ನಡೆಯಲಿದೆ. ಅಂಬೇಡ್ಕರ್ ಅವರ ಜೀವನ, ತತ್ವಗಳಿಂದ ಪ್ರೇರಿತವಾದ ಕಲಾ ಪ್ರಕಾರಗಳ ಮಿಶ್ರಣವಾಗಿ ಉತ್ಸವ ಗಮನ ಸೆಳೆಯಲಿದೆ. ಅಂಬೇಡ್ಕರ್ ಜೀವನವನ್ನು ಬಿಂಬಿಸುವ ಛಾಯಾಚಿತ್ರ ಪ್ರದರ್ಶನವೂ ಇರಲಿದೆ.

ರಂಗಾಯಣ ಆವರಣದಲ್ಲಿರುವ ಭೂಮಿಗೀತ, ವನರಂಗ, ಕಿರು ರಂಗಮಂದಿರ ಹಾಗೂ ಕಲಾಮಂದಿರದ ವೇದಿಕೆಗಳಲ್ಲಿ ಕನ್ನಡ, ಅಸ್ಸಾಮಿ, ಮಣಿಪುರಿ, ಇಂಗ್ಲಿಷ್, ಹಿಂದಿ, ಮರಾಠಿ, ತಮಿಳು, ಮಲಯಾಳ, ತುಳು ಭಾಷೆಯ ನಾಟಕಗಳು ಪ್ರದರ್ಶನಗೊಳ್ಳಲಿವೆ. ಬೀದಿ ನಾಟಕಗಳ ಮೂಲಕವೇ ಉತ್ಸವದ ಪ್ರಚಾರ ನಡೆಯಲಿರುವುದು ವಿಶೇಷ.

25 ವರ್ಷಗಳ ಉತ್ಸವದ ಹಿನ್ನೋಟವನ್ನು ದಾಖಲಿಸಲು ಸ್ಮರಣ ಸಂಚಿಕೆ ತರಲು ಸಿದ್ಧತೆಗಳು ನಡೆದಿವೆ. ಲೇಖಕ ಜಿ.ಪಿ.ಬಸವರಾಜು ಸಂಪಾದಕರಾಗಿದ್ದಾರೆ. ಉತ್ಸವದ ಅಂಗವಾಗಿ ನಡೆಯಲಿರುವ ಸಿನಿಮಾಗಳ ಪ್ರದರ್ಶನದ ನೇತೃತ್ವ 'ಮ್ಯಾನ್' ಸಂಸ್ಥೆಯ ಕೆ.ಮನು ಅವರದ್ದು.

'ಜಗತ್ತಿನಾದ್ಯಂತ ಬಹುಶಿಸ್ತೀಯ ನೆಲೆಯಲ್ಲಿ ಆಳ ಅಧ್ಯಯನಕ್ಕೆ ಒಳಗಾಗಿರುವ ಪ್ರತಿಭೆ ಅಂಬೇಡ್ಕರ್. ಅವರ ಹೋರಾಟ-ಬದುಕು, ಚಿಂತನೆಗಳನ್ನು ನಾಟಕ, ಸಂಗೀತ, ಸಿನಿಮಾ ಮಾಧ್ಯಮಗಳ ಮೂಲಕ ಮುಖಾಮುಖಿಯಾಗುವ ಯತ್ನ ನಮ್ಮದು. ಜಗತ್ತಿನ ಹಲವು ಜ್ವಲಂತ ಸಮಸ್ಯೆಗಳಿಗೆ ಅಂಬೇಡ್ಕರ್ ಅವರಲ್ಲಿ ಪರಿಹಾರಗಳಿವೆ ಎಂದು ಪ್ರತಿಪಾದಿಸುವ ಉದ್ದೇಶವೂ ಇದೆ' ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು 'ಪ್ರಜಾವಾಣಿ'ಗೆ ತಿಳಿಸಿದರು.

5

ಮುಖ್ಯಾಂಶಗಳು

- 'ಸಮತೆಯೆಡೆಗೆ ನಡಿಗೆ' ಈ ಬಾರಿಯ ಆಶಯ
- ಉತ್ಸವದಲ್ಲಿ ಅಂಬೇಡ್ಕರ್ ತತ್ವಗಳ ಪ್ರತಿಪಾದನೆ
- 25 ವರ್ಷದ ಹಿನ್ನೋಟ ದಾಖಲಿಸಲು ಸ್ಮರಣ ಸಂಚಿಕೆ

'ಅಂಬೇಡ್ಕರ್ ಕೊಲಾಜ್'



'ಬಹುರೂಪಿ ಉತ್ಸವಕ್ಕೆಂದೇ ನಾಟಕಕಾರ ಕೋಟಿಗಾನಹಳ್ಳಿ ರಾಮಯ್ಯ ಅವರು 'ಅಂಬೇಡ್ಕರ್ ಕೊಲಾಜ್' ನಾಟಕ ರಚಿಸಿದ್ದಾರೆ. ಕನ್ನಡದ 'ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ', ಮಹೇಶ್ ದತ್ ಶರ್ಮಾ ಅವರ ಕೃತಿ ಆಧಾರಿತ ಹಿಂದಿ ನಾಟಕ 'ಅಂಬೇಡ್ಕರ್ ಕಾ ಬಚ್ಪನ್', ಜಾತಿ ವ್ಯವಸ್ಥೆಯ ಅಸಮಾನತೆ ಕುರಿತು ಹಾಡುಗಳು ಮತ್ತು ಕವಿತೆಗಳ ಮೂಲಕ ಹೇಳುವ ಹಿಂದಿ ನಾಟಕ 'ಕವನ್: ಅಂಬೇಡ್ಕರ್ ಒಪೆರಾ', ಜ್ಯೋತಿ ಬಾ ಫುಲೆ ಅವರ ಮರಾಠಿ ನಾಟಕ 'ತೃತೀಯ ರತ್ನ' –ಇವು 'ಸಮತೆಯೆಡೆ ನಡಿಗೆ' ಎಂಬ ಉತ್ಸವದ ಆಶಯನುಡಿಯನ್ನು ಸಮರ್ಥವಾಗಿ ಪ್ರತಿಪಾದಿಸುತ್ತವೆ' ಎಂದು ಸತೀಶ್ ತಿಪಟೂರು ತಿಳಿಸಿದರು.



ಬಹುರೂಪಿ ಉತ್ಸವದ ಬಳಿಕ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ವರ್ಷಪೂರ್ತಿ ಅಂಬೇಡ್ಕರ್ ಅವರ ಜೀವನ ಆಧಾರಿತ ನಾಟಕಗಳ ಪ್ರದರ್ಶನ, ಸಂವಾದ ಆಯೋಜಿಸುವ ಉದ್ದೇಶವಿದೆ
ಸತೀಶ್ ತಿಪಟೂರು, ನಿರ್ದೇಶಕರು, ರಂಗಾಯಣ ಮೈಸೂರು

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ.

ಸತೀಶ ಜಾರಕಿಹೊಳಿ ಪ್ರೆಸ್ ಕ್ಲಬ್ 'ವರ್ಷದ ವ್ಯಕ್ತಿ'

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಬೆಂಗಳೂರು ಪ್ರೆಸ್ ಕ್ಲಬ್‌ನ 2025ನೇ ಸಾಲಿನ 'ವರ್ಷದ ವ್ಯಕ್ತಿ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ವಸತಿ ಸಚಿವ ಜಮೀರ್ ಅಹಮದ್, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರಿಗೆ ಪ್ರೆಸ್‌ಕ್ಲಬ್‌ನ 'ವಿಶೇಷ ಪ್ರಶಸ್ತಿ' ನೀಡಲಾಗುತ್ತದೆ.

ಡಿ. 31ರಂದು ಕಬ್ಬನ್ ಉದ್ಯಾನದಲ್ಲಿರುವ ಪ್ರೆಸ್‌ಕ್ಲಬ್ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಬೆಂಗಳೂರು ಪ್ರೆಸ್‌ಕ್ಲಬ್‌ನ ಅಧ್ಯಕ್ಷ ಆರ್. ಶ್ರೀಧರ್ ತಿಳಿಸಿದ್ದಾರೆ.

ನಿಧನ ವಾರ್ತೆ

ಟಿ.ಆರ್. ವರದರಾಜನ್

ಬೆಂಗಳೂರು: ಲೇಖಕ ಟಿ.ಆರ್. ವರದರಾಜನ್ (70) ಅವರು ಭಾನುವಾರ ಬೆಳಗಿನ ಜಾವ ಕೋಣನಕುಂಟೆಯ ಸ್ವಗೃಹದಲ್ಲಿ ಹೃದಯಸ್ತಂಭನದಿಂದ ನಿಧನರಾದರು. ಪತ್ನಿ, ಮಗಳು, ಮೊಮ್ಮಗನನ್ನು ಮೃತರು ಅಗಲಿದ್ದಾರೆ.

ವರದರಾಜನ್ ಅವರು ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ಕಥೆ, ಪ್ರವಾಸಿ ಕಥನ, ಕವಿತೆ, ನಾಟಕಗಳನ್ನು ಬರೆದಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಬನಶಂಕರಿ ಚಿತಾಗಾರದಲ್ಲಿ ನಡೆಯಿತು.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೇರಳದ ಹಸ್ತಕ್ಷೇಪ: ಬಿಜೆಪಿ ವಾಗ್ದಾಳಿ

ಕೋಗಿಲು ಸಮೀಪ ಅಕ್ರಮ ಕಟ್ಟಡಗಳ ನೆಲಸಮ– ಪಿಣರಾಯಿ ಪ್ರವೇಶಕ್ಕೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಗಿಲು ಸಮೀಪ ಅಕ್ರಮ ಕಟ್ಟಡಗಳ ನೆಲಸಮ ವಿಚಾರದಲ್ಲಿ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಅಲ್ಲಿನ ಸಂಸದ ಕೆ.ಸಿ. ವೇಣುಗೋಪಾಲ್ ಅವರು ಮಧ್ಯೆ ಪ್ರವೇಶಿಸಿರುವುದು ಖಂಡನೀಯ' ಎಂದು ಬಿಜೆಪಿ ರಾಜ್ಯ ಘಟಕದ ನಾಯಕರು ಆಕ್ಷೇಪಿಸಿದ್ದಾರೆ.

ಬಿ.ವೈ. ವಿಜಯೇಂದ್ರ

'ಅಕ್ರಮವಾಗಿ ಮನೆ ಕಟ್ಟಿಕೊಂಡ ಮುಸ್ಲಿಮರ ಪರವಾಗಿ ಕೇರಳದ ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ನಾಯಕರು ಒಂದಾಗಿದ್ದಾರೆ. ಕರ್ನಾಟಕದ ವಿಷಯದಲ್ಲಿ ತಲೆ ಹಾಕಲು ಇವರು ಯಾರು? ಒಂದು ಕಡೆ ಪಿಣರಾಯಿ ವಿಜಯನ್‌ಗೆ ತಿರುಗೇಟು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆ.ಸಿ.ವೇಣುಗೋಪಾಲ್‌ಗೆ ಅದೇ ರೀತಿ ತಿರುಗೇಟು ಏಕೆ ನೀಡಿಲ್ಲ' ಎಂದೂ ಪ್ರಶ್ನಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಕುರಿತು 'ಎಕ್ಸ್' ಮಾಡಿದ್ದು, 'ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ಆಯ್ಕೆ ಮಾಡಿರುವುದು ಕರ್ನಾಟಕದವರಾ ಅಥವಾ ಕೇರಳದವರಾ? ದೆಹಲಿಯಿಂದ ಕರೆ ಬಂದ ಬಳಿಕ ನಿಮ್ಮ ನಿಲುವು ಬದಲಿಸಿದ್ದೀರಾ' ಎಂದೂ ಅವರು ಪ್ರಶ್ನಿಸಿದ್ದಾರೆ.

'ದೆಹಲಿಯಲ್ಲಿ ತೆರೆಮರೆಯಲ್ಲಿ ಕುಳಿತು ನಿರ್ದೇಶನ ನೀಡುವವರು ನಿಮ್ಮನ್ನು ಗೆಲ್ಲಿಸಿದ್ದಲ್ಲ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರು ಕುರ್ಚಿ ಕದನದಲ್ಲಿ ನಿರತರಾಗಿದ್ದಾರೆ. ಹೀಗಾಗಿ ಕರ್ನಾಟಕದಲ್ಲಿ ಏನಾಗಬೇಕು ಎಂಬ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿರುವುದು ದೆಹಲಿಯೇ ಹೊರತು ಬೆಂಗಳೂರು ಅಲ್ಲ' ಎಂದು ಕುಟುಕಿದ್ದಾರೆ.

'ರಾಜ್ಯ ಕಾಂಗ್ರೆಸ್ ನಾಯಕರು ದೆಹಲಿಯಲ್ಲಿನ ಕಾಣದ ಕೈಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವುದರಿಂದ ಆಡಳಿತ ಯಂತ್ರ ಕುಸಿದು ಹೋಗಿದೆ ಮತ್ತು 'ರಿಮೋಟ್ ಕಂಟ್ರೋಲ್' ಮಾತುಗಳೇ ನಡೆಯುತ್ತಿದೆ. ಕರ್ನಾಟಕಕ್ಕೆ ಉತ್ತರದಾಯಿತ್ವ ಇರುವ ನಾಯಕತ್ವ ಬೇಕೇ ಹೊರತು, ಹೈಕಮಾಂಡ್‌ನ ಕೀಲಿ ಕೊಟ್ಟ ಬೊಂಬೆಯಂತೆ ಕುಣಿಯುವವರು ಬೇಕಿಲ್ಲ' ಎಂದು ವಿಜಯೇಂದ್ರ ಹೇಳಿದ್ದಾರೆ.

ಕೇರಳ ಚುನಾವಣೆ ಮೇಲೆ ಕಣ್ಣು: ಕೇರಳ ಚುನಾವಣೆಯಲ್ಲಿ ಮುಸ್ಲಿಮರ ಮತ ದಕ್ಕಿಸಿಕೊಳ್ಳಲು ಅಕ್ರಮ ಮನೆಗಳ ಧ್ವಂಸ ಪ್ರಕರಣವನ್ನು ಅಲ್ಲಿನ ರಾಜಕಾರಣಿಗಳು ಬಳಸಿಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಆರೋಪಿಸಿದ್ದಾರೆ.

'ಈ ಹಿಂದೆ ವಯನಾಡ್‌ನಲ್ಲಿ ಆನೆ ದಾಳಿಯಲ್ಲಿ ಮೃತಪಟ್ಟ ವ್ಯಕ್ತಿಗೆ ₹30 ಲಕ್ಷ ಪರಿಹಾರ ನೀಡಿದ್ದ ರಾಜ್ಯ ಸರ್ಕಾರ, ಈಗ ಕೇರಳ ಚುನಾವಣೆ ಕಾರಣಕ್ಕೆ ರಾಜ್ಯದ ಮರ್ಯಾದೆಯನ್ನೇ ಬೀದಿ ಪಾಲು ಮಾಡಿದೆ. ಕರ್ನಾಟಕದ ಬಂಡೆ ಸರ್ಕಾರವನ್ನು ಕೇರಳದ ಕಮ್ಯುನಿಸ್ಟ್ ಸರ್ಕಾರ ಬುಲ್ಡೋಜರ್ ಅಡಿಯಲ್ಲಿ ಹಾಕಿ ರೋಲ್ ಮಾಡಿದರೂ ಸಹಿಸಿಕೊಂಡಿರುವ ಕಾಂಗ್ರೆಸ್‌ನ 'ವೀರಕನ್ನಡಿಗರಿಗೆ' ಭೇಷ್ ಅನ್ನಲೇಬೇಕು ಬಿಡಿ' ಎಂದು ವ್ಯಂಗ್ಯವಾಡಿದ್ದಾರೆ.

'ಅಕ್ರಮವಾದರೂ ಮುಸ್ಲಿಂ ಪರ ನಿಲುವು'

ಸಿ.ಎನ್.ಅಶ್ವತ್ಥ ನಾರಾಯಣ

'ನಿಯಮಬದ್ಧವಾಗಿ ಮನೆ ಕಟ್ಟಿಕೊಂಡವರಿಗೆ ನಿತ್ಯವೂ ಕಿರುಕುಳ ನೀಡುವ ಕಾಂಗ್ರೆಸ್ ಸರ್ಕಾರ, ಕೋಗಿಲು ಬಡಾವಣೆಯಲ್ಲಿ ಅಕ್ರಮವಾಗಿ ಮನೆ ಕಟ್ಟಿಕೊಂಡಿದ್ದರೂ ಮುಸ್ಲಿಮರ ಪರವಾಗಿ ಮಾತನಾಡುತ್ತಿರುವುದು ಖಂಡನೀಯ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಟೀಕಿಸಿದರು.

'ಮುಸ್ಲಿಮರ ಚಾಂಪಿಯನ್ ಆಗಬೇಕು ಎಂಬ ಕಾರಣಕ್ಕೆ ಕಾಂಗ್ರೆಸ್ ನಾಯಕರು ಸ್ಪರ್ಧೆಗೆ ಇಳಿದಿದ್ದಾರೆ. ಅಲ್ಲಿ ಮನೆ ಕಟ್ಟಿಕೊಂಡ ಮುಸ್ಲಿಮರು ಯಾವ ದೇಶದಿಂದ ಬಂದವರು ಎಂದು ಪ್ರಶ್ನಿಸಿದ್ದಾರಾ? ಅವರಿಗೆ ವಸತಿ ಕೊಡುವುದಾಗಿ ವಸತಿ ಸಚಿವರು ಹೇಳಿಕೆ ನೀಡಿದ್ದಾರೆ. ಎಲ್ಲದಕ್ಕೂ ಮಾತನಾಡುವ ಸಚಿವ ಕೃಷ್ಣ ಬೈರೇಗೌಡ ಅವರು ಎಲ್ಲಿ ನಾಪತ್ತೆ ಆಗಿದ್ದಾರೆ? ಅವರ ಸದ್ದು ಕೇಳುತ್ತಾ ಇಲ್ಲ. ಅವರ ಧ್ವನಿ ಉಡುಗಿ ಹೋಗಿದೆಯಾ' ಎಂದರು.

ಸಂತ್ರಸ್ತರಿಗೆ ಪುನರ್ವಸತಿ: ಮುಖ್ಯ ಆಯುಕ್ತ ಮಹೇಶ್ವರ್ ರಾವ್

ಮಹೇಶ್ವರ ರಾವ್

ಕೋಗಿಲು ಗ್ರಾಮದ ಅಪಾಯಕಾರಿ ಪ್ರದೇಶದಲ್ಲಿ ಶೀಟ್ ಹಾಕಿಕೊಂಡಿದ್ದವರಿಗೆ ಪುನರ್ವಸತಿ ವ್ಯವಸ್ಥೆ ಮಾಡಲಾಗಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ತಿಳಿಸಿದ್ದಾರೆ.

ಈ ಬಗ್ಗೆ ಅವರು 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಕೋಗಿಲು ಗ್ರಾಮದ ಸರ್ಕಾರಿ ಗೋಮಾಳ ಜಮೀನಿನ ಸರ್ವೆ ಸಂಖ್ಯೆ 99ರಲ್ಲಿ 15 ಎಕರೆ ಜಾಗವು ಘನತ್ಯಾಜ್ಯ ವಿಲೇವಾರಿಗೆ ಬಳಸಲಾಗುವ ಕ್ವಾರಿ ಭೂಮಿಯಾಗಿದೆ. ಇದು ಮಾನವನ ವಾಸಕ್ಕೆ ಅತ್ಯಂತ ಅಪಾಯಕಾರಿಯಾಗಿದೆ. ತ್ಯಾಜ್ಯ ಡಂಪ್ ಮಾಡುವ ಈ ಪ್ರದೇಶದಲ್ಲಿ ಕೆಲವರು ಅನಧಿಕೃತವಾಗಿ ಶೆಡ್‌ಗಳನ್ನು ಕಟ್ಟಿಕೊಂಡಿದ್ದರು. ಅವುಗಳನ್ನು ಡಿ.20ರಂದು ತೆರವುಗೊಳಿಸಲಾಗಿದೆ ಎಂದು ಹೇಳಿದ್ದಾರೆ.

ನಿರಾಶ್ರಿತರಲ್ಲಿ ಅರ್ಹರಾದವರನ್ನು ಸರ್ಕಾರಿ ಯೋಜನೆಗಳ ಅಡಿಯಲ್ಲಿ ವಸತಿ ಸೌಲಭ್ಯ ಕಲ್ಪಿಸಲು ಪರಿಗಣಿಸಲಾಗುವುದು ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಜಾಗ ಬಿಟ್ಟು ಕದಲುವುದಿಲ್ಲ: ಸಂತ್ರಸ್ತರು

ಯಲಹಂಕ: ಕೋಗಿಲು ಲೇಔಟ್‌ನಲ್ಲಿ ಶೆಡ್‌ಗಳ ತೆರವು ಕಾರ್ಯಾಚರಣೆಯಿಂದ ಬೀದಿಗೆ ಬಿದ್ದಿರುವ ನಿವಾಸಿಗಳು, ಎಂಟು ದಿನಗಳಿಂದ ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಶೆಡ್‌ಗಳನ್ನು ತೆರವುಗೊಳಿಸಿರುವ ಜಾಗದಲ್ಲೇ ಟಾರ್ಪಲ್ ಶೀಟ್ ಹಾಕಿಕೊಂಡು ವಾಸ ಮುಂದುವರಿಸಿದ್ದಾರೆ.

'ಸರ್ಕಾರ ಮೂರು ಕಿಲೋಮೀಟರ್ ದೂರದಲ್ಲಿ ತಾತ್ಕಾಲಿಕ ಆಶ್ರಯ ಕೇಂದ್ರ ತೆರೆದಿದೆ. ನಾವು ಅಲ್ಲಿಗೆ ಹೋದರೆ ಇಲ್ಲಿ ಸಂಪೂರ್ಣವಾಗಿ ತೆರವು ಮಾಡಿ ಬೇಲಿ ಹಾಕುತ್ತಾರೆ. ಎಷ್ಟೇ ಕಷ್ಟವಾದರೂ ನಾವು ಇಲ್ಲೇ ಇರುತ್ತೇವೆ. ಪುನರ್ವಸತಿ ಕಲ್ಪಿಸುವವರೆಗೂ ಈ ಜಾಗಬಿಟ್ಟು ಕದಲುವುದಿಲ್ಲ' ಎಂದು ಹೇಳಿದ್ದಾರೆ.

ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಸ್ಥಳಕ್ಕೆ ಭೇಟಿ ನೀಡಿದರು. 'ಕೇರಳದಿಂದ ಸಂಸದರು, ಶಾಸಕರು ಬರುತ್ತಿದ್ದಾರೆ. ನಿಮಗೆ ಇಲ್ಲಿ ಬರಲು ಏನು ಕಷ್ಟ? ಚುನಾವಣೆ ಸಂದರ್ಭದಲ್ಲಿ ನಿಮಗೆ ಮುಸ್ಲಿಮರ ಮತ ಬೇಕು, ಆದರೆ ಈಗ ಮುಸ್ಲಿಮರು ಬೇಡವೇ? ಸಚಿವ ಕೃಷ್ಣ ಬೈರೇಗೌಡ ಸ್ಥಳಕ್ಕೆ ಯಾಕೆ ಬಂದಿಲ್ಲ' ಎಂದರು.

ಉತ್ತರ ಪ್ರದೇಶಕ್ಕೆ ಹೋಲಿಕೆ ಸರಿಯಲ್ಲ: ಮುಸ್ಲಿಂ ಲೀಗ್

ಕುಂಞಾಲಿ ಕುಟ್ಟಿ

ಕೊಯಿಕ್ಕೋಡ್ (ಪಿಟಿಐ): 'ಬೆಂಗಳೂರಿನಲ್ಲಿ ನಡೆದ ಅಕ್ರಮ ಮನೆಗಳ ತೆರವು ಕಾರ್ಯಾಚರಣೆಯನ್ನು ಉತ್ತರ ಪ್ರದೇಶದ ಘಟನೆಗಳಿಗೆ ಹೋಲಿಸುವುದು ಸರಿಯಲ್ಲ' ಎಂದು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ರಾಷ್ಟ್ರೀಯ ಕಾರ್ಯದರ್ಶಿ ಪಿ.ಕೆ. ಕುಂಞಾಲಿ ಕುಟ್ಟಿ ಹೇಳಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, 'ಈ ಸಂಬಂಧ ಕರ್ನಾಟಕದ ಮುಖ್ಯಮಂತ್ರಿ, ಸಚಿವರೊಂದಿಗೆ ಮಾತನಾಡಿದ್ದೇನೆ. ತೆರವು ಕಾರ್ಯಾಚರಣೆಯಿಂದಾಗಿ ಎಲ್ಲ ಸಮುದಾಯಗಳ ಜನರು ಬಾಧಿತರಾಗಿರುವುದನ್ನು ಅವರು ತಿಳಿಸಿದ್ದಾರೆ' ಎಂದರು.

'ಮನೆ ಕಳೆದುಕೊಂಡವರಿಗೆ ಸರ್ಕಾರ ಪುನರ್ವಸತಿ ಕಲ್ಪಿಸಲಿದೆ. ಆಕರ್ಷಕ ಪುನರ್ವಸತಿ ಪ್ಯಾಕೇಜ್‌ಗಳನ್ನು ಒದಗಿಸಲಾಗುವುದು ಎಂದು ಸರ್ಕಾರ ತಿಳಿಸಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ ಎನ್ನುವ ಕಾರಣಕ್ಕೆ ಈ ವಿಷಯದ ಲಾಭ ಪಡೆಯುವುದು ಕೀಳುಮಟ್ಟದ ರಾಜಕೀಯವಾಗುತ್ತದೆ' ಎಂದು ಹೇಳಿದರು.

ಕರ್ನಾಟಕದ ರಾಜಧಾನಿಯಲ್ಲಿ ಮುಸ್ಲಿಮರ ಮನೆಗಳನ್ನು ನೆಲಸಮಗೊಳಿಸಲಾಗಿದೆ ಎಂಬ ವರದಿಯನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಶುಕ್ರವಾರ ತೀವ್ರವಾಗಿ ಟೀಕಿಸಿದ್ದರು. ಈ ಕ್ರಮವು ಆಘಾತಕಾರಿ ಮತ್ತು ನೋವಿನಿಂದ ಕೂಡಿದೆ ಎಂದು ಹೇಳಿದ್ದರು.

ಸುದ್ದಿ 2 ನಿಮಿಷ

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: 66/11 ಕೆ.ವಿ ಬ್ಯಾಟರಾಯನಪುರ ಉಪಕೇಂದ್ರ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಸೋಮವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 4ರವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಎಲ್ ಆ್ಯಂಡ್ ಟಿ ಅಪಾರ್ಟ್‌ಮೆಂಟ್, ಯಶೋಧನಗರ, ಜಕ್ಕೂರು ಪ್ಲಾಂಟೇಷನ್, ಸೆಂಚುರಿ ಅಪಾರ್ಟ್‌ಮೆಂಟ್ ಬ್ಯಾಟರಾಯನಪುರ, ಸ್ಪಾರ್ಕಲ್ ಒನ್ ಮಾಲ್, ಅಮೃತಹಳ್ಳಿ, ಸಹಕಾರನಗರ 'ಜಿ' ಬ್ಲಾಕ್, ಶಬರಿನಗರ, ಕೆನರಾ ಬ್ಯಾಂಕ್ ಲೇಔಟ್, ಧನಲಕ್ಷ್ಮಿ ಲೇಔಟ್, ತಿಂಡ್ಲು ಮುಖ್ಯರಸ್ತೆ, ಸರ್ ಎಂ.ವಿ. ಲೇಔಟ್, ತಿಂಡ್ಲು ವಿಲೇಜ್, ಸಪ್ತಗಿರಿ ಲೇಔಟ್, ಜ್ಞಾನೇಶ್ವರಿ ಲೇಔಟ್, ಗುರುದರ್ಶನ ಲೇಔಟ್, ವೆಂಕಟಸ್ವಾಮಪ್ಪ ಲೇಔಟ್, ನಂಜಪ್ಪ ವೃತ್ತ, ಎಲ್ ಆ್ಯಂಡ್ ಜೆ ಎನ್‌ಕ್ಲೇವ್, ಬಸವ ಸಮಿತಿ ಮತ್ತು ಸುತ್ತಮುತ್ತಲಿನ ಪ್ರದೇಶ

ಮತ್ತಿಕೆರೆ ಸುತ್ತಮುತ್ತ: 66/11 ಕೆ.ವಿ ಮತ್ತಿಕೆರೆ ಉಪಕೇಂದ್ರ ವ್ಯಾಪ್ತಿಯ ಈ ಕೆಳಕಂಡ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಲೊಟ್ಟೆಗೊಲ್ಲಹಳ್ಳಿ, ಮುನಿಹನುಮಯ್ಯ ಕಾಲೊನಿ, ಆರ್.ಕೆ. ಉದ್ಯಾನ, ಸಂಜೀವಪ್ಪ ಕಾಲೊನಿ, ಎಂಎಲ್‌ಎ ಲೇಔಟ್, ನೇತಾಜಿ ನಗರ, ಪೈಪ್ ಲೈನ್ ರಸ್ತೆ, ಮತ್ತಿಕೆರೆ, ಮೋಹನ್ ಕುಮಾರ್ ನಗರ, ಜೆ.ಪಿ ಪಾರ್ಕ್, ಅಕ್ಕಿಯಪ್ಪ ಉದ್ಯಾನ, ಬಿ.ಕೆ. ನಗರ, ಎಲ್‌ಐಸಿ ಕಾಲೊನಿ, ಪಂಪ ನಗರ, ಮತ್ತಿಕೆರೆ, 1ನೇ ಮುಖ್ಯರಸ್ತೆ ಯಶವಂತಪುರ, ಎಚ್‌ಎಂಟಿ ಲೇಔಟ್, ಎಲ್‌ಸಿಆರ್ ಶಾಲಾ ರಸ್ತೆ, ಗೋಕುಲ 1ನೇ ಹಂತ, ಗುರುಮೂರ್ತಿ ರೆಡ್ಡಿ ಕಾಲೊನಿ, ಮತ್ತಿಕೆರೆ, ಎಚ್‌ಎಂಟಿ ಮುಖ್ಯ ರಸ್ತೆ, ಎಂಆರ್‌ಜೆ ಕಾಲೊನಿ, ಸಂಜೀವಪ್ಪ ಕಾಲೊನಿ, 3ನೇ ಮುಖ್ಯ ರಸ್ತೆ, ಮತ್ತಿಕೆರೆ 2ನೇ ಮುಖ್ಯ ರಸ್ತೆಯಿಂದ 10ನೇ ಮುಖ್ಯ ರಸ್ತೆ, ವಿಆರ್ ಲೇಔಟ್, ಟ್ಯಾಂಕ್ ಬಂಡ್ ರಸ್ತೆ, ಜೆ.ಪಿ ಪಾರ್ಕ್, ಎಸ್‌ಬಿಎಂ ಕಾಲೊನಿ, ಬೃಂದಾವನ ನಗರ, ಎಚ್‌ಎಂಟಿ ಲೇಔಟ್, ಮತ್ತಿಕೆರೆ ಸುತ್ತಮುತ್ತ.

ಮಹಿಳಾ ಅಭ್ಯರ್ಥಿಗಳ ಅರ್ಜಿ ಶುಲ್ಕ ₹25 ಸಾವಿರಕ್ಕೆ ಇಳಿಕೆ

ಬೆಂಗಳೂರು: ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ವ್ಯಾಪ್ತಿಯ ಪಾಲಿಕೆಗಳ ಚುನಾವಣೆಯಲ್ಲಿ ಉಮೇದುವಾರಿಕೆಗೆ ಅರ್ಜಿ ಸಲ್ಲಿಸುವ ಮಹಿಳಾ ಅಭ್ಯರ್ಥಿಗಳ ಶುಲ್ಕವನ್ನು ಕೆಪಿಸಿಸಿ ₹25,000ಕ್ಕೆ ಇಳಿಸಿದೆ.

ಪಕ್ಷದ ಕಚೇರಿಯಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈ ಬಗ್ಗೆ ಘೋಷಣೆ ಮಾಡಿದರು.

ಪಾಲಿಕೆ ಚುನಾವಣೆಗೆ ಮಾಡಿಕೊಳ್ಳಬೇಕಾದ ಸಿದ್ಧತೆ ಬಗ್ಗೆ ಮಾತನಾಡುವಾಗ ಅವರು ಅರ್ಜಿ ಶುಲ್ಕದ ವಿಚಾರವನ್ನು ಪ್ರಸ್ತಾಪಿಸಿದರು. 'ಸಾಮಾನ್ಯ ಅಭ್ಯರ್ಥಿಗಳಿಗೆ ₹50,000, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭ್ಯರ್ಥಿಗಳಿಗೆ ₹25,000 ಅರ್ಜಿ ಶುಲ್ಕ ನಿಗದಿ ಮಾಡಿದ್ದೇವೆ' ಎಂದರು. ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಹಲವರು, 'ಮಹಿಳಾ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ರಿಯಾಯಿತಿ ನೀಡಬೇಕು' ಎಂದು ಒತ್ತಾಯಿಸಿದರು.

ಆಗ ಶಿವಕುಮಾರ್ ಅವರು, 'ಈಗಾಗಲೇ ಮಹಿಳೆಯರಿಗೆ ತಿಂಗಳಿಗೆ ₹2,000, ಬಸ್‌ನಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ನೀಡಲಾಗಿದೆ. ಅರ್ಜಿ ಶುಲ್ಕದಲ್ಲಿ ರಿಯಾಯಿತಿ ನೀಡಲು ಸಾಧ್ಯವಿಲ್ಲ' ಎಂದರು.

ವೇದಿಕೆಯಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು, ಮಹಿಳಾ ಅಭ್ಯರ್ಥಿಗಳಿಗೆ ರಿಯಾಯಿತಿ ನೀಡಿ ಎಂದರು.

ಅದಕ್ಕೆ ಒಪ್ಪಿದ ಶಿವಕುಮಾರ್, 'ಮುಖ್ಯಮಂತ್ರಿ ಮತ್ತು ಸಚಿವ ಜಾರ್ಜ್ ಅವರು ಹೇಳುತ್ತಿದ್ದಾರೆ ಎಂದು ಅರ್ಜಿ ಶುಲ್ಕವನ್ನು ₹25,000ಕ್ಕೆ ಇಳಿಸುತ್ತಿದ್ದೇನೆ. ಪಾಲಿಕೆಗಳ 369 ವಾರ್ಡ್‌ಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನೀಡಲಾಗಿದೆ. ಒಂದೊಂದು ಕ್ಷೇತ್ರದಿಂದಲೂ ಕನಿಷ್ಠ 10 ಮಹಿಳೆಯರು ಉಮೇದುವಾರಿಕೆಗೆ ಅರ್ಜಿ ಸಲ್ಲಿಸಬೇಕು. ಚೆನ್ನಾಗಿ ಕೆಲಸ ಮಾಡಿರುವವರಿಗೆ ಪ್ರಾಮುಖ್ಯ ನೀಡಲಾಗುತ್ತದೆ' ಎಂದರು.

ರಾಜ್ಯಕ್ಕೆ 4 ಗ್ರೀನ್ ಮೊಬಿಲಿಟಿ ಅವಾರ್ಡ್

'ಗ್ರೀನ್ ಮೊಬಿಲಿಟಿ ಅವಾರ್ಡ್' ಅನ್ನು ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಹೆಚ್ಚುವರಿ ಸಾರಿಗೆ ಆಯುಕ್ತ (ಪರಿಸರ ಮತ್ತು ಇ–ಆಡಳಿತ) ಜೆ. ಜ್ಞಾನೇಂದ್ರ ಕುಮಾರ್ ಅವರಿಗೆ ಪ್ರದಾನ ಮಾಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೋಟಾರಿಂಗ್ ವರ್ಲ್ಡ್ ಮ್ಯಾಗಜಿನ್ ಆಫ್ ಡೆಲ್ಲಿ ಪ್ರೆಸ್ ಗ್ರೂಪ್' ಆಯೋಜಿಸಿದ್ದ ಮೋಟಾರಿಂಗ್ ವರ್ಲ್ಡ್ ಗ್ರೀನ್ ಮೊಬಿಲಿಟಿ ಅವಾರ್ಡ್ ಕಾರ್ಯಕ್ರಮದಲ್ಲಿ ರಾಜ್ಯವು 4 ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿತು. ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ವಿದ್ಯುತ್ ಚಾಲಿತ ವಾಹನಗಳಿಗೆ ಅನುಕೂಲ ಮಾಡಿಕೊಡಲು 6,000ಕ್ಕೂ ಅಧಿಕ ಎಲೆಕ್ಟ್ರಿಕ್ ಚಾರ್ಜಿಂಗ್ ಕೇಂದ್ರಗಳನ್ನು ರಾಜ್ಯದಲ್ಲಿ ಸ್ಥಾಪಿಸಿದೆ. ಇದು ದೇಶದಲ್ಲಿಯೇ ಅಧಿಕವಾಗಿರುವ ಕಾರಣ ಬೆಸ್ಕಾಂ ಅನ್ನು ಚಿನ್ನದ ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು.

ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ನೋಂದಣಿ ಹಾಗೂ ವಿದ್ಯುದೀಕರಣದಲ್ಲಿ ಮೇಲುಗೈ ಸಾಧಿಸಿದ್ದಕ್ಕಾಗಿ ರಾಜ್ಯ ಸರ್ಕಾರದ ಸಾರಿಗೆ ಇಲಾಖೆಯು ಬೆಳ್ಳಿ ಪ್ರಶಸ್ತಿ ಹಾಗೂ ವಿದ್ಯುತ್ ಚಾಲಿತ ನಾಲ್ಕು ಚಕ್ರ ವಾಹನಗಳ ನೋಂದಣಿ ಹಾಗೂ ವಿದ್ಯುದೀಕರಣದಲ್ಲಿ ಶೇ 6ರಷ್ಟು ಸಾಧನೆ ಮಾಡಿದ್ದಕ್ಕಾಗಿ ಬೆಳ್ಳಿ ಪ್ರಶಸ್ತಿಯನ್ನು ಪಡೆಯಿತು.

ಬೆಂಗಳೂರು ನಗರದಲ್ಲಿ 1,500ಕ್ಕೂ ಅಧಿಕ ವಿದ್ಯುತ್ ಚಾಲಿತ ಬಸ್‌ಗಳನ್ನು ಒಪ್ಪಂದದ ಆಧಾರದಲ್ಲಿ ಕಾರ್ಯಾಚರಣೆಗೊಳಿಸಿದ್ದಕ್ಕಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) ಬೆಳ್ಳಿ ಪ್ರಶಸ್ತಿ ಪಡೆದಿದೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಮತ

'ವಿಭಜಿತ ಓದು, ವಿಮರ್ಶೆ ಮುನ್ನೆಲೆಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚೆಗೆ ವಿಭಜಿತ ಓದು ಮತ್ತು ವಿಮರ್ಶೆ ಮುನ್ನೆಲೆಗೆ ಬರುತ್ತಿದೆ. ವಿಭಜಕ ಪ್ರವೃತ್ತಿ ನಮ್ಮ ಓದಿನ ಹಾಗೂ ವಿಮರ್ಶೆಯ ಸಾಧ್ಯತೆಗಳನ್ನು ಕ್ಷೀಣಿಸುತ್ತದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಅಂಕಿತ ಪುಸ್ತಕ ಪ್ರಕಾಶನದ 'ಸಾವಿರದ ಸಂಭ್ರಮ' 1000ನೇ ಕೃತಿಯಾಗಿ ಜೋಗಿ ಅವರ 'ದಕ್ಷಿಣಾಯನ' ಕಾದಂಬರಿ ಜನಾರ್ಪಣೆ ಹಾಗೂ 30ನೇ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಬಂಡಾಯ ಹಾಗೂ ದಲಿತರ ಕುರಿತು ಮಾತನಾಡುತ್ತಾರೆ ಎಂಬ ಸೈದ್ಧಾಂತಿಕ ಭಿನ್ನಾಭಿಪ್ರಾಯದ ಕಾರಣಕ್ಕೆ ಪುಸ್ತಕ ಓದುವುದನ್ನು ನಿರಾಕರಿಸಬಾರದು. ಮೊದಲು ಆ ಪುಸ್ತಕಗಳನ್ನು ಓದಬೇಕು. ಅದನ್ನು ಒಪ್ಪಬೇಕೊ ಅಥವಾ ಬಿಡಬೇಕೊ ಎಂಬುದನ್ನು ನಂತರ ನಿರ್ಧರಿಸಬೇಕು. ಅದನ್ನು ಬಿಟ್ಟು ವಿಭಜಿತ ಓದುಗರು ಹಾಗೂ ವಿಮರ್ಶಕರು ಆಗಬಾರದು' ಎಂದು ಹೇಳಿದರು.

'ವಿಭಜಿತ ಓದು ಮತ್ತು ವಿಮರ್ಶೆ ಚರಿತ್ರೆಯ ಕೊಂಡಿಗಳನ್ನು ಕಳಚುತ್ತಿದೆ. ಓದು ವಕಾಲತ್ತು ಅಲ್ಲ. ವಿಮರ್ಶಕರು ವಕೀಲರಲ್ಲ, ಸಾಹಿತಿಗಳು ಕಕ್ಷಿದಾರರಲ್ಲ. ಇಂತಹ ಸಂದರ್ಭದಲ್ಲಿ ಮಾನವೀಯ, ಆರೋಗ್ಯಕರವಾದ ಸಂವಾದ ನಡೆಸಬೇಕು. ನಾನು ದಲಿತ, ಬಂಡಾಯದ ಕುರಿತು ಮಾತನಾಡುವುದಕ್ಕೆ ಪ್ರಾರಂಭಿಸಿದ ಬಳಿಕ ನನ್ನ ಪುಸ್ತಕಗಳನ್ನು ನೋಡುವ ದೃಷ್ಟಿಕೋನವೇ ಬದಲಾಯಿತು' ಎಂದು ಹೇಳಿದರು.

ದಕ್ಷಿಣಾಯನ ಕಾದಂಬರಿ ಜನಾರ್ಪಣೆಗೊಳಿಸಿ ಮಾತನಾಡಿದ ಸಾಹಿತಿ ಜಯಂತ್ ಕಾಯ್ಕಿಣಿ, 'ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಹಲವರು ಯೋಚನೆ ಮಾಡ್ತಾರೆ. ಆದರೆ ಅವರಿಗೆ ಗೊತ್ತಿಲ್ಲ ಪುಸ್ತಕ ಎನ್ನುವುದು ಜೀವನದ ಉದ್ದಕ್ಕೂ ನಮ್ಮ ಜೊತೆ ಇರುವಂತಹ ಒಂದು ಆಸ್ತಿ. ಪುಸ್ತಕದ ಅನುಭವ ನಮ್ಮ ಜೊತೆ ಶಾಶ್ವತವಾಗಿ ಇರುತ್ತದೆ' ಎಂದರು.

ಲೇಖಕರಾದ ಹರೀಶ್ ಕೇರ, ಜೋಗಿ, ಪ್ರಕಾಶ್ ಕಂಬತ್ತಹಳ್ಳಿ, ಪ್ರಭಾ ಕಂಬತ್ತಹಳ್ಳಿ ಉಪಸ್ಥಿತರಿದ್ದರು.

'ಮಹಿಳಾ ಠಾಣೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಿ'

ಬೆಂಗಳೂರು: 'ಬೆಂಗಳೂರು ನಗರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಮಹಿಳಾ ಪೊಲೀಸ್ ಠಾಣೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಗೃಹಸಚಿವ ಜಿ. ಪರಮೇಶ್ವರ ಅವರಿಗೆ ಪತ್ರ ಬರೆದಿರುವ ಅವರು, 'ರಾಜ್ಯದಲ್ಲಿರುವ ಮಹಿಳಾ ಪೊಲೀಸ್ ಠಾಣೆಗಳು ಪೊಲೀಸ್ ಇಲಾಖೆಯ ಬೇರೆ–ಬೇರೆ ಕಟ್ಟಡಗಳು ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಲ್ಲಿ ಅಗತ್ಯ ಮೂಲಸೌಕರ್ಯ ಇಲ್ಲ. ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಸುರಕ್ಷಿತ ಹಾಗೂ ಸುಸಜ್ಜಿತವಾದ ಕೋಣೆ ನಿರ್ಮಿಸಬೇಕು. ಸ್ತನ್ಯಪಾನ ಮಾಡಿಸಲು ಪ್ರತ್ಯೇಕ ಕೊಠಡಿ ನಿರ್ಮಿಸಬೇಕು' ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಿಮೆಂಟ್ ಮಿಕ್ಸಿಂಗ್ ಯಂತ್ರಕ್ಕೆ ಸಿಲುಕಿ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಸಿಮೆಂಟ್ ಮಿಕ್ಸಿಂಗ್ ಮಾಡುವ ಯಂತ್ರಕ್ಕೆ ಸಿಲುಕಿ ಯಂತ್ರದ ಆಪರೇಟರ್ ಮೃತಪಟ್ಟಿರುವ ದುರ್ಘಟನೆ ಹೋಬಳಿಯ ಮಲ್ಲತ್ತಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ.

ಬಿಹಾರದ ವಿಕಾಸ್ ಕುಮಾರ್ (27) ಯಂತ್ರದಲ್ಲಿ ಸಿಲುಕಿ ಮೃತಪಟ್ಟ ಕಾರ್ಮಿಕ.

ಜಲಮಂಡಳಿಯಲ್ಲಿ ಗ್ರಾಹಕರ ನೀರಿನ ಬಿಲ್ ಬಾಕಿ

'ಅಸಲು ಕಟ್ಟಿದರೆ ಬಡ್ಡಿ ಮನ್ನಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀರ್ಘಕಾಲದಿಂದ ನೀರಿನ ಬಿಲ್ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಬೆಂಗಳೂರು ಜಲಮಂಡಳಿ ಸಿಹಿ ಸುದ್ದಿ ನೀಡಿದ್ದು, ಅಸಲು ಪಾವತಿಸಿದರೆ ಬಡ್ಡಿ ಮತ್ತು ದಂಡವನ್ನು ಪೂರ್ತಿ ಮನ್ನಾ ಮಾಡಲಾಗುತ್ತದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಬಾಕಿ ಇರುವ ಮೊತ್ತವನ್ನು ಏಕಕಾಲದಲ್ಲಿ ಪಾವತಿಸುವ ಮೂಲಕ ಈ ಸೌಲಭ್ಯ ಪಡೆಯಬಹುದು. 2026ರ ಜನವರಿ, ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ಮಾತ್ರ ಈ ಯೋಜನೆ ಜಾರಿಯಲ್ಲಿರುತ್ತದೆ ಎಂದು ತಿಳಿಸಿದ್ದಾರೆ.

ಹೈದರಾಬಾದ್‌ನಲ್ಲಿ ಈ ಯೋಜನೆ ಎರಡು ಬಾರಿ ಯಶಸ್ವಿಯಾಗಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಅದೇ ಮಾದರಿಯನ್ನು ಈಗ ಬೆಂಗಳೂರಿನಲ್ಲಿ ಅಳವಡಿಸಿಕೊಳ್ಳಲಾಗಿದೆ.

ಜನವರಿಯಿಂದ ಜಾರಿ

ಗ್ರಾಹಕರು ಅಸಲು ಪಾವತಿಸುತ್ತಿದ್ದಂತೆಯೇ, ತಂತ್ರಾಂಶದಲ್ಲಿ ಬಡ್ಡಿ ಮತ್ತು ದಂಡದ ಮೊತ್ತ ಸ್ವಯಂ ಚಾಲಿತವಾಗಿ ಮನ್ನಾ ಆಗಲಿದೆ ಎಂದು ತಿಳಿಸಿದ್ದಾರೆ.

ಗ್ರಾಹಕರು ನೇರವಾಗಿ ಜಲಮಂಡಳಿಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳಬಹುದು. ಇದಕ್ಕಾಗಿ ಹೊಸ ಆ್ಯಪ್ ಸಿದ್ಧಪಡಿಸುತ್ತಿದ್ದು, ಇದರಲ್ಲಿ ನೋಂದಣಿ ಮಾಡಿಕೊಂಡ ಗ್ರಾಹಕರಿಗೆ ಹಣ ಪಾವತಿಸಲು ಕಾಲಾವಕಾಶ ಮತ್ತು ಅಂತಿಮ ದಿನಾಂಕವನ್ನು ತಿಳಿಸಲಾಗುತ್ತದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಯೋಜನೆ ಜಾರಿಗೊಳಿಸುವ ದಿನಾಂಕವನ್ನು ಘೋಷಿಸಲಾಗುವುದು ಎಂದು ತಿಳಿಸಿದ್ದಾರೆ.

ಕಟ್ಟಡಗಳ ಭೇಟಿ: ಸರ್ಕಾರಿ ಕಟ್ಟಡಗಳು ಮತ್ತು ವಾಣಿಜ್ಯ ಮಳಿಗೆಗಳಿಗೆ ಜಲಮಂಡಳಿಯ ವಿಶೇಷ ತಂಡ ಖುದ್ದಾಗಿ ಭೇಟಿ ನೀಡಿ, ಮಾಹಿತಿ ನೀಡಲಿದೆ. ವಸತಿ ಕಟ್ಟಡಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಅಧಿಕಾರಿಗಳು ಸಂಪರ್ಕಿಸುತ್ತಾರೆ ಹಾಗೂ ವೆಬ್‌ಸೈಟ್ ಮತ್ತು ಆ್ಯಪ್ ಮೂಲಕವೂ ಮುಕ್ತ ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

ಸೆಂಚ್ಯುರಿ ಕ್ಲಬ್
ನಂ.1, ಶೇಷಾದ್ರಿ ರಸ್ತೆ, ಬೆಂಗಳೂರು–560001
ಫೋನ್ : 22214121/22215122

ಸೆಂಚ್ಯುರಿ ಕ್ಲಬ್ ಸದಸ್ಯರ ಗಮನಕ್ಕೆ

ಭಾನುವಾರ 4ನೇ ಜನವರಿ 2026 ರಂದು ವಿಶೇಷ ಸರ್ವಸದಸ್ಯರ ಮಹಾಸಭೆ ಬೆಳಗ್ಗೆ 11.30 ಘಂಟೆಗೆ ಕ್ಲಬ್‌ನ ಆವರಣದಲ್ಲಿ ನಡೆಯಲಿದೆ.
ಸಹಿ/–
ಅಭಿಷೇಕ್ ಬೊಗ್ಗರಮ್ ಅರುಣ್ ಕುಮಾರ್
ಗೌ.ಕಾರ್ಯದರ್ಶಿ

REAL ESTATE SELLING

Residential/ Commercial

Anjanapura

ANJANAPURA SITE for Sale 3rdA Block 3600 Sqft, Commercial BDA NE CORNER @13K, & 40X60 ADJOINING 80' ROAD @18K Per Sqft CALL OWNER RAJESH 9845167755

Sites

Koramangala

KORAMANGALA 8TH Block Commercial property for sale 3200sqft. INR 37.7k/sqft Slightly Negotiable. Whatsapp Message Only 9663766492

PERSONAL

Change of Name

I, VASUDEV Narayanadev Uttharahalli R/o No 190 Manasa Model House 3rd Street Basavanagudi have changed my minor daughter's name from Amulyadev Vasudev Uttharahalli to Amulyadev.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ 'ಪ್ರಜಾವಾಣಿ' ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ಕಸದ ರಾಶಿ ತೆರವುಗೊಳಿಸಿ'

ಪೀಣ್ಯ ಒಂದನೇ ಹಂತದಲ್ಲಿರುವ ಕೇಂದ್ರ ಅಂಗವಿಕಲರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರದಲ್ಲಿ 150ಕ್ಕೂ ಹೆಚ್ಚು ಅಂಗವಿಕಲ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ನಮ್ಮ ಕೇಂದ್ರದ ಮುಂಭಾಗ ಹಾಗೂ ಬಲಬದಿಯಲ್ಲಿ ಪಾಲಿಕೆಯ ಸಿಬ್ಬಂದಿ ಕಸದ ರಾಶಿ ತಂದು ಹಾಕುತ್ತಿದ್ದಾರೆ. ನಂತರ ಆ ಕಸದ ರಾಶಿಗೆ ಬೆಂಕಿ ಹಾಕುತ್ತಿದ್ದು, ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿ ಹಾಕಿರುವ ಕಸದ ರಾಶಿಯನ್ನು ಕೂಡಲೇ ವಿಲೇವಾರಿ ಮಾಡಬೇಕು. ಮುಂದಿನ ದಿನಗಳಲ್ಲಿ ಕೇಂದ್ರದ ಸುತ್ತಮುತ್ತ ಕಸ ಹಾಕದಂತೆ ಕ್ರಮಕೈಗೊಳ್ಳಬೇಕು.

ಶೇಖರ ನಾಯಕ, ಅಂಗವಿಕಲರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರದ ತರಬೇತುದಾರ

'ಮೋರಿಯಲ್ಲಿ ಕಸದ ರಾಶಿ'

ಭುವನೇಶ್ವರಿ ನಗರ ಉದ್ಯಾನದ ಪಕ್ಕದಲ್ಲಿನ ಬನ್ನಪ್ಪ ಮುಖ್ಯ ರಸ್ತೆಯ ಮೋರಿಯು ಕಸ–ಕಡ್ಡಿ ಹಾಗೂ ಕಲ್ಲುಗಳಿಂದ ಭರ್ತಿಯಾಗಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಪಾಲಿಕೆಯ ಸಿಬ್ಬಂದಿ ಮೋರಿಯಲ್ಲಿ ಹಾಕಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು.

ಶಿವಪ್ರಸಾದ್ ಎಸ್., ಭುವನೇಶ್ವರಿನಗರ

'ಪಾದಚಾರಿ ಮಾರ್ಗ ಸರಿಪಡಿಸಿ'

ವೀರಭದ್ರನಗರ ಬಿಡಿಎ ಲೇಔಟ್‌ನಿಂದ ಹನುಮಂತನಗರಕ್ಕೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಮುರಿದುಬಿದ್ದಿದೆ. ಇದರಿಂದ ವೃದ್ಧರು, ಮಹಿಳೆಯರು ಹಾಗೂ ಮಕ್ಕಳ ಓಡಾಟಕ್ಕೆ ಸಮಸ್ಯೆ ಆಗಿದೆ. ಪಾದಚಾರಿ ಮಾರ್ಗದ ಕಾಂಕ್ರೀಟ್ ಸ್ಲ್ಯಾಬ್ ಹಾಳಾಗಿರುವ ಪರಿಣಾಮ ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ.

ಸಿದ್ದರಸ, ವೀರಭದ್ರನಗರ

ಅನಧಿಕೃತ ವಾಹನ ನಿಲುಗಡೆ

ಶ್ರೀನಗರ ಬಸ್ ತಂಗುದಾಣದಿಂದ ಕಾಳಿದಾಸ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಎರಡೂ ಬದಿಯಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲುಗಡೆ ಮಾಡಲಾಗುತ್ತಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಎರಡೂ ಬದಿಯಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಅಪಘಾತಗಳು ಸಂಭವಿಸುತ್ತವೆ. ಶಾಲೆ ಹಾಗೂ ಕಚೇರಿಗೆ ತೆರಳುವವರಿಗೆ ತೊಂದರೆ ಆಗುತ್ತಿದೆ. ಸಂಬಂಧಪಟ್ಟ ಸಂಚಾರ ವಿಭಾಗದ ಪೊಲೀಸರು ವಾಹನಗಳ ನಿಲುಗಡೆಗೆ ಕಡಿವಾಣ ಹಾಕಬೇಕು.

ಸೂರಜ್, ಶ್ರೀನಗರ

ಬಾರ್ ತೆರೆಯಲು ಅವಕಾಶ: ಪ್ರತಿಭಟನೆ

ಬಾರ್ ತೆರೆಯದಂತೆ ಆಗ್ರಹಿಸಿ ಬೃಂದಾವನ ನಗರದ ನಿವಾಸಿಗಳು ಪ್ರತಿಭಟಿಸಿದರು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಅಬಕಾರಿ ನಿಯಮಗಳನ್ನು ಗಾಳಿಗೆ ತೂರಿ ಜನವಸತಿ ಪ್ರದೇಶದಲ್ಲಿ ಬಾರ್ ತೆರೆಯಲು ಅವಕಾಶ ನೀಡಲಾಗಿದೆ ಎಂದು ಆರೋಪಿಸಿ ಬೃಂದಾವನ ನಗರದ ನಿವಾಸಿಗಳು ಅಬಕಾರಿ ಅಧಿಕಾರಿಗಳು ಹಾಗೂ ಬಾರ್ ಮಾಲೀಕರ ವಿರುದ್ಧ ಪ್ರತಿಭಟನೆ ನಡೆಸಿದರು.

ದೊಡ್ಡ ಬಿದರಕಲ್ಲು ವಾರ್ಡ್ ವ್ಯಾಪ್ತಿಯ ತಿಪ್ಪೇನಹಳ್ಳಿ ಮುಖ್ಯರಸ್ತೆಯಲ್ಲಿರುವ ಬೃಂದಾವನ ನಗರ ಎರಡನೇ ಹಂತದಲ್ಲಿ ಬಾರ್ ತೆರೆಯಲು ಸಿದ್ಧತೆ ನಡೆಯುತ್ತಿದೆ. ಬಾರ್ ಆರಂಭಗೊಂಡರೆ ಈ ಭಾಗದಲ್ಲಿ ಹೆಣ್ಣು ಮಕ್ಕಳು ಓಡಾಡದ ಪರಿಸ್ಥಿತಿ ನಿರ್ಮಾಣವಾಗಲಿದೆ. ಪುಂಡರು ಪೋಕರಿಗಳ ಹಾವಳಿ ಹೆಚ್ಚಾಗಲಿದೆ ಎಂದು ಸ್ಥಳೀಯ ನಾಗರಿಕರು ಆರೋಪಿಸಿದರು.

ಬಾರ್ ಆರಂಭಗೊಂಡರೆ ಮಹಿಳೆಯರು ನಿರ್ಭೀತಿಯಿಂದ ಓಡಾಡಲು ತೊಂದರೆಯಾಗಲಿದೆ ಎಂದು ಸ್ಥಳೀಯ ನಿವಾಸಿ ಶ್ಯಾಮಲ ಆತಂಕ ವ್ಯಕ್ತಪಡಿಸಿದರು. ಪಕ್ಕದಲ್ಲೇ ಇತಿಹಾಸ ಪ್ರಸಿದ್ಧ ಕಾಟಮರಾಯನ ಗುಡಿ ಇದೆ. ವಿಶೇಷ ದಿನಗಳಲ್ಲಿ ಸಾವಿರಾರು ಮಂದಿ ಭಕ್ತರು ಸೇರುತ್ತಾರೆ. ಧಾರ್ಮಿಕ ಚಟುವಟಿಕೆಗೆ ಬಾರ್ ತೊಡಕಾಗಲಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಟ್ಟಡ ಅನಧಿಕೃತವಾಗಿ ನಿರ್ಮಾಣಗೊಂಡಿದೆ. ಆ ಕಟ್ಟಡದಲ್ಲಿ ಬಾರ್ ಆರಂಭಿಸಲು ಜನಹಿತ ಮರೆತು, ಹಣಕ್ಕಾಗಿ ಅಧಿಕಾರಿಗಳು ಅನುಮತಿ ನೀಡಿದ್ದಾರೆ ಎಂದು ಸ್ಥಳೀಯ ಮುಖಂಡ ಟ್ರಾವೆಲ್ಸ್ ಮಂಜನಾಥ್ ಆರೋಪಿಸಿದರು. ಬಾರ್ ಆರಂಭಿಸುವ ನಿರ್ಧಾರವನ್ನು ಕೈಬಿಡದಿದ್ದರೆ ಅಧಿಕಾರಿಗಳು ಹಾಗೂ ಬಾರ್ ಮಾಲೀಕರ ವಿರುದ್ಧ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸ್ಥಳೀಯ ನಿವಾಸಿಗಳಾದ ವಾಸು, ವಿಜಯ್ ಕುಮಾರ್, ಮಹೇಶ್ ಕುಮಾರ್, ಶ್ರೀನಿವಾಸ್ ಮೂರ್ತಿ, ನಟರಾಜ್ ಭಾಗವಹಿಸಿದ್ದರು.

ಓಪನ್-ಸೋರ್ಸ್: ದರ್ಶನ್ ಮಾಳಿಗಿಮನಿ ಕೊಡುಗೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ದರ್ಶನ್ ಮಾಳಿಗಿಮನಿ ಓಪನ್‌ಸ್ಟ್ಯಾಕ್‌ಗೆ ಓಪನ್-ಸೋರ್ಸ್ ಕೊಡುಗೆ ನೀಡಿದ್ದಾರೆ.

ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ (ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ) ಅಂತಿಮ ಪದವಿ ವಿದ್ಯಾರ್ಥಿಯಾಗಿರುವ ದರ್ಶನ್ ಮಾಳಿಗಿಮನಿ ಈ ಸಾಧನೆ ಮಾಡಿದ್ದಾರೆ. ಪಿಇಎಸ್ ವಿಶ್ವವಿದ್ಯಾಲಯವು ವಿಶ್ವದಲ್ಲಿ ವ್ಯಾಪಕವಾಗಿ ನಿಯೋಜಿಸಲಾದ ಕ್ಲೌಡ್ ಕಂಪ್ಯೂಟಿಂಗ್ ಪ್ಲಾಟ್‌ಫಾರ್ಮ್‌ಗಳಲ್ಲಿ ಒಂದಾದ ಓಪನ್‌ಸ್ಟ್ಯಾಕ್‌ಗೆ ಜಾಗತಿಕವಾಗಿ ಮಹತ್ವದ ಓಪನ್-ಸೋರ್ಸ್ ಕೊಡುಗೆಯನ್ನು ನೀಡಿದೆ. ದರ್ಶನ್ ಅವರ ಕೊಡುಗೆಯನ್ನು ಅಧಿಕೃತವಾಗಿ ಓಪನ್‌ಸ್ಟ್ಯಾಕ್ ಗ್ಲಾನ್ಸ್ 2024.1ಗೆ ವಿಲೀನಗೊಳಿಸಲಾಗಿದೆ. ಇದು ವಿಶ್ವದಾದ್ಯಂತ ಉತ್ಪಾದನಾ ಓಪನ್‌ಸ್ಟ್ಯಾಕ್ ಕ್ಲೌಡ್ ಪರಿಸರಗಳಿಗೆ ಅಂಗೀಕೃತ ಸ್ಥಾಪನೆ ಮತ್ತು ನಿಯೋಜನೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲಿದೆ. ಓಪನ್‌ಸ್ಟ್ಯಾಕ್ ಜಾಗತಿಕವಾಗಿ ಉದ್ಯಮಗಳು, ವೈಜ್ಞಾನಿಕ ಸಂಸ್ಥೆಗಳು, ಟೆಲಿಕಾಂ ಆಪರೇಟರ್‌ಗಳು ಮತ್ತು ಹೈಪರ್‌ಸ್ಕೇಲ್ ಡೇಟಾ ಕೇಂದ್ರಗಳಲ್ಲಿ ನಿರ್ಣಾಯಕವಾದ ಮೂಲಸೌಕರ್ಯವನ್ನು ಬೆಂಬಲಿಸಲಿದೆ ಎಂದು ಪಿಇಎಸ್ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

20 ಸಾವಿರ ಪೊಲೀಸರ ನಿಯೋಜನೆ

ಹೊಸ ವರ್ಷ ಸಂಭ್ರಮಾಚರಣೆ: ಹತ್ತು ಲಕ್ಷ ಜನ ಸೇರುವ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಭದ್ರತೆಗೆ 20 ಸಾವಿರ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಭಾನುವಾರ ಸಭೆ ನಡೆಸಿದ ಸಚಿವರು, ಭದ್ರತೆಯ ರೂಪುರೇಷೆಗಳ ಕುರಿತು ಪರಾಮರ್ಶೆ ನಡೆಸಿದರು.

ನಗರದಲ್ಲಿ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳು, ಬಂದೋಬಸ್ತ್ ವ್ಯವಸ್ಥೆ ಹಾಗೂ ಸುರಕ್ಷತಾ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು. ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಈ ಬಾರಿ 10 ಲಕ್ಷಕ್ಕೂ ಹೆಚ್ಚು ಜನರು ಸೇರಲಿದ್ದಾರೆ ಎಂದು ಪೊಲೀಸ್ ಇಲಾಖೆ ಅಂದಾಜಿಸಿದೆ. ಎಲ್ಲಾ ರೀತಿಯ ಭದ್ರತಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ 14 ಸಾವಿರ ಪೊಲೀಸರು, 2,500 ಮಂದಿ ಸಂಚಾರ ಪೊಲೀಸರು, 88 ಕೆಎಸ್‌ಆರ್‌ಪಿ ತುಕಡಿ, 21 ಸಿಎಆರ್ ತುಕಡಿ, 266 ಹೊಯ್ಸಳ ವಾಹನ, 250 ಕೋಬ್ರಾ ವಾಹನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಅಲ್ಲದೆ, 400 ಮಂದಿ ಟ್ರಾಫಿಕ್ ವಾರ್ಡನ್‌ಗಳು, ಪೌರ ರಕ್ಷಣೆ ಮತ್ತು ಗೃಹರಕ್ಷಕ ದಳ ಸಿಬ್ಬಂದಿಯನ್ನು ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ. ಜನದಟ್ಟಣೆ ನಿಯಂತ್ರಿಸಲು ಜಲ ಫಿರಂಗಿ ವಾಹನಗಳನ್ನು ಬಳಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಂಭ್ರಮಾಚರಣೆ ನಡೆಯುವ ಪ್ರಮುಖ ಸ್ಥಳಗಳಲ್ಲಿ 250 ಕಡೆ ತಾತ್ಕಾಲಿಕವಾಗಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸುರಕ್ಷಿತ ತಾಣಗಳ ನಿರ್ಮಾಣದ ಜತೆಗೆ ಆಂಬುಲೆನ್ಸ್‌ಗಳನ್ನು ನಿಯೋಜಿಸಲಾಗುತ್ತಿದೆ. ಜನದಟ್ಟಣೆ ಸ್ಥಳಗಳಲ್ಲಿ ಡ್ರೋನ್ ಕ್ಯಾಮೆರಾಗಳ ಮೂಲಕ ನಿಗಾ ವಹಿಸಲಾಗುತ್ತದೆ. ಮುಖಚರ್ಯೆ ಗುರುತಿಸುವ ಕೃತಕ ಬುದ್ಧಿಮತ್ತೆಯ (ಎ.ಐ) ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ. ಈ ಕ್ಯಾಮೆರಾಗಳು ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳ ಮಾಹಿತಿ ಸಂಗ್ರಹಿಸಿ ರವಾನಿಸಲಿವೆ ಎಂದು ವಿವರಿಸಿದರು.

ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸುವ ಬಾರ್ ಮತ್ತು ರೆಸ್ಟೋರೆಂಟ್‌ಗಳು, ಮೆಟ್ರೊ ಕಾರಿಡಾರ್, ಮನರಂಜನಾ ಸ್ಥಳಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಅಗತ್ಯ ಸ್ಥಳಗಳಲ್ಲಿ ವೀಕ್ಷಣಾ ಗೋಪುರ (ವಾಚ್ ಟವರ್) ನಿರ್ಮಿಸಲಾಗಿದೆ. 180 ಕಡೆ ಫೋಕಸ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಅಹಿತಕರ ಘಟನೆ ನಡೆದರೂ ಸಾರ್ವಜನಿಕರು ಕೂಡಲೇ ಮಾಹಿತಿ ನೀಡಲು ಪೊಲೀಸ್ ಆ್ಯಕ್ಸಿಸ್ ಕಂಟ್ರೋಲ್, ವಾಹನ ತಪಾಸಣೆ ವ್ಯವಸ್ಥೆ ಮಾಡಲಾಗಿದೆ. ಟ್ಯಾಕ್ಸಿ ಸೇವೆ ಸಿಗದಿದ್ದರೆ ಜನರ ಅನುಕೂಲಕ್ಕೆ ಎಂಟು ಕಡೆ ಸಾರಿಗೆ ವ್ಯವಸ್ಥೆ ಮಾಡಿದ್ದು, ಜನರು ಸುರಕ್ಷಿತವಾಗಿ ಮನೆಗೆ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಆಂಬುಲೆನ್ಸ್, ವಾಹನಗಳು, ಸಂಚಾರ ಸಮಸ್ಯೆ ಸೇರಿದಂತೆ ಜನರಿಗೆ ಅಗತ್ಯ ಮಾಹಿತಿ ನೀಡಲು ಮೊದಲ ಬಾರಿಗೆ ಕ್ಯೂ ಆರ್ ಕೋಡ್‌ನ 'ಹೀಟ್ ಮ್ಯಾಪ್' ಪರಿಚಯಿಸಲಾಗಿದೆ. ಅತಿ ಹೆಚ್ಚು ಜನ ಸೇರಿರುವ ಸ್ಥಳಗಳನ್ನು ಕೆಂಪು ಬಣ್ಣದಿಂದ ಗುರುತಿಸಲಾಗುತ್ತದೆ. ಹಳದಿ ಬಣ್ಣದಿಂದ ಗುರುತಿಸುವ ಸ್ಥಳಗಳು ಹೆಚ್ಚು ಜನ ಸೇರುತ್ತಿರುವುದನ್ನು ಸೂಚಿಸುತ್ತವೆ. ಹಸಿರು ಬಣ್ಣ ಇರುವುದು ಕಡಿಮೆ ಜನಸಂದಣಿ ಸೂಚಿಸುತ್ತದೆ. ಈ ವ್ಯವಸ್ಥೆಯನ್ನು ಕಮಾಂಡ್ ಸೆಂಟರ್‌ನಿಂದ ನಿರ್ವಹಿಸಲಾಗುತ್ತದೆ. ಇದನ್ನು ಆಧರಿಸಿ ಪೊಲೀಸರು ಜನಸಂದಣಿಯ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಜಂಟಿ ಪೊಲೀಸ್ ಆಯುಕ್ತರಾದ ರಮೇಶ್ ಬಾನೋಥ್, ವಂಶಿಕೃಷ್ಣ, ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಅಜಯ್ ಹಿಲೋರಿ, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ, ಎಲ್ಲ ವಿಭಾಗಗಳ ಡಿಸಿಪಿಗಳು ಹಾಜರಿದ್ದರು.

ಮುಖ್ಯಾಂಶಗಳು

- ಡ್ರೋನ್ ಕ್ಯಾಮೆರಾಗಳ ಮೂಲಕ ನಿಗಾ
- 250 ಕಡೆ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆ
- ಜನರಿಗೆ 8 ಕಡೆ ಸಾರಿಗೆ ವ್ಯವಸ್ಥೆ

ಹೊಸ ವರ್ಷವನ್ನು ಸಾರ್ವಜನಿಕರು ಜವಾಬ್ದಾರಿಯಿಂದ ಆಚರಿಸಬೇಕು. ಭಯೋತ್ಪಾದನಾ ಕೃತ್ಯಗಳ ದೃಷ್ಟಿಯಿಂದಲೂ ಭದ್ರತೆಗೆ ಆದ್ಯತೆ ನೀಡಲಾಗಿದೆ

ಜಿ.ಪರಮೇಶ್ವರ, ಗೃಹ ಸಚಿವ

ನಗರದ ಬ್ರಿಗೇಡ್ ರಸ್ತೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸುವ ಕಾರ್ಯ ನಡೆದಿದೆ ಪ್ರಜಾವಾಣಿ ಚಿತ್ರ ಪುಷ್ಕರ್ ವಿ

ಭದ್ರತಾ ವ್ಯವಸ್ಥೆ, ಸಂಚಾರ ದಟ್ಟನೆ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಕ್ಯೂ ಆರ್ ಕೋಡ್ ಸ್ಟಿಕರ್‌ಗಳನ್ನು ಹಲವೆಡೆ ಅಂಟಿಸಲಾಗಿದೆ

ಜನದಟ್ಟಣೆ ಸ್ಥಳಗಳು

ಹೊಸ ವರ್ಷಾಚರಣೆ ವೇಳೆ ಸಾಮಾನ್ಯವಾಗಿ ಹೆಚ್ಚು ಜನ ಸೇರುತ್ತಾರೆ. ಕಳೆದ ವರ್ಷ 8 ಲಕ್ಷಕ್ಕೂ ಹೆಚ್ಚು ಮಂದಿ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಭಾಗಿಯಾಗಿದ್ದರು. ಹಿಂದಿನ ವರ್ಷಗಳ ಅನುಭವದ ಆಧಾರದಲ್ಲಿ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಇಂದಿರಾನಗರ, ಕೋರಮಂಗಲ, ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ರಸ್ತೆಯನ್ನು ಹೆಚ್ಚು ಜನ ಸೇರುವ ಸ್ಥಳಗಳೆಂದು ಗುರುತಿಸಲಾಗಿದೆ.

'ಡ್ರಗ್ಸ್ ದಂಧೆಗೆ ಕಡಿವಾಣ ಹಾಕಲು ವಿಫಲ'

ಪ್ರಜಾವಾಣಿ ವಾರ್ತೆ

ಅಶೋಕ

ಬೆಂಗಳೂರು: 'ರಾಜ್ಯ ಸರ್ಕಾರ ಡ್ರಗ್ಸ್ ದಂಧೆಗೆ ಕಡಿವಾಣ ಹಾಕುವಲ್ಲಿ ಸಂಪೂರ್ಣ ವಿಫಲವಾಗಿದ್ದು, ರಾಜ್ಯದ ಯುವಕರ ಭವಿಷ್ಯದ ಜತೆ ಚೆಲ್ಲಾಟವಾಡುತ್ತಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಬೆಳಗಾವಿ ಅಧಿವೇಶನದಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ ವೇಳೆ ಡ್ರಗ್ಸ್ ದಂಧೆ ಎಲ್ಲ ರಾಜ್ಯಗಳಲ್ಲೂ ಇದೆ ಎಂದು ಪರಮೇಶ್ವರ ಅವರು ಉಡಾಫೆ ಉತ್ತರ ಕೊಟ್ಟಿದ್ದರು' ಎಂದು ಟೀಕಿಸಿದ್ದಾರೆ.

'ಜುಲೈನಲ್ಲಿ ಮೈಸೂರಿನಲ್ಲಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆ ಹಚ್ಚಿ, ಸುಮಾರು ₹390 ಕೋಟಿ ಮೌಲ್ಯದ 192 ಕೆ.ಜಿ ಮೆಫೆಡ್ರೋನ್ ಡ್ರಗ್ಸ್ ವಶಪಡಿಸಿಕೊಂಡಿದ್ದ ಮಹಾರಾಷ್ಟ್ರ ಪೊಲೀಸರು ಇದೀಗ ಬೆಂಗಳೂರಿನ 3 ಡ್ರಗ್ಸ್ ಫ್ಯಾಕ್ಟರಿ ಮೇಲೆ ದಾಳಿ ನಡೆಸಿ, ₹56 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ. ನಮ್ಮಲ್ಲಿ ನಡೆಯುತ್ತಿರುವ ಡ್ರಗ್ಸ್ ದಂಧೆ ಪತ್ತೆ ಹಚ್ಚಲು, ಡ್ರಗ್ಸ್ ದಂಧೆಕೋರರನ್ನು ಮಟ್ಟಹಾಕಲು ಮಹಾರಾಷ್ಟ್ರ ಪೊಲೀಸರು ಬರಬೇಕಾದರೆ ರಾಜ್ಯದ ಪೊಲೀಸ್ ಮತ್ತು ಗುಪ್ತಚರ ಇಲಾಖೆ ಏನು ಮಾಡುತ್ತಿದೆ' ಎಂದು ಪ್ರಶ್ನಿಸಿದ್ದಾರೆ.

ಸುರಕ್ಷತಾ ಮಾರ್ಗಸೂಚಿ ಹೊರಡಿಸಿದ ಡಿಜಿ–ಐಜಿಪಿ

ಬೆಂಗಳೂರು: ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಭದ್ರತಾ ದೃಷ್ಟಿಯಿಂದ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ.ಸಲೀಂ ಅವರು ಸಾರ್ವಜನಿಕರು ಹಾಗೂ ಪೊಲೀಸ್ ಸಿಬ್ಬಂದಿಗೆ ಸುರಕ್ಷತಾ ಮಾರ್ಗಸೂಚಿ ಹೊರಡಿಸಿದ್ದಾರೆ.

ಸಂಭ್ರಮದ ನಡುವೆ ಜನಸಮೂಹದ ವರ್ತನೆ ಮತ್ತು ಅಪಾಯಗಳು ಹೊಸ ವರ್ಷಾಚರಣೆಯ ಮೇಲೆ ಪರಿಣಾಮ ಬೀರಬಹುದಾಗಿದ್ದು, ಕೆಲವು ಅಂಶಗಳನ್ನು ಗುರುತಿಸಿ ಮಾರ್ಗಸೂಚಿ ನೀಡಲಾಗಿದೆ. ಭದ್ರತೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಈ ಮಾರ್ಗಸೂಚಿಗಳನ್ನು ಪಾಲಿಸಬೇಕೆಂದು ಸಲೀಂ ಆದೇಶಿಸಿದ್ದಾರೆ.

ಸಾರ್ವಜನಿಕರಿಗೆ ಸೂಚನೆ:

- ಮದ್ಯಪಾನವು ವಿವೇಚನಾ ಶಕ್ತಿಯನ್ನು ಕುಗ್ಗಿಸಿ, ಸಂಕೋಚವನ್ನು ದೂರ ಮಾಡುತ್ತದೆ. ಜನಸಮೂಹದ ನಡುವೆ ಇರುವುದರಿಂದ ನಮಗೆ ಏನೂ ಅಪಾಯವಿಲ್ಲ ಎಂಬ ತಪ್ಪು ಕಲ್ಪನೆ ಮೂಡಿಸುವುದರಿಂದ ಚುಡಾಯಿಸುವಿಕೆ (ಈವ್-ಟೀಸಿಂಗ್) ಅಥವಾ ಜಗಳಕ್ಕೆ ಪ್ರಚೋದಿಸಬಹುದು
- ಸಂಗೀತದ ಅತಿಯಾದ ಶಬ್ದ ಮತ್ತು ಪಟಾಕಿ ಸಿಡಿಸುವುದು ಅಪ್ರಜ್ಞಾಪೂರ್ವಕ ವರ್ತನೆಗೆ ಪ್ರಚೋದನೆ ನೀಡಬಹುದು. ವದಂತಿ ಹರಡಿದರೆ ಜನರಲ್ಲಿ ತಕ್ಷಣವೇ ಕೋಪ ಮತ್ತು ಆತಂಕ ಉಂಟಾಗಬಹುದು. ಇಳಿಜಾರು ಪ್ರದೇಶಗಳು, ಮೆಟ್ಟಿಲುಗಳು ಮತ್ತು ಸರಿಯಾದ ಗಾಳಿ–ಬೆಳಕಿಲ್ಲದ ಮಾಲ್‌ಗಳಲ್ಲಿ ಅಪಾಯದ ಸಾಧ್ಯತೆ ಹೆಚ್ಚಿರುವುದರಿಂದ ಸಾರ್ವಜನಿಕರು ವಿವೇಕದಿಂದ ವರ್ತಿಸಬೇಕು

ಪೊಲೀಸರಿಗೆ ನಿರ್ದೇಶನ:

- ಬೀಚ್‌ಗಳು, ಮಾಲ್‌ಗಳು, ಬಾರ್‌ಗಳು ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಸಿಬ್ಬಂದಿ ನಿಯೋಜಿಸಬೇಕು
- ವಾಹನ, ಕಾಲ್ನಡಿಗೆ, ಬೈಕ್ ಮತ್ತು ಅಶ್ವಾರೋಹಿ ಸಿಬ್ಬಂದಿಯ ಗಸ್ತು ಹೆಚ್ಚಿಸಬೇಕು
- ಎಲ್ಲಾ ಚೆಕ್ ಪೋಸ್ಟ್‌ಗಳಲ್ಲಿ ವಿಡಿಯೊ ಚಿತ್ರೀಕರಣ ಕಡ್ಡಾಯ
- ಪಾನಮತ್ತ ಚಾಲನೆ ವಿರುದ್ಧ ಶೂನ್ಯ ಸಹಿಷ್ಣುತೆ ಪಾಲಿಸುವುದು. ತಕ್ಷಣವೇ ಪ್ರಕರಣ ದಾಖಲಿಸಿ ವಾಹನ ಜಪ್ತಿ ಮಾಡಬೇಕು
- ಚುಡಾಯಿಸುವಿಕೆ ತಡೆಗೆ ಮಹಿಳಾ ಪೊಲೀಸ್ ತಂಡಗಳನ್ನು ನಿಯೋಜಿಸುವುದು ಮತ್ತು ಮಹಿಳಾ ಸುರಕ್ಷತಾ ದ್ವೀಪ ಸ್ಥಾಪಿಸುವುದು
- ಡ್ರೋನ್, ಸಿ.ಸಿ.ಟಿ.ವಿ ಕ್ಯಾಮೆರಾ ಮತ್ತು ಕೃತಕ ಬುದ್ಧಿಮತ್ತೆ (ಎ.ಐ) ಬಳಸಿ ಜನಸಂದಣಿಯ ಮೇಲೆ ನಿಗಾ ಇಡುವುದು
- ಧ್ವನಿವರ್ಧಕಗಳ ಮೂಲಕ ಜನರನ್ನು ಶಾಂತಗೊಳಿಸಲು ಅಥವಾ ಮಾರ್ಗ ಬದಲಿಸಲು ಸೂಚನೆ ನೀಡುವುದು
- ಆಂಬುಲೆನ್ಸ್, ಅಗ್ನಿಶಾಮಕ ಮತ್ತು ವೈದ್ಯಕೀಯ ತಂಡಗಳು ಸನ್ನದ್ಧ ಸ್ಥಿತಿಯಲ್ಲಿರಬೇಕು
- ಕರ್ತವ್ಯದಲ್ಲಿರುವ ಸಿಬ್ಬಂದಿ ಕಡ್ಡಾಯವಾಗಿ ಪ್ರತಿಫಲನ ಜಾಕೆಟ್ ಧರಿಸಬೇಕು
- ಜನಸಮೂಹದ ಮೇಲೆ ನಿಗಾ ಇಡಲು ಎತ್ತರದ ವೀಕ್ಷಣಾ ಗೋಪುರ ನಿರ್ಮಿಸಬೇಕು

ಕರ್ನಾಟಕದ ಅತ್ಯಂತ ನೆಚ್ಚಿನ
ಮೆಗಾ ಹಾಲಿಡೇ ಮಾರಾಟ
APNA HOLIDAYS



ಬೆಂಗಳೂರು
ಗಾಂಧಿ ಬಜಾರ್ ರಸ್ತೆ (Opp. RBL Bank), ಬಸವನಗುಡಿ
9164448876
ಡಿ. 27,28 & 29
ವಿಯೆಟ್ನಾಂಗೆ ಉಚಿತ ಪ್ರವಾಸ ಗೆಲ್ಲಿರಿ
90 ದೇಶಗಳು ಮತ್ತು 25 ಭಾರತೀಯ ರಾಜ್ಯಗಳಿಗೆ ಗುಂಪು ಪ್ರವಾಸಗಳು
600 ಕ್ಕೂ ಹೆಚ್ಚು ಸ್ಥಳಗಳಿಗೆ ವಿಶೇಷ ಪ್ಯಾಕೇಜುಗಳು
ಯುರೋಪ್: ಬೆಸ್ಟ್ of ಯುರೋಪ್ | ಸ್ಕ್ಯಾಂಡಿನೇವಿಯಾ & ಬಾಲ್ಟಿಕ್ಸ್ | ಬಾಲ್ಕನ್ಸ್ | ಈಸ್ಟ್ ಯುರೋಪ್ | ಸ್ಪೇನ್ & ಪೋರ್ಚುಗಲ್ | ಯುಕೆ & ಐರ್ಲೆಂಡ್ | ನಾರ್ದರ್ನ್ ಲೈಟ್ಸ್ | ಗ್ರೀಸ್
ವಿದೇಶ: ಸಿಂಗಾಪುರ & ಮಲೇಷ್ಯಾ | ಥೈಲ್ಯಾಂಡ್ | ವಿಯೆಟ್ನಾಂ | ರಷ್ಯಾ | ಆಫ್ರಿಕಾ | ಕೀನ್ಯಾ | ನೇಪಾಳ | ಚೀನಾ | ಆಸ್ಟ್ರೇಲಿಯಾ | ಜಪಾನ್ | ದುಬೈ | ಕೊರಿಯಾ | ಈಜಿಪ್ಟ್ | ಭೂತಾನ್
ಭಾರತ: ವಾರಣಾಸಿ ಮತ್ತು ಅಯೋಧ್ಯೆ | ಗುಜರಾತ್ | ರಾಜಸ್ಥಾನ | ಕಾಶ್ಮೀರ | ಮಧ್ಯಪ್ರದೇಶ | ಲಕ್ಷದ್ವೀಪ | ಶಿಮ್ಲಾ ಮನಾಲಿ | ಅಂಡಮಾನ್ | ಈಶಾನ್ಯ ಭಾರತ | ಕೇರಳ | ಒಡಿಶಾ
ಉಡುಗೊರೆಗಳು ಎಲ್ಲಾ ಪ್ಯಾಕೇಜುಗಳ ಮೇಲೆ
ಲಕ್ಕಿ ಡ್ರಾ ಎಲ್ಲಾ ಸಂದರ್ಶಕರಿಗೆ
CASH BACK ರಿಯಾಯಿತಿಗಳು ರೂ. 20,000 ವರೆಗೆ
8970 55 11 00
2026 ಕರಪತ್ರವನ್ನು ಡೌನ್ಲೋಡ್ ಮಾಡಲು ಈ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ನಗರದಲ್ಲಿ ಇಂದು

ಕುವೆಂಪು ಜಯಂತಿ ವಿಶೇಷ



ಕುವೆಂಪು

ಕುವೆಂಪು ಜನ್ಮದಿನ: ಅಧ್ಯಕ್ಷತೆ: ಎ.ಎಸ್. ನಾಗರಾಜಸ್ವಾಮಿ, ಭಾಗವಹಿಸುವವರು: ನಲ್ಲೂರು ಪ್ರಸಾದ್ ಆರ್.ಕೆ., ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಸಿ.ಕೆ. ರಾಮೇಗೌಡ, ಎಂ. ಪ್ರಕಾಶಮೂರ್ತಿ, ತಾ.ಸಿ. ತಿಮ್ಮಯ್ಯ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಕುವೆಂಪು ಪ್ರತಿಮೆ, ಲಾಲ್‌ಬಾಗ್ ಪಶ್ಚಿಮ ದ್ವಾರ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬೆಳಿಗ್ಗೆ 9

ಕುವೆಂಪು ಜನ್ಮದಿನ: ಅತಿಥಿ: ಪುರುಷೋತ್ತಮ ಬಿಳಿಮಲೆ, ಆಯೋಜನೆ: ಆರ್.ಟಿ. ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಸಸ್ಯಕಾಶಿ ಉದ್ಯಾನ, ಆರ್.ಟಿ. ನಗರ, ಬೆಳಿಗ್ಗೆ 9

ಕುವೆಂಪು ಜನ್ಮದಿನ, ಕರ್ನಾಟಕ ರಾಜ್ಯೋತ್ಸವ, ವಾರ್ಷಿಕೋತ್ಸವ, ಸನ್ಮಾನ ಸಮಾರಂಭ: ಉದ್ಘಾಟನೆ: ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ಎಲ್. ಶ್ರೀನಿವಾಸ್, ಅತಿಥಿಗಳು: ಬಿ. ಕೆಂಚಪ್ಪಗೌಡ, ಯಲುವಹಳ್ಳಿ ಎನ್. ರಮೇಶ್, ರೇಣುಕಾಪ್ರಸಾದ್, ಎಂ. ಪುಟ್ಟಸ್ವಾಮಿ, ಸಿ.ಜಿ. ಗಂಗಾಧರ್, ಡಿ.ಕೆ. ರಮೇಶ್, ಕೆ.ವಿ. ಶ್ರೀಧರ್, ಆಯೋಜನೆ: ಕುವೆಂಪು ಲಲಿತ ಕಲಾ ಸಂಘ, ಸ್ಥಳ: ಕುವೆಂಪು ಕಲಾಕ್ಷೇತ್ರ, ರಾಜ್ಯ ಒಕ್ಕಲಿಗರ ಸಂಘ, ಕೃಷ್ಣರಾಜೇಂದ್ರ ರಸ್ತೆ, ವಿಶ್ವೇಶ್ವರಪುರ, ಬೆಳಿಗ್ಗೆ 9.30ರಿಂದ

ಕುವೆಂಪು ಜಯಂತಿ: ಅಧ್ಯಕ್ಷತೆ: ಎಸ್.ವಿ. ಸುರೇಶ, ಉಪನ್ಯಾಸ: ಸುಭಾಷ್ ರಾಜಮಾನೆ, ಆಯೋಜನೆ: ಕನ್ನಡ ಸಂಘ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಕುವೆಂಪು ಕನ್ನಡ ಸಭಾಂಗಣದ ಬಳಿ, ಜಿಕೆವಿಕೆ, ಬೆಳಿಗ್ಗೆ 9.30

ವಿಶ್ವಮಾನವ ದಿನಾಚರಣೆ, ಪ್ರಸಾರಾಂಗ ಉದ್ಘಾಟನೆ: ಹಿ.ಚಿ. ಬೋರಲಿಂಗಯ್ಯ, ಅತಿಥಿಗಳು: ಉಮಾಶ್ರೀ, ಜಿ. ಪ್ರಶಾಂತ್ ನಾಯಕ್, ಅಧ್ಯಕ್ಷತೆ: ಬಿ. ರಮೇಶ್, ಆಯೋಜನೆ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

ಕುವೆಂಪು ಜಯಂತಿ: ಉದ್ಘಾಟನೆ: ಸಾ.ರಾ. ಗೋವಿಂದು, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಅಶ್ವಥ್ ನಾರಾಯಣಗೌಡ, ಎಂ. ತಿಮ್ಮಯ್ಯ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10.30

ಕುವೆಂಪು ಜಯಂತಿ, ನಾಡಗೀತೆ ಶತಮಾನದ ಸಂಭ್ರಮ: ಅತಿಥಿಗಳು: ಬಸವ ರಮಾನಂದ ಸ್ವಾಮೀಜಿ, ವೂಡೇ ಪಿ. ಕೃಷ್ಣ, ಬಸವರಾಜ ಮಾಲಗತ್ತಿ, ಉಪಸ್ಥಿತಿ: ಮಂಜುನಾಥರಾಜು, ಗಿರೀಶ್ ಲಕ್ಕಣ್ಣ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಶಯ ನುಡಿ: ಎಚ್. ಶಿವರಾಮೇಗೌಡ, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಮಹಾಕವಿ ಕುವೆಂಪು ಪ್ರತಿಮೆ, ಮಲ್ಲೇಶ್ವರ ವೃತ್ತ, ಮಹಾಕವಿ ಕುವೆಂಪು ರಸ್ತೆ, ಬೆಳಿಗ್ಗೆ 10.30

ಕುವೆಂಪು ಜಯಂತಿ ಬೆಳ್ಳಿಹಬ್ಬ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಪುರುಷೋತ್ತಮ ಬಿಳಿಮಲೆ, ಸಿ.ಎಚ್. ಹನುಮಂತರಾಯ, ಸಿ. ಸೋಮಶೇಖರ್, ವಾಟಾಳ್ ನಾಗರಾಜ್, ಸಪ್ತಗಿರಿಗೌಡ, ಆರ್. ಶ್ರೀಧರ್, ಆಯೋಜನೆ: ಕನ್ನಡ ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಸುಖಸಾಗರ ಮಾಲ್, ಮೂರನೇ ಮಹಡಿ ಸಭಾಂಗಣ, ವೈ. ರಾಮಚಂದ್ರ ರಸ್ತೆ, ಗುಬ್ಬಿ ವೀರಣ್ಣ ರಂಗಮಂದಿರದ ರಸ್ತೆ, ಗಾಂಧಿನಗರ, ಬೆಳಿಗ್ಗೆ 11.30

ಕುವೆಂಪು ಜಯಂತಿ ಆಚರಣೆ, ನಿವೃತ್ತರಾದ ಸದಸ್ಯರಿಗೆ ಸನ್ಮಾನ: ಅತಿಥಿ: ಎಸ್. ರಾಮಲಿಂಗೇಶ್ವರ, ಆಯೋಜನೆ: ಎಚ್‌ಎಎಲ್ ರಾಷ್ಟ್ರಕವಿ ಕುವೆಂಪು ಸಂಘ, ಸ್ಥಳ: ಕೇಂದ್ರೀಯ ಕನ್ನಡದ ಸಂಘದ ಕಚೇರಿ, ಹಳೆಯ ಎಸ್‌ಬಿಐ ಕಟ್ಟಡ, ಮಧ್ಯಾಹ್ನ 3.30

'ಆಗು ನೀ ಅನಿಕೇತನ' ಕಾರ್ಯಕ್ರಮಕ್ಕೆ ಚಾಲನೆ: ಜಯರಾಂ ರಾಯಪುರ, ಚಂದ್ರಾ ಅಶ್ವಥ್, ಬಿ.ಆರ್. ಲಕ್ಷ್ಮಣರಾವ್, ಮುನಿಕೃಷ್ಣ, ನಾ. ದಾಮೋದರ ಶೆಟ್ಟಿ, ಎಂ. ನರಸಿಂಹ, ಪಿ.ಎಸ್. ಸದಾಶಿವ, ಗೀತ ಗಾಯನ: ವೈ.ಕೆ. ಮುದ್ದುಕೃಷ್ಣ, ಆನಂದ ಮಾದಲಗೆರೆ, ಸುನೀತಾ ಮುರಳಿ, ಶ್ರೀನಿವಾಸ ಉಡುಪ, ಕೆ.ಎಸ್. ಸುರೇಖಾ, ಪೂರ್ಣಿಮಾ ಮಂಜುನಾಥ್, ಕಿಕ್ಕೇರಿ ಕೃಷ್ಣಮೂರ್ತಿ, ನಾಗಚಂದ್ರಿಕಾ ಭಟ್ ಶಿವಶಂಕರ್, ಸೌಮ್ಯಾ ಉಪಾಧ್ಯಾಯ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 5

'ಬೊಮ್ಮನ ಹಳ್ಳಿಯ ಕಿಂದರಿ ಜೋಗಿ' ಉಪನ್ಯಾಸ: ಕೆ.ವಿ. ನಾರಾಯಣ ಅವರ ಹೊಸ ಓದುಗರಿಗೆ ಕುವೆಂಪು' ಪುಸ್ತಕದ ಕುರಿತು: ವನಮಾಲ ವಿಶ್ವನಾಥ, ಆಯೋಜನೆ ಮತ್ತು ಸ್ಥಳ: ಬೀಟಲ್ ಬುಕ್ ಶಾಪ್, ವಿಜಯನಗರ ಮೆಟ್ರೊ ನಿಲ್ದಾಣದ ಬಳಿ, ಸಂಜೆ 5

'ಕುವೆಂಪು ನಾಟಕ ಲೋಕ' ಉಪನ್ಯಾಸ: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿಯ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ವಿಶ್ವಮಾನವ ದಿನಾಚರಣೆ: ಅತಿಥಿಗಳು: ನರಸಿಂಹನಾಯ್ಕ, ಶ್ರೀನಿವಾಸಪ್ರಭು, ಅಧ್ಯಕ್ಷತೆ: ಜಗದೀಶ್ ಕುಮಾರ್ ಜಿ., 'ನನ್ನ ತೇಜಸ್ವಿ' ನಾಟಕ ಪ್ರದರ್ಶನ: ನಿರ್ದೇಶನ: ಬಿ.ಎಂ. ಗಿರಿರಾಜ, ಆಯೋಜನೆ: ಬಿಇಎಲ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

ವಿನಾಯಕ ಪೆಟ್ಲೆ ಅವರ 'ಇಮ್ಮಡಿ ಪುಲಕೇಶಿ' ಪುಸ್ತಕ ಬಿಡುಗಡೆ, ಕುವೆಂಪು ಜನ್ಮದಿನ: ಉದ್ಘಾಟನೆ: ಎಚ್. ತುಕಾರಾಂ, ವಾದಿರಾಜ್, ಅಧ್ಯಕ್ಷತೆ: ನಾರಾಯಣ ಘಟ್ಟ, ಪುಸ್ತಕ ಬಿಡುಗಡೆ: ತಾ.ಸಿ. ತಿಮ್ಮಯ್ಯ, ಉದಂತ ಶಿವಕುಮಾರ್, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ, ವಾಸುದೇವ ಚಾರಿಟಬಲ್ ಟ್ರಸ್ಟ್, ಸ್ಥಳ: ಕನ್ಯಾಕುಮಾರಿ ವಿದ್ಯಾಸಂಸ್ಥೆ ಸಭಾಂಗಣ, ಬಾಲಗಂಗಾಧರನಗರ, ಸಂಜೆ 6.30

ಕಡಲೆಕಾಯಿ ಪರಿಷೆಗೆ ಸಂಬಂಧಿಸಿದ ಕೆ. ವೆಂಕಟೇಶ್ ಅವರ ಛಾಯಾಚಿತ್ರ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಅವರ ಸಂಸ್ಮರಣೆ: ಸಾನ್ನಿಧ್ಯ: ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ಬಿ. ಪ್ರಸನ್ನ ಕುಮಾರ್, ಅಧ್ಯಕ್ಷತೆ: ಎಸ್.ಎಂ. ಜಯಕರ, ಅತಿಥಿಗಳು: ಕೆ.ಟಿ. ಶಾಂತಲಾ, ಬಿ. ಗೋಪಾಲ್, ಶಿವಶಂಕರ್, ಗಂಗರಾಜು, ಮಹದೇವ ನಾಯಕ್, ನಾಗರಾಜು ದಂಡಿಕೆರೆ, ಆಯೋಜನೆ: ಬಿ. ಬಸವಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆ, ಸ್ಥಳ: ಸೆನೆಟ್ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11.30

ಬೆಂಗಳೂರು ಜಿಲ್ಲಾ ನಾಟಕ ಸಂಭ್ರಮ: 'ಗುಲಾಮನ ಸ್ವಾತಂತ್ರ್ಯ ಯಾತ್ರೆ' ನಾಟಕ ಪ್ರದರ್ಶನ: ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಕಸ್ತೂರಬಾ ಆಪ್ತ ರಂಗಮಂದಿರ, ಮಹಾತ್ಮ ಗಾಂಧಿ ಉದ್ಯಾನ, ಭಾರತ್‌ನಗರ, ಸಂಜೆ 7

ಮಾರ್ಗಶೀರ್ಷೋತ್ಸವ: ಸಂಗೀತ ಕಾರ್ಯಕ್ರಮ: ಬಾನ್ಸುರಿ ವಾದನ: ಪ್ರವೀಣ್ ಗೋಡ್ಖಿಂಡಿ, ಷಡಜ್ ಗೋಡ್ಖಿಂಡಿ, ತಬಲಾ: ಕರಿಣ್ ಗೋಡ್ಖಿಂಡಿ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಸಿ. ಅಶ್ವಥ್ ಅವರ ಜನ್ಮದಿನದ ಅಂಗವಾಗಿ ಸಂಸ್ಕೃತಿ ಫೌಂಡೇಷನ್ ಭಾನುವಾರ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿ. ಅಶ್ವಥ್ ಅವರ ಭಾವಚಿತ್ರಕ್ಕೆ ಚಂದ್ರಾ ಅಶ್ವಥ್, ಆದರ್ಶ ಸುಗಮ ಸಂಗೀತ ಅಕಾಡೆಮಿಯ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ, ಅನಸೂಯ ಪ್ರಸಾದ್, ಸೀಮಾ ರಾಯ್ಕರ್, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ, ಕವಿ ಬಿ.ಆರ್. ಲಕ್ಷ್ಮಣರಾವ್, ನಿರ್ದೇಶಕ ಟಿ.ಎನ್. ಸೀತಾರಾಂ ಅವರು ಪುಷ್ಪನಮನ ಸಲ್ಲಿಸಿದರು

ಅಶ್ಲೀಲ ಸಂದೇಶ: ದರ್ಶನ್ ಪತ್ನಿ ವಿಜಯಲಕ್ಷ್ಮೀ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸೈಬರ್ ಕ್ರೈಂ ಪೊಲೀಸರು ನಟ ದರ್ಶನ್ ಪತ್ನಿ ವಿಜಯಲಕ್ಷ್ಮೀ ಅವರ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ದೂರಿನಲ್ಲಿ ಹೇಳಿರುವ ಅಂಶಗಳನ್ನೇ ವಿಜಯಲಕ್ಷ್ಮೀ ಹೇಳಿಕೆಯಲ್ಲೂ ನೀಡಿದ್ದಾರೆ. ಯಾವ ಖಾತೆಗಳಲ್ಲಿ ಅಶ್ಲೀಲ ಸಂದೇಶ ಹಾಕಲಾಗಿದೆ? ಯಾರು ಅವಹೇಳನಕಾರಿ ಸಂದೇಶ ಹಾಕಿದ್ದಾರೆ ಎಂಬ ಪ್ರಶ್ನೆಗಳನ್ನು ಕೇಳಿ, ಹೇಳಿಕೆ ದಾಖಲಿಸಿದ್ದಾರೆ.

ದೂರು ದಾಖಲಾಗುತ್ತಿದ್ದಂತೆ ಅಶ್ಲೀಲ ಮತ್ತು ಅವಹೇಳನಕಾರಿ ಸಂದೇಶಗಳನ್ನು ಹಾಕಿದ್ದ 18 ಇನ್‌ಸ್ಟಾಗ್ರಾಂ ಖಾತೆಗಳನ್ನು ಅಳಿಸಲಾಗಿದ್ದು, ಇದಕ್ಕೂ ಮೊದಲೇ ಸಂಬಂಧಪಟ್ಟ ಖಾತೆಗಳ ಬಗ್ಗೆ ಪೊಲೀಸರು ಮಾಹಿತಿ ಪಡೆದಿದ್ದರು.

ಅವಹೇಳನಕಾರಿ ಸಂದೇಶಗಳ ಸ್ಕ್ರಿನ್ ಶಾಟ್‌ಗಳ ಸಮೇತ ವಿಜಯಲಕ್ಷ್ಮಿ ದೂರು ನೀಡಿದ್ದರು. ದೂರು ಆಧರಿಸಿ ಯೋಗಿ ಕಿಚ್ಚ, ಮಿ.ಅನಾಥ, ಮಹಿ ಕಿಚ್ಚ, ವಿರಾಟ್ ಕಿಚ್ಚ ಎಂಬ ಖಾತೆ ಸೇರಿ ಹಲವು ಇನ್‌ಸ್ಟಾಗ್ರಾಂ ಖಾತೆಗಳ ವಿರುದ್ಧ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ದಾವಣಗೆರೆಯಲ್ಲಿ ಆಯೋಜಿಸಲಾಗಿದ್ದ ಡೆವಿಲ್ ಸಿನಿಮಾದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ನಾನು ವೇದಿಕೆಯ ಮೇಲೆ ದರ್ಶನ್ ಕುರಿತು ಮಾತನಾಡಿದ್ದೆ. ಯಾರು ಏನೇ ಹೇಳಿದರೂ ತಲೆಕೆಡಿಸಿಕೊಳ್ಳಬೇಡಿ ಎಂದು ಅಭಿಮಾನಿಗಳಿಗೆ ಹೇಳಿದ್ದೆ. ಈ ಬಗ್ಗೆ ಹಲವರು ಸಾಮಾಜಿಕ ಜಾಲತಾಣದ ಮೂಲಕ ನನ್ನ ಹಾಗೂ ನಮ್ಮ ಕುಟುಂಬದ ಕುರಿತು ಅಶ್ಲೀಲ ಸಂದೇಶಗಳನ್ನು ಹಾಕುತ್ತಿದ್ದಾರೆ. ಅದರಿಂದ ನಮ್ಮ ಗೌರವಕ್ಕೆ ಧಕ್ಕೆಯಾಗುತ್ತಿದೆ. ಆದ್ದರಿಂದ ಅಂತಹ ಸಾಮಾಜಿಕ ಜಾಲತಾಣ ಖಾತೆ ಬಳಕೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ವಿಜಯಲಕ್ಷ್ಮೀ ದೂರಿನಲ್ಲಿ ಕೋರಿದ್ದರು.

ಯುವತಿಗೆ ಲೈಂಗಿಕ ಕಿರುಕುಳ: ಆರೋಪಿ ಸೆರೆ

ಬೆಂಗಳೂರು: ಮಹದೇವಪುರದ ಫಿನಿಕ್ಸ್ ಮಾಲ್‌ನಲ್ಲಿ ಯುವತಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಗುವಾಹಟಿಯ ಮನೋಜ್ (27) ಬಂಧಿತ ಆರೋಪಿ. ಮಹದೇವಪುರದಲ್ಲಿ ವಾಸವಾಗಿದ್ದ ಈತ, ಫುಡ್ ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಪಶ್ಚಿಮ ಬಂಗಾಳದ ಸಂತ್ರಸ್ತ ಯುವತಿಯು ಡಿಸೆಂಬರ್ 25ರಂದು ರಾತ್ರಿ ಮಾಲ್‌ಗೆ ಬಂದಿದ್ದರು. ಇದೇ ಮಾಲ್‌ಗೆ ಬಂದಿದ್ದ ಮನೋಜ್, ಜನಜಂಗುಳಿಯ ನಡುವೆ ಯುವತಿಯ ಅಂಗಾಂಗಗಳನ್ನು ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ. ಇದರಿಂದ ಆತಂಕಗೊಂಡ ಯುವತಿ, ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದ ಪೊಲೀಸರಿಗೆ ಮಾಹಿತಿ ನೀಡಿದ್ದರು.

SALE OF USED MACHINES

List of Used Machines

S.No	ASSET CODE	DESCRIPTION	QTY
1	TUS-P&M-LSS-007	SURFACE GRINDING M/C - IV	1
2	TUS-P&M-HMC-009	OKUMA - HMC	1
3	TUS-P&M-TMC-013	PINACHO / FAGOR - TURNING - I	1
4	TUS-P&M-TMC-014	PINACHO / FAGOR - TURNING - II	1
5	TUS-P&M-TMC-015	PINACHO / FANUC - TURNING - I	1
6	TUS-P&M-TMC-016	PINACHO / SIEMENS - TURNING - I	1
7	TUS-P&M-TMC-023	BAR CUTTING M/C - III	1
8	TUS-P&M-GLS-002	GEAR TEETH GRINDING - II	1
9	TUS-P&M-GLS-005	GEAR TEETH GRINDING - V	1
10	TUS-P&M-GLS-006	GEAR TEETH GRINDING - VI	1
11	TUS-P&M-GLS-022	PULLEY HOBBING - I	1
12	TUS-P&M-GLS-033	KEY WAY BROACHING	1
13	TUS-P&M-MAS-001	BALANCING Machine - II	1
14	TUS-P&M-SMS-001	LASER SHEET CUTTING - I (AMADA)	1
15	TUS-P&M-MTS-044	JUNRICH FORK LIFT-5TON	1
16	TUS-P&M-MTS-045	FORK LIFT 1TON (MULTI DIRECTION)	1
17	TUS-P&M-STS-001	JUNRICH FORK LIFT-1TON	1
18	TUS-P&M-MTS-006	VOLVO-PENTA-500KVA D.G SET	1
19	TUS-P&M-SMS-012	POWDER COATING PLANT	1
20	TUS-P&M-SMS-015	GAS TANK BULLET	2
21	TUS-P&M-MTS-073	ETP PLANT	1
22		POWDER COATING GUNS	1
23		OVEN GAS FIXED BURNERS	1

Inspection of machine could be done from 01-01-2026 to 31-01-2026, Contact for Inspection Murali Krishna @ 99023-16567.
Quotation should be sent in Sealed covers through register post to below Address Only.

Tussor Machine Tools
Kindly Attention to Mr. M Muralidharan - Director
SF No 413/2B3, Sengalipalayam Road, Thekkalur Village, Avinashi Taluk, Tiruppur, TAMIL NADU - 641654
-CKNB-

ನಿಮ್ಮ ದೂರನ್ನು ದಾಖಲಿಸಿ ಸಚೇತ್ ಪೋರ್ಟಲ್‌ನಲ್ಲಿ

- ಹಣಕಾಸಿನ ವಂಚನೆಗಳಿಗೆ ಸಂಬಂಧಿಸಿದ ದೂರುಗಳನ್ನು ಸಲ್ಲಿಸಲು ಮಾಹಿತಿ ಮತ್ತು ಮಾರ್ಗದರ್ಶನವನ್ನು ಒದಗಿಸುತ್ತದೆ.
- ಸಚೇತ್ ಪೋರ್ಟಲ್‌ನಲ್ಲಿ ದಾಖಲಾಗುವ ದೂರುಗಳನ್ನು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮರುನಿರ್ದೇಶಿಸಲಾಗುತ್ತದೆ.
- ಬಳಕೆದಾರರು ತಮ್ಮ ದೂರುಗಳನ್ನು ಪೋರ್ಟಲ್‌ನಲ್ಲಿ ಟ್ರ್ಯಾಕ್ ಮಾಡಬಹುದು.

ನಿಮ್ಮ ದೂರುಗಳನ್ನು ಇಲ್ಲಿ ಸಲ್ಲಿಸಿ:
https://sachet.rbi.org.in

ಹೆಚ್ಚಿನ ಮಾಹಿತಿಗಾಗಿ https://rbikehtahai.rbi.org.in/sachetಗೆ ಭೇಟಿ ನೀಡಿ
ಪ್ರತಿಕ್ರಿಯೆ ನೀಡಲು rbikehtahai@rbi.org.inಗೆ ಬರೆಯಿರಿ
ಸಾರ್ವಜನಿಕರ ಹಿತಾಸಕ್ತಿಗಾಗಿ ಜಾರಿಗೊಳಿಸುವವರು
ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in

ಕೇಂದ್ರೀಯ ವಿ.ವಿ. ಅವಕಾಶದ ಹೆಬ್ಬಾಗಿಲು

• ರೋಹಿಣಾಕ್ಷ ಶಿರ್ಲಾಲು

ರಾಜ್ಯದ ಏಕೈಕ ಕೇಂದ್ರೀಯ ವಿಶ್ವವಿದ್ಯಾಲಯವು 'ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು' ಎಂದೇ ಕರೆಯಲಾಗುವ ಕಲಬುರಗಿಯಲ್ಲಿ ಕಾರ್ಯನಿರತವಾಗಿದೆ. ಸುಮಾರು ಒಂದೂವರೆ ದಶಕದ ಹಿಂದೆ ಸ್ಥಾಪನೆಯಾಗಿರುವ ಈ ವಿಶ್ವವಿದ್ಯಾಲಯವು 35 ವಿಭಾಗಗಳನ್ನು ಒಳಗೊಂಡಿದೆ. ವಿವಿಧ ರಾಜ್ಯಗಳ 3 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿದ್ದಾರೆ. ಉನ್ನತ ತರಬೇತಿ ಪಡೆದ 185 ಮಂದಿ ಪೂರ್ಣಕಾಲಿಕ ಪ್ರಾಧ್ಯಾಪಕರು ಅವರ ಶೈಕ್ಷಣಿಕ ಚಟುವಟಿಕೆಗಳಿಗೆ ಬೆನ್ನೆಲುಬಾಗಿದ್ದಾರೆ.

ರಾಷ್ಟ್ರವ್ಯಾಪ್ತಿ ಹೊಂದಿದ ಒಂದು ಸ್ವಾಯತ್ತ ಸಂಸ್ಥೆಯಾಗಿರುವ ವಿಶ್ವವಿದ್ಯಾಲಯವು ವರ್ತಮಾನದ ಔದ್ಯೋಗಿಕ ಮಾರುಕಟ್ಟೆಯ ಅಗತ್ಯಗಳಿಗೆ ತಕ್ಕಂತೆ, ಎನ್‌ಇಪಿ–2020ರ ಅನುಸಾರ ಪಠ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಕೌಶಲ ಆಧಾರಿತ ಹಾಗೂ ಬಹುಶಿಸ್ತೀಯ ಕೋರ್ಸ್‌ಗಳ ಮೂಲಕ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಅಣಿಗೊಳಿಸುತ್ತಿದೆ. ಅಗತ್ಯ ಮೂಲಸೌಕರ್ಯಗಳಾದ ಸುಸಜ್ಜಿತ ಗ್ರಂಥಾಲಯ, ಆಧುನಿಕ ಪ್ರಯೋಗಾಲಯ, ಉತ್ತಮ ಹಾಸ್ಟೆಲ್, ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಸೌಲಭ್ಯಗಳನ್ನು ಒಳಗೊಂಡಿದೆ.

ಅತ್ಯುತ್ತಮ ಸಂಶೋಧನೆಗಾಗಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳ ಜತೆಗೆ ವಿಶ್ವವಿದ್ಯಾಲಯವು ಒಡಂಬಡಿಕೆ ಮಾಡಿಕೊಂಡಿದೆ. ವಿದ್ಯಾರ್ಥಿಗಳಿಗೆ ಇಂಟರ್ನ್‌ಷಿಪ್ ಮೂಲಕ ಪ್ರಾಯೋಗಿಕ ವೃತ್ತಿಕೌಶಲಗಳನ್ನು ಕಲಿಸಲಾಗುತ್ತಿದೆ. ವ್ಯಕ್ತಿತ್ವ ವಿಕಸನಕ್ಕಾಗಿ ಅಗತ್ಯ ತರಬೇತಿ, ಇಂಗ್ಲಿಷ್ ಲ್ಯಾಬ್ ಮೂಲಕ ಭಾಷಾ ಕೌಶಲಗಳನ್ನು ಬೆಳೆಸುತ್ತಾ ಬಹುಶಿಸ್ತೀಯ ಅಧ್ಯಯನ ಮಾದರಿಯನ್ನು ಅಳವಡಿಸಿಕೊಳ್ಳಲಾಗಿದೆ.

ಇ-ಜರ್ನಲ್‌ಗಳು, ಡಿಜಿಟಲ್ ಸಂಪನ್ಮೂಲಗಳು, ಮುದ್ರಿತ ಪುಸ್ತಕಗಳ ಬೃಹತ್ ಸಂಗ್ರಹ, ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗಾಗಿ ಬುಕ್ ಬ್ಯಾಂಕ್, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಪುಸ್ತಕಗಳು ಹಾಗೂ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗಾಗಿ ಬ್ರೈಲ್ ರಿಸೋರ್ಸ್ ಸೆಂಟರ್ ಮೂಲಕ ವಿಪುಲ ಅಧ್ಯಯನ ಸಾಮಗ್ರಿಗಳು ಇಲ್ಲಿನ ಅತ್ಯಾಧುನಿಕ ಗ್ರಂಥಾಲಯದಲ್ಲಿವೆ.

ನವೀನ ಆವಿಷ್ಕಾರಗಳನ್ನು ಸಾಧ್ಯವಾಗಿಸುವ ಸಫಿಸ್ಟಿಕೇಟೆಡ್ ಇನ್‌ಸ್ಟ್ರುಮೆಂಟೇಷನ್ ಸೆಂಟರ್ (ಎಸ್‌ಐಸಿ) ಅನ್ನು ಸ್ಥಾಪಿಸಲಾಗಿದೆ. ಇದು ಸಂಶೋಧಕರಿಗೆ ಉನ್ನತ ಮಟ್ಟದ ಉಪಕರಣಗಳನ್ನು ಒದಗಿಸಿ, ವಿಜ್ಞಾನ, ಎಂಜಿನಿಯರಿಂಗ್ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಳವಾದ ಸಂಶೋಧನೆಗಳಿಗೆ ದೃಢವಾದ ತಳಪಾಯವನ್ನು ಹಾಕಲು ಪೂರಕವಾಗಿದೆ. ಇಂತಹ ಒಂದು ಪ್ರಮುಖ ಸಂಸ್ಥೆಯಲ್ಲಿ ಅಧ್ಯಯನ ಮಾಡುವ ಅವಕಾಶವನ್ನು ಕರ್ನಾಟಕದ ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕಾಗಿದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ಕನಿಷ್ಠ ಶುಲ್ಕ ಗರಿಷ್ಠ ಸೌಲಭ್ಯ

ಹಾಸ್ಟೆಲ್ ವ್ಯವಸ್ಥೆ, ಆಧುನಿಕ ಪ್ರಯೋಗಾಲಯಗಳನ್ನು ಒಳಗೊಂಡ ಶಿಕ್ಷಣವನ್ನು ಕನಿಷ್ಠ ವಾರ್ಷಿಕ ಶುಲ್ಕದೊಂದಿಗೆ ನೀಡಲಾಗುತ್ತಿದೆ. ರಾಜ್ಯದ ಅನೇಕ ಸರ್ಕಾರಿ ವಿಶ್ವವಿದ್ಯಾಲಯಗಳು ಅಥವಾ ಖಾಸಗಿ ಸಂಸ್ಥೆಗಳಿಗೆ ಹೋಲಿಸಿದರೆ ಇಲ್ಲಿ ಶುಲ್ಕವು ಗಣನೀಯವಾಗಿ ಕಡಿಮೆ ಇರುವುದರಿಂದ ಸಂಸ್ಥೆಯು ಬಡವರ್ಗದ ವಿದ್ಯಾರ್ಥಿಗಳಿಗೂ ವರದಾನವಾಗಿದೆ. ಸರ್ಕಾರದ ನೀತಿಯ ಅನ್ವಯ ಶುಲ್ಕ ವಿನಾಯಿತಿಯ ಸೌಲಭ್ಯ ಪಡೆಯಲು ಅರ್ಹರಾದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಸಂಪೂರ್ಣ ಅನುಕೂಲಗಳನ್ನು ಒದಗಿಸುತ್ತದೆ.

ಪ್ರವೇಶ ಹೇಗೆ?

ಸ್ನಾತಕೋತ್ತರ ಪದವಿ

ದೇಶದ ಎಲ್ಲಾ 56 ಕೇಂದ್ರೀಯ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಏಕೀಕೃತ ಕೇಂದ್ರೀಯ ವಿ.ವಿ ಪ್ರವೇಶ ಪರೀಕ್ಷೆಯ (ಪಿಜಿಸಿಯುಇಟಿ) ಮೂಲಕವೇ ಪ್ರವೇಶ ಪ್ರಕ್ರಿಯೆ ನಡೆಯುತ್ತದೆ. ಈ ಪರೀಕ್ಷೆಯನ್ನು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ನಡೆಸುತ್ತದೆ. 2026-27ನೇ ಸಾಲಿನ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಲಾಗುತ್ತಿದೆ. ಪ್ರಸ್ತುತ ಪದವಿಯ 5 ಅಥವಾ 6ನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜನವರಿ 14 ಅರ್ಜಿ ಸಲ್ಲಿಕೆಗೆ ಕೊನೆಯ ದಿನ.

ಇಲ್ಲಿ ಅರ್ಜಿ ಸಲ್ಲಿಸಿ: https://www.cuk.ac.in/ ಅಥವಾ https://exams.nta.nic.in/cuet-pg/

ಮಾರ್ಚ್ ತಿಂಗಳಲ್ಲಿ ಪ್ರವೇಶ ಪರೀಕ್ಷೆ ಇರುತ್ತದೆ. ರಾಜ್ಯದಲ್ಲಿ ಮಂಗಳೂರು, ಉಡುಪಿ, ಶಿವಮೊಗ್ಗ, ಬೆಂಗಳೂರು, ಮೈಸೂರು, ಕಲಬುರಗಿ, ಹುಬ್ಬಳ್ಳಿ, ಧಾರವಾಡ, ಬಳ್ಳಾರಿ, ತುಮಕೂರು, ದಾವಣಗೆರೆ, ಚಿಕ್ಕಮಗಳೂರು, ಬೆಳಗಾವಿ, ಹಾಸನ ಮೊದಲಾದ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆ ನಡೆಯಲಿದೆ.

ಯಾವೆಲ್ಲ ಕೋರ್ಸ್ ಲಭ್ಯ?: ಎಂ.ಎ., ಎಂ.ಎಸ್ಸಿ., ಎಂ.ಕಾಂ., ಎಂ.ಬಿ.ಎ., ಎಂ.ಎಸ್.ಡಬ್ಲ್ಯು., ಎಂ.ಸಿ.ಎ., ಎಲ್.ಎಲ್.ಎಂ., ಎಂ.ಇಡಿ., ಎಂ.ಟೆಕ್., ಎಂ.ಪಿ.ಎ. (ಮಾಸ್ಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್) ವಿಭಾಗಗಳಲ್ಲಿ ವಿವಿಧ ಕೋರ್ಸ್‌ಗಳು ಲಭ್ಯ ಇವೆ.

ಪದವಿ ಕೋರ್ಸ್

16 ಪದವಿ ಕೋರ್ಸ್‌ಗಳು ಲಭ್ಯವಿದ್ದು, ಇವುಗಳ ಪ್ರವೇಶ ಪರೀಕ್ಷೆಯನ್ನೂ ಎನ್‌ಟಿಎ ಆಯೋಜಿಸುತ್ತದೆ. ಸಾಮಾನ್ಯವಾಗಿ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಅರ್ಜಿ ಆಹ್ವಾನಿಸಲಾಗುತ್ತದೆ.
ದ್ವಿತೀಯ ಪಿಯುಸಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಎನ್‌ಇಪಿ–2020ರ ಅನುಸಾರ ರೂಪಿಸಲಾದ ಬಹುಶಿಸ್ತೀಯ ನವೀನ ಪಠ್ಯಕ್ರಮದಲ್ಲಿ ಪದವಿಯನ್ನು ಪೂರೈಸಬಹುದು.

ಯಾವ ವಿಭಾಗ?: ಬಿ.ಎ., ಬಿ.ಎಸ್ಸಿ., ಬಿ.ಇಡಿ., ಬಿ.ಟೆಕ್., ಬಿಬಿಎ ಹಾಗೂ ಸಮಾಜಕಾರ್ಯ, ಎಲ್.ಎಲ್.ಬಿ. ವಿಭಾಗಗಳಲ್ಲಿ ವಿವಿಧ ಕೋರ್ಸ್‌ಗಳು ಲಭ್ಯ ಇವೆ.

ಪಿಎಚ್.ಡಿ. ಅಧ್ಯಯನ

ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳಲ್ಲೂ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶವಿದೆ. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಎರಡು ಬಾರಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗುತ್ತದೆ. ಜೆಆರ್‌ಎಫ್ ಅಥವಾ ಯುಜಿಸಿ–ಎನ್‌ಇಟಿ ಪೂರೈಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
ಪ್ರತಿ ವಿಭಾಗವೂ ಪ್ರವೇಶ ಪರೀಕ್ಷೆ ನಡೆಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಯಾವುದೇ ಫೆಲೋಷಿಪ್ ಇಲ್ಲದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವೇ ಮಾಸಿಕ ಕನಿಷ್ಠ ಫೆಲೋಷಿಪ್ ನೀಡಿ ಸಂಶೋಧನೆಗೆ ಪ್ರೋತ್ಸಾಹಿಸುತ್ತದೆ.

ವಿದ್ಯಾರ್ಥಿ ವೇತನ ಕೈಪಿಡಿ

ಸೆನ್ಸೊಡೈನ್ ಶೈನಿಂಗ್ ಸ್ಟಾರ್

ಸೆನ್ಸೊಡೈನ್ ಟೂತ್‌ಪೇಸ್ಟ್ ತಯಾರಕ ಕಂಪನಿಯಾದ ಹ್ಯಾಲಿಯಾನ್ ಇಂಡಿಯಾ, ಆರ್ಥಿಕವಾಗಿ ಹಿಂದುಳಿದ ದಂತ ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಿದೆ.
ಅರ್ಹತೆ: ಭಾರತೀಯ ವಿದ್ಯಾರ್ಥಿಗಳಾಗಿರಬೇಕು. ದಂತ ವೈದ್ಯಕೀಯ ಕೋರ್ಸ್‌ನ (ಬಿಡಿಎಸ್) ಮೊದಲ ವರ್ಷದಲ್ಲಿ ಇರಬೇಕು. ಸರ್ಕಾರಿ ಕಾಲೇಜಿನಲ್ಲಿ ಅಥವಾ ಅನುದಾನಿತ ಕಾಲೇಜಿನಲ್ಲಿ ಸರ್ಕಾರಿ ಸೀಟು ಪಡೆದವರಾಗಿರಬೇಕು. ಹಿಂದಿನ ತರಗತಿ ಅಥವಾ ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲ ಮೂಲಗಳಿಂದಲೂ ₹ 8 ಲಕ್ಷಕ್ಕಿಂತ ಹೆಚ್ಚು ಇರಬಾರದು. ಪ್ರಸ್ತುತ ಯಾವುದೇ ರೀತಿಯ ವಿದ್ಯಾರ್ಥಿವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ.
ಆರ್ಥಿಕ ನೆರವು: 4 ವರ್ಷಗಳವರೆಗೆ ಪ್ರತಿವರ್ಷ ₹ 50,000 ವಿದ್ಯಾರ್ಥಿವೇತನ ನೀಡಲಾಗುತ್ತದೆ.
ಅರ್ಜಿ ಸಲ್ಲಿಸಲು ಕೊನೇ ದಿನ: 20-01-2026
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಹೆಚ್ಚಿನ ಮಾಹಿತಿಗೆ: www.b4s.in/praja/SSPPS5

ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

ಹೆಣ್ಣಾಗುತ್ತಿದ್ದಾನೆ ಮಗ ಏನು ಮಾಡಲಿ ನಾನೀಗ?

• 16 ವರ್ಷದ ನನ್ನ ಮಗ ಹುಡುಗಿಯಾಗಲು ಇಚ್ಛಿಸುತ್ತಿದ್ದಾನೆ ಮತ್ತು ಹಾಗೆಯೇ ಬದಲಾಗುತ್ತಿದ್ದಾನೆ. ಇದಕ್ಕೆ ಹಾರ್ಮೋನಿನ ಬದಲಾವಣೆ ಕಾರಣ ಎಂದು ವೈದ್ಯರು ಹೇಳಿದ್ದಾರೆ. ಮನೆಯಲ್ಲಿ ನನ್ನ ಹೆಂಡತಿ, ಮಗಳು ಮತ್ತು ನನ್ನ ತಾಯಿ–ತಂದೆ ಇದನ್ನು ಒಪ್ಪಲು ತಯಾರಿಲ್ಲ. ನೆಂಟರಿಷ್ಟರ ನಡುವೆ ನಮಗೆ ಭಾರಿ ಮುಜುಗರ ಆಗುತ್ತಿದೆ. ಓದಿನಲ್ಲಿ ಬಹಳ ಮುಂದಿದ್ದ ಹುಡುಗ ಈಗ ಈ ಸಮಸ್ಯೆಯಿಂದ ಒದ್ದಾಡುತ್ತಿದ್ದಾನೆ. ಹೇಗಾದರೂ ಮಾಡಿ ಹುಡುಗಿಯಾಗಲು ಬಿಡಿ ಎಂದು ಪ್ರತಿದಿನ ನನ್ನ ಮತ್ತು ಅವನ ತಾಯಿ ಬಳಿ ಅಲವತ್ತುಕೊಳ್ಳುತ್ತಾನೆ. 'ಹುಡುಗಿಯಾಗಿಯೇ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತೇನೆ. ಆಗ ಮುಂದೆ ಎಲ್ಲ ಸರ್ಟಿಫಿಕೇಟ್‌ಗಳಲ್ಲೂ ಹುಡುಗಿಯಾಗಿಯೇ ಉಳಿಯಲು ಸಾಧ್ಯವಾಗುತ್ತದೆ. ಅದರಿಂದ ಹೆಸರನ್ನಾಗಲಿ ಅಥವಾ ಅದರಲ್ಲಿ ನಮೂದಿಸಿದ ಲಿಂಗವನ್ನಾಗಲಿ ಬದಲಿಸಬೇಕಾದ ಅಗತ್ಯ ಬರದು' ಎನ್ನುತ್ತಾನೆ. ಸಾಮಾಜಿಕ, ಕೌಟುಂಬಿಕ ಒತ್ತಡಗಳ ನಡುವೆ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. 11 ವರ್ಷಗಳವರೆಗೆ ಸರಿಯಾಗಿಯೇ ಇದ್ದ ಮಗನ ವರ್ತನೆಯಲ್ಲಿ ಏಕಾಏಕಿ ಬದಲಾವಣೆ ಏಕಾಯಿತು? ಈ ಹಾರ್ಮೋನ್‌ಗಳು ಹೀಗೇಕೆ ಬದಲಾಗಿ ಎಲ್ಲರ ಬದುಕನ್ನೂ ತೊಂದರೆಗೆ ಸಿಲುಕಿಸುತ್ತವೆ? ಏನು ಮಾಡಿದರೆ ಮಗ ಮೊದಲಿನಂತೆ ಆಗಬಹುದು ಅಥವಾ ಈಗಿರುವ ಸಮಸ್ಯೆಯನ್ನು ಸೂಕ್ತವಾಗಿ ನಿಭಾಯಿಸಿ ಅವನು ಏಳ್ಗೆ ಸಾಧಿಸುವ ದಿಸೆಯಲ್ಲಿ ನಾವು ಯಾವೆಲ್ಲ ಕ್ರಮ ತೆಗೆದುಕೊಳ್ಳಬಹುದು ತಿಳಿಸುವಿರಾ ಸರ್? –ಕರ್ಣಾನಂದ, ಯಲಚಿಗೋಡು

ನಿಮ್ಮೆಲ್ಲರ ಮಾನಸಿಕ ಬೇಗುದಿ ನನಗೆ ಅರ್ಥವಾಗುತ್ತದೆ. ಇದು ಬಹಳ ಸಂಕೀರ್ಣವಾದ, ಕೆಲವರ ಜೀವನದಲ್ಲಿ ಮಾತ್ರ ಬರುವ ಸಂದಿಗ್ಧ ಸ್ಥಿತಿ. ಇಂಥದ್ದಕ್ಕೆಲ್ಲ ಸುಲಭದಲ್ಲಿ ಪರಿಹಾರವನ್ನು ಸೂಚಿಸುವುದು ಸಾಧ್ಯವಾಗಲಾರದು ಅಥವಾ ಬಹಳ ದೀರ್ಘವಾದ ಸಮಯ ಹಾಗೂ ಸಂವಹನ ಬೇಕಾಗಬಹುದು.

ನಿಜ, ಇದು ಹದಿಹರೆಯದಲ್ಲಿ ಕೆಲವು ಹುಡುಗರು ಅಥವಾ ಹುಡುಗಿಯರ ದೇಹದಲ್ಲಿ ಸೃಜಿಸುವ ಹಾರ್ಮೋನಿನಲ್ಲಿ ಆಗುವ ತೀವ್ರ ಬದಲಾವಣೆಯಿಂದ ಅನಿಯಂತ್ರಿತವಾಗಿ ಉಂಟಾಗುವ ಸಮಸ್ಯೆ. ಸಾಮಾನ್ಯವಾಗಿ ಹಾರ್ಮೋನಿನಲ್ಲಾಗುವ ಬದಲಾವಣೆಯಿಂದ ಹುಡುಗ ಗಂಡಾಗಿಯೂ ಹುಡುಗಿ ಹೆಣ್ಣಾಗಿಯೂ ದೈಹಿಕವಾಗಿ, ಮಾನಸಿಕವಾಗಿ ಬದಲಾಗುತ್ತಾರೆ. ಈ ಪ್ರಕೃತಿ ಸಹಜ ಕ್ರಿಯೆಗೆ ನಾವೆಲ್ಲ ಸಂಭ್ರಮಿಸುತ್ತೇವೆ.

ಆದರೆ, ಹದಿಹರೆಯದಲ್ಲಿ ಮಗ ಹೆಣ್ಣಾಗುವ ಹಾದಿಯಲ್ಲಿ ಅಥವಾ ಮಗಳು ಗಂಡಾಗುವ ಹಾದಿಯಲ್ಲಿ ಹೊರಡುವುದು ಮನೆಯವರಿಗೆ, ಪಾಲಕರಿಗೆ ಅಸಹನೀಯವಾಗುತ್ತದೆ. ವಿಪರೀತ ನೋವಾಗುತ್ತದೆ. ಸುಲಭವಾಗಿ ಅದನ್ನು ಸ್ವೀಕರಿಸಲು ಸಾಧ್ಯವಾಗುವುದಿಲ್ಲ. ಅದು ವಿಕೃತಿ ಎಂದು ನಮಗೆ ಅನ್ನಿಸುತ್ತದೆ. ಹಾಗಂತ ನಿಸರ್ಗದ ವೈಚಿತ್ರ್ಯಗಳಿಗೆ, ಪ್ರಕೃತಿಯ ನಿಯಮಗಳಿಗೆ ನಮ್ಮಿಂದ ಏನೊಂದು ಬದಲಾವಣೆಯನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲವನ್ನೂ ಬಂದಂತೆ ಎದುರಿಸುವುದೇ ಜೀವನದಲ್ಲಿ ನಮಗಿರುವ ಸಾಧ್ಯತೆ. ಬಹುಶಃ ನಮ್ಮ ಬೆಳವಣಿಗೆಯ ಸಮಯದಲ್ಲಿಯೂ ನಮ್ಮೊಳಗಿನ ಹಾರ್ಮೋನಿನಲ್ಲಿ ಹೀಗೇನಾದರೂ ವೈಪರೀತ್ಯಗಳು ಆಗಿರುತ್ತಿದ್ದರೆ ನಾವೂ ಹೇಗೆ ಹೇಗೋ ಆಗಿರುತ್ತಿದ್ದೆವು, ಅಲ್ಲವೇ?

ನಿಮ್ಮ ಮಗ ಸಹ ಯಾರೊಂದಿಗೂ ಹೇಳಿಕೊಳ್ಳಲಾಗದಷ್ಟು, ಅರ್ಥ ಮಾಡಿಕೊಳ್ಳಲಾರದಷ್ಟು, ತನ್ನಿಂದ ನಿಯಂತ್ರಿಸಿಕೊಳ್ಳಲಾರದಷ್ಟು ಮಾನಸಿಕವಾಗಿ, ದೈಹಿಕವಾಗಿ ಯಾತನೆಯನ್ನು ಅನುಭವಿಸುತ್ತಿರಬಹುದು. ಅವನಲ್ಲಿ ಆಗುತ್ತಿರುವ ಹಾರ್ಮೋನಿನ ವಿಚಿತ್ರ ಬದಲಾವಣೆಗಳಿಂದ ಅವನು ಹಾಗೆ ವರ್ತಿಸುತ್ತಿರಬಹುದು. ನಿಮ್ಮ ಮಗುವಾಗಿ ಹುಟ್ಟಿದ ಮಾತ್ರಕ್ಕೆ ಅವನನ್ನು ನೀವು ಶಿಕ್ಷಿಸಬಾರದು, ಹೀಯಾಳಿಸಬಾರದು, ಹೊಡೆದು ಹಿಂಸಿಸಬಾರದು. ಅವನನ್ನು ಪ್ರೀತಿಸಬೇಕು, ಸಂತೈಸಬೇಕು. ಅವನಿಗೆ ಬದುಕಿನ ಬಗ್ಗೆ ಭರವಸೆ ಬರುವಂತೆ ವ್ಯವಹರಿಸಬೇಕು. ದೈಹಿಕ ಬದಲಾವಣೆಯಿಂದ ಅವನೊಳಗಿನ ಕರ್ತೃತ್ವ ಶಕ್ತಿಯಾಗಲೀ ಬುದ್ಧಿವಂತಿಕೆಯಾಗಲೀ ಕ್ರಿಯಾಶೀಲತೆಯಾಗಲೀ ಬದಲಾಗುವುದಿಲ್ಲ ಅಥವಾ ಕಡಿಮೆಯಾಗುವುದಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

ಮಗುವನ್ನು ಪಾಲಕರಷ್ಟು ಚೆನ್ನಾಗಿ ಬೇರೆಯವರು ಅರ್ಥಮಾಡಿಕೊಳ್ಳಲಾರರು. ಇಂಥ ಸಂದರ್ಭದಲ್ಲಿ ನೀವು ಅವನಿಗೆ ಎಂದಿನಂತೆ ಆಸರೆಯಾಗಿ ನಿಲ್ಲಬೇಕು. ಅವನಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಸಹಕರಿಸಬೇಕು. ಅವನು ಮುಂದೆ ಗಂಡಾಗಲಿ ಅಥವಾ ಹೆಣ್ಣಾಗಲಿ ಎಂದಿಗೂ ಅದು ನಿಮ್ಮ ಮಗು. ಅದು ಸತ್ಯ. ಅವನು ಮುಂದೆ ಒಬ್ಬ ಸಮಾಜಮುಖಿ ವ್ಯಕ್ತಿಯಾಗಿ ಬೆಳೆದು ದೇಶಕ್ಕೆ ಉಪಯೋಗವಾಗಬೇಕು. ಅಂಥ ವ್ಯಕ್ತಿಯನ್ನಾಗಿ ಬೆಳೆಸುವ ಜವಾಬ್ದಾರಿ ನಿಮ್ಮದು. ಅದಕ್ಕೆ ಸಹಕರಿಸುವುದು ಉಳಿದವರ ಕರ್ತವ್ಯವಾಗಿರುತ್ತದೆ. ಮನೋದೈಹಿಕವಾಗಿ ಬದಲಾಗುತ್ತಿರುವ ಅವನನ್ನು ಬೇರೆ ಥೆರಪಿಗಳಿಂದ ಬದಲಾಯಿಸಲು ಪ್ರಯತ್ನಿಸುವುದರಿಂದ ಅವನಿಗೂ ಕಷ್ಟ, ನಿಮಗೂ ಕಷ್ಟ, ಇಬ್ಬರಿಗೂ ನಷ್ಟ. ಉಳಿದವರ ಅನಿಸಿಕೆಗಳಿಗೆ ನೀವು ತಲೆಕೆಡಿಸಿಕೊಳ್ಳದೆ ನಿಮ್ಮ ಮಗನ ಉಜ್ವಲ ಭವಿಷ್ಯಕ್ಕಾಗಿ ಪ್ರಯತ್ನಿಸುವುದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ. ಇನ್ನೂ ನಿಮಗೆ ಸಮಾಧಾನ ಆಗದಿದ್ದರೆ, ಮೂವರೂ ನನ್ನಲ್ಲಿ ಕೆಲವು ಸೆಷನ್‌ಗಳಿಗಾಗಿ ಬರಬಹುದು ಅಥವಾ ತಜ್ಞರನ್ನು ಭೇಟಿಯಾಗಬಹುದು.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಕಾಲೇಜ್ ರೆಪ್ರೆಸೆಂಟೆಟಿವ್ (ಮಾರ್ಕೆಟಿಂಗ್): ಟ್ರಿಪಲ್ ಒನ್ ಸಲ್ಯೂಷನ್ಸ್ ಸಂಸ್ಥೆಯು ಕಾಲೇಜ್ ರೆಪ್ರೆಸೆಂಟೆಟಿವ್ (ಮಾರ್ಕೆಟಿಂಗ್) ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಮಾರ್ಕೆಟಿಂಗ್ ಕಾರ್ಯತಂತ್ರಗಳನ್ನು ಅರಿತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜನವರಿ 21 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 3,000–₹ 15,000. ಸಂಪರ್ಕ: https://tinyurl.com/y9wu9a2t.

ಕಮ್ಯುನಿಟಿ ಮ್ಯಾನೇಜ್‌ಮೆಂಟ್: ಪಾರ್ಥ್ ಫೌಂಡೇಷನ್ ಸಂಸ್ಥೆಯು ಕಮ್ಯುನಿಟಿ ಮ್ಯಾನೇಜ್‌ಮೆಂಟ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಅಡ್ವಾನ್ಸ್ಡ್ ಎಕ್ಸೆಲ್, ಬಿಸಿನೆಸ್ ಅನಾಲಿಸಿಸ್, ಬಿಸಿನೆಸ್ ರಿಸರ್ಚ್, ಪರಿಣಾಮಕಾರಿ ಸಂವಹನ, ಇಂಗ್ಲಿಷ್‌ನಲ್ಲಿ ಬರೆಯುವ ಮತ್ತು ಮಾತನಾಡುವ ಸಾಮರ್ಥ್ಯ, ಎಂಎಸ್– ಎಕ್ಸೆಲ್, ಎಂಎಸ್– ಆಫೀಸ್, ಎಂಎಸ್– ವರ್ಡ್, ನೆಟ್‌ವರ್ಕಿಂಗ್, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಮತ್ತು ಟೈಮ್ ಮ್ಯಾನೇಜ್‌ಮೆಂಟ್ ಬಗ್ಗೆ ಜ್ಞಾನ ಇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜನವರಿ 21 ಅರ್ಜಿ ಸಲ್ಲಿಕೆಗೆ ಕೊನೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 1,500–₹ 15,000.
ಸಂಪರ್ಕ: https://tinyurl.com/mr3mzr2c.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಪ್ರಶ್ನೋತ್ತರ:–

53) ಪುಟ್ಟಬಸಪ್ಪ ಬಂಡುಕೋರರ ಸರ್ಕಾರ ರಚಿಸಿ ಯಾವೆಲ್ಲಾ ನಿರ್ಣಯಗಳನ್ನು ತೆಗೆದುಕೊಂಡನು?

ಉತ್ತರ:– ಪುಟ್ಟಬಸಪ್ಪ ಬಂಡುಕೋರರನ್ನು ಸಂಘಟಿಸಿ ನಂತರ. ಬಂಡುಕೋರರ ಸರ್ಕಾರ ಸ್ಥಾಪನೆ ಮಾಡಿ ತಂಬಾಕು ಮತ್ತು ಉಪ್ಪಿನ ಮೇಲಿನ ಸುಂಕವನ್ನು ರದ್ದು ಮಾಡಲಾಗುವುದು ಎಂದೂ ಘೋಷಿಸಿದನು, ಬೆಳ್ಳಾರೆಯಲ್ಲಿದ್ದ ಸರ್ಕಾರಿ ಕಚೇರಿಯನ್ನು ವಶಪಡಿಸಿಕೊಂಡು ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದ್ದು ಬಂಡಾಯದ ಪ್ರಥಮ ಹೆಜ್ಜೆಯಾಗಿದೆ.

54) 'ಅಮರ ಸುಳ್ಯ' ಬಂಡಾಯದ ಕೇಂದ್ರಗಳು ಯಾವುವು?

ಉತ್ತರ:– ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರು ಮೊದಲಾದ ಸ್ಥಳಗಳು 'ಅಮರ ಸುಳ್ಯ' ಬಂಡಾಯದ ಕೇಂದ್ರಗಳಾಗಿದ್ದವು.

55) ಕರಾವಳಿ ಮತ್ತು ಕೊಡಗಿನ ಬಂಡಾಯದ ಕುರಿತು ಬರೆಯಿರಿ

ಉತ್ತರ:– ಕೊಡಗಿನಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದ ಹಾಲೇರಿ ರಾಜವಂಶದ ಚಿಕ್ಕವೀರರಾಜೇಂದ್ರನನ್ನು ಬ್ರಿಟಿಷರು 1834ರಲ್ಲಿ ಪದಚ್ಯುತಗೊಳಿಸಿ ಅವನನ್ನು ಬೆಂಗಳೂರಿನ ಮೂಲಕ ವೆಲ್ಲೂರಿಗೆ ತರುವಾಯ ಕಾಶಿಗೆ ಸಾಗಿಸಿದರು. ಆತನ ಪದಚ್ಯುತಿ ಕೊಡಗಿನಲ್ಲಿ ರಾಜಕೀಯ ಅಸಮಾಧಾನವನ್ನು ಸೃಷ್ಟಿಸಿತು. ಇದರ ವಿರುದ್ಧ ಸ್ವಾಮಿ ಅಪರಂಪಾರ, ಕಲ್ಯಾಣ ಸ್ವಾಮಿ ಮತ್ತು ಪುಟ್ಟಬಸಪ್ಪ ಸಶಸ್ತ್ರ ಬಂಡಾಯವನ್ನು ಸಂಘಟಿಸಿದರು. ಈ ಮೂವರು ತಾವು ಕೊಡಗಿನ ಪದಚ್ಯುತ ರಾಜನ ವಂಶದವರೆಂದು ಹೇಳಿಕೊಂಡರು. ಸ್ವಾಮಿ ಅಪರಂಪಾರ ಬಂಡಾಯದ ಮುಖಂಡನಾದನು. 1835ರಲ್ಲಿ ಆತನನ್ನು ಬ್ರಿಟಿಷರು ಸೆರೆಹಿಡಿದು ಬೆಂಗಳೂರಿಗೆ ರವಾನಿಸಿದರು. ಕಲ್ಯಾಣಸ್ವಾಮಿ 1837ರಲ್ಲಿ ಬಂಧಿಸಲ್ಪಟ್ಟನು. ಆತನನ್ನು ಮೈಸೂರಿನ ಸೆರೆಮನೆಯಲ್ಲಿ ಇಡಲಾಯಿತು.

ಕೆಳಕೊಡಗಿನ ಜನರು ಕಲ್ಯಾಣ ಸ್ವಾಮಿಯ ನಿಧನಾನಂತರ ಬಂಡಾಯವನ್ನು ಮುಂದುವರೆಸಿದರು. ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರು ಮೊದಲಾದ ಸ್ಥಳಗಳು 'ಅಮರ ಸುಳ್ಯ' ಬಂಡಾಯದ ಕೇಂದ್ರ ಸ್ಥಾನಗಳಾಗಿದ್ದವು. ಕೊಡಗಿನ ಶನಿವಾರಸಂತೆಯ ಪುಟ್ಟಬಸಪ್ಪ ಎಂಬ ರೈತನನ್ನು ಕಲ್ಯಾಣಸ್ವಾಮಿಯನ್ನಾಗಿ ಆರಿಸಿದ್ದು ಇವನು ತನ್ನನ್ನು ಸ್ವಾಮಿ ಅಪರಂಪಾರ ಎಂದು ಕರೆದುಕೊಂಡಿದ್ದು ಸ್ವಾರಸ್ಯಕರ! ಇವನು ಬಂಡಾಯದ ನಾಯಕತ್ವವನ್ನು ವಹಿಸಿಕೊಂಡನು. ಘಟ್ಟ ಪ್ರದೇಶದಲ್ಲಿ ಈ ಬಂಡಾಯ ಪ್ರಾರಂಭವಾಯಿತು. ಪುಟ್ಟಬಸಪ್ಪ ಬಂಡುಕೋರರನ್ನು ಸಂಘಟಿಸಿ ಜನರನ್ನು ಸಂತೈಸಿದನು. ಬಂಡುಕೋರರ ಸರ್ಕಾರ ಸ್ಥಾಪನೆಯ ನಂತರ ತಂಬಾಕು ಮತ್ತು ಉಪ್ಪಿನ ಮೇಲಿನ ಸುಂಕವನ್ನು ರದ್ದು ಮಾಡಲಾಗುವುದು ಎಂದೂ ಘೋಷಿಸಿದರು. ಶ್ರೀಮಂತ ರೈತರು, ಪಾರುಪತ್ತೆಗಾರರು, ಭೂಹಿಡುವಳಿದಾರರಿಗೆ ಆಶ್ವಾಸನೆಗಳನ್ನು ನೀಡಲಾಯಿತು. ಬೆಳ್ಳಾರೆಯಲ್ಲಿದ್ದ ಸರ್ಕಾರಿ ಕಚೇರಿಯನ್ನು ವಶಪಡಿಸಿಕೊಂಡು ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದ್ದು ಬಂಡಾಯದ ಪ್ರಥಮ ಹೆಜ್ಜೆಯಾಯಿತು. ಸುಳ್ಯ ಮತ್ತು ಆಸುಪಾಸಿನಲ್ಲಿ ಸಾಮಾನ್ಯ ಜನರಿಗೆ ಕಿರುಕುಳ ನೀಡುತ್ತಿದ್ದ ಅಮಲ್ದಾರನೋರ್ವನ ಹತ್ಯೆ ಪುಟ್ಟಬಸಪ್ಪನ ಜನಪ್ರಿಯತೆಯನ್ನು ಹೆಚ್ಚಿಸಿತ್ತು. ಇದರಿಂದಾಗಿ ಬಂಡಾಯ ವ್ಯಾಪಕ ಪ್ರಚಾರ ಮತ್ತು ಬೆಂಬಲವನ್ನು ಪಡೆದುಕೊಂಡಿತು. ಮಂಗಳೂರನ್ನು ವಶಪಡಿಸಿಕೊಳ್ಳುವುದಕ್ಕಾಗಿ ಹೊರಟ ಹೋರಾಟಗಾರರು ಪುತ್ತೂರಿನಲ್ಲಿ ಬ್ರಿಟಿಷ್ ಸೈನ್ಯವನ್ನು ಎದುರಿಸಿದ್ದರು. ಹೀಗಾಗಿ ಬ್ರಿಟಿಷರು ಮಂಗಳೂರನ್ನು ರಕ್ಷಿಸುವ ಪ್ರಯತ್ನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪುತ್ತೂರಿನಿಂದ ಮಂಗಳೂರಿನ ಕಡೆಗೆ ತೆರಳಿದ ಅವರು ಪಾಣೆಮಂಗಳೂರು ಮತ್ತು ಬಂಟ್ವಾಳದಲ್ಲಿ ಕಾರ್ಯಾಚರಣೆಗಳನ್ನು ನಡೆಸಿದರು. ಬಂಟ್ವಾಳದ ಜೈಲು ಮತ್ತು ಖಜಾನೆ ಲೂಟಿಗೈಯ್ಯಲ್ಪಟ್ಟವು. ಇದನ್ನು ಹತ್ತಿಕ್ಕಲು ಬ್ರಿಟಿಷರು ಕಣ್ಣಾನೂರು, ತಲ್ಲಿಚೇರಿ ಮತ್ತು ಬಾಂಬೆಯ ಸೈನ್ಯವನ್ನು ಅಪೇಕ್ಷಿಸಿದರು. ಇದನ್ನು ಅರಿತ ಪುಟ್ಟಬಸಪ್ಪ ಮತ್ತು ಆತನ ಸಂಗಡಿಗರು ಸುಳ್ಯಕ್ಕೆ ಪಲಾಯನ ಮಾಡಿದರು. ಬ್ರಿಟಿಷ್ ಸೈನ್ಯ ಕೊಡಗಿನಲ್ಲಿ ಸ್ಥಳೀಯರ ಸಹಕಾರದಿಂದ ಆತನನ್ನು ಮತ್ತು ಆತನ ಸಹಚರರನ್ನು ಸೆರೆಹಿಡಿಯಿತು. ಸೆರೆಸಿಕ್ಕಿದ ಪುಟ್ಟಬಸಪ್ಪ, ಲಕ್ಷ್ಮಪ್ಪ, ಬಂಗರಸ, ಕೆದಂಬಾಡಿ ರಾಮಯ್ಯಗೌಡರು ಮತ್ತು ಗುಡ್ಡೆಮನೆ ಅಪ್ಪಯ್ಯ ಇವರುಗಳನ್ನು ಗಲ್ಲಿಗೇರಿಸಲಾಯಿತು. ದಂಗೆ ವಿಫಲವಾದರೂ, ಸಮಕಾಲೀನವಾಗಿ ಪ್ರಾಮುಖ್ಯ ಹೊಂದಿತ್ತು ಮತ್ತು ಅದು ಬ್ರಿಟಿಷ್ ವಿರೋಧಿಯಾಗಿತ್ತು.

56) ಸುರಪುರ ಎಲ್ಲಿದೆ?

ಉತ್ತರ:– ಸುರಪುರ ಈಗಿನ ಯಾದಗಿರಿ ಜಿಲ್ಲಾ ಕೇಂದ್ರದಿಂದ ಸುಮಾರು 50 ಕಿ.ಮೀ. ದೂರದಲ್ಲಿದೆ.

57) ಸುರಪುರದಲ್ಲಿ ಆಂತರಿಕ ಕ್ಷೋಭೆ ಯಾವ ಕಾರಣಕ್ಕಾಗಿ ಉಂಟಾಗಿದ್ದವು?

ಉತ್ತರ:– ವೆಂಕಟಪ್ಪ ನಾಯಕನ ತಂದೆ ಕೃಷ್ಣಪ್ಪ ನಾಯಕನ ಮರಣಾನಂತರ ಪಟ್ಟಕ್ಕೆ ಬಂದನು. 1834ರಲ್ಲಿ ಜನಿಸಿದ ಇವನು ತನ್ನ ಅಪ್ರಾಪ್ತ ವಯಸ್ಸಿಗೆ ಪಟ್ಟಕ್ಕೆ ಬಂದನು. ಆದರೆ ಕೃಷ್ಣಪ್ಪ ನಾಯಕನ ಸೋದರನಾಗಿದ್ದ ಪೆದ್ದ ನಾಯಕ ಎಂಬುವವನು ತಗಾದೆ ಮಾಡಿದ ಪರಿಣಾಮ ಸುರಪುರದ ಆಂತರಿಕ ರಾಜಕೀಯ ಚಟುವಟಿಕೆಗಳು ಕ್ಷೋಭೆಗೊಂಡವು.

58) ಮೆಡೋಸ್ ಟೇಲರ್ ಕೊಡುಗೆಗಳು ಏನು?

ಉತ್ತರ:– 1842ರಲ್ಲಿ ಬ್ರಿಟಿಷರು ಮೆಡೋಸ್ ಟೇಲರ್ ಎಂಬುವವನನ್ನು ಪೊಲಿಟಿಕಲ್ ಏಜೆಂಟನನ್ನಾಗಿ ನೇಮಿಸಿ ಸುರಪುರ ಸಂಸ್ಥಾನದ ಮೇಲೆ ತಮ್ಮ ಪರೋಕ್ಷ ಹತೋಟಿಯನ್ನು ಸ್ಥಾಪಿಸಿದರು. ಟೇಲರ್ ಸುಧಾರಣಾವಾದಿಯೂ ಆಗಿದ್ದನು. ಸುರಪುರ ಸಂಸ್ಥಾನವನ್ನು ಅಭಿವೃದ್ಧಿಪಡಿಸಿದನು. ಪೆದ್ದನಾಯಕನನ್ನು ಸಂಸ್ಥಾನದ ದಿವಾನನನ್ನಾಗಿ ನೇಮಿಸಿದನು. ಸಂಸ್ಥಾನದಾದ್ಯಂತ ಭೂಸಮೀಕ್ಷೆ ಮಾಡಿಸಿದನು. ಸುರಪುರ ಸಂಸ್ಥಾನದ ಆದಾಯ ಹೆಚ್ಚಲು ಈತನು ಅನೇಕ ನೀತಿಗಳನ್ನು ಅನುಸರಿಸಿದ. ವೆಂಕಟಪ್ಪ ನಾಯಕನಿಗೆ ಸೂಕ್ತವಾದ ಶಿಕ್ಷಣವನ್ನು ಕೊಡಿಸುವ ವ್ಯವಸ್ಥೆಗಳನ್ನು ಕಲ್ಪಿಸಿಕೊಟ್ಟನು.

59) ಸುರಪುರದ ರಾಜನನ್ನು(ವೆಂಕಟಪ್ಪನನ್ನು) ಬ್ರಿಟಿಷರು ಸಂಶಯದಿಂದ ನೋಡಲು ಕಾರಣ ಏನು?

ಉತ್ತರ;– 1857ರಲ್ಲಿ ಪ್ರಾರಂಭದ ಹೋರಾಟದಲ್ಲಿನ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡುಬಂತು. ಇದರಿಂದಾಗಿ ಬ್ರಿಟಿಷರು ರಾಜನನ್ನು ಸಂಶಯದಿಂದ ಕಾಣುವಂತಾಯಿತು.

64) ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.

1. ಮೊದಲನೆಯ ಆಂಗ್ಲೋ ಮೈಸೂರು ಯುದ್ಧ ________ ಮತ್ತು ________ರ ನಡುವೆ ನಡೆಯಿತು.

ಉತ್ತರ:– ಕ್ರಿ.ಶ.1767 ಮತ್ತು 1769

2. ಎರಡನೆಯ ಆಂಗ್ಲೋ ಮೈಸೂರು ಯುದ್ಧವು ________ ಒಪ್ಪಂದದೊಂದಿಗೆ ಕೊನೆಗೊಂಡಿತು.

ಉತ್ತರ:– ಮಂಗಳೂರು

ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

INTEGRALS

More Problems:-

1. Evaluate the following integral:

$$\int \frac{dx}{(x-1)\sqrt{2x+3}}$$

Soln :– Put $\sqrt{2x+3}=t$

$$\Rightarrow 2x+3=t^2 \Rightarrow x=\frac{1}{2}(t^2-3)$$

$$\Rightarrow dx=\frac{1}{2}(2t)\,dt=t\,dt$$

$$\therefore \int \frac{dx}{(x-1)\sqrt{2x+3}}=\int \frac{t\,dt}{\left[\frac{1}{2}(t^2-3)-1\right]t}$$

$$=2\int \frac{dt}{t^2-3-2}=2\int \frac{dt}{t^2-(\sqrt{5})^2}$$

$$=2.\frac{1}{2\sqrt{5}}\log\left|\frac{t-\sqrt{5}}{t+\sqrt{5}}\right|+C$$

$$=\frac{1}{\sqrt{5}}\log\left|\frac{\sqrt{2x+3}-\sqrt{5}}{\sqrt{2x+3}+\sqrt{5}}\right|+C$$

2. Evaluate $\int \frac{dx}{(x+1)\sqrt{x^2-1}}$

Soln :– Put $x+1=\frac{1}{t}$

$$\Rightarrow dx=-\frac{1}{t^2}dt \;\&\; x=\frac{1}{t}-1$$

$$\therefore \int \frac{dx}{(x+1)\sqrt{x^2-1}}=\int \frac{-\frac{1}{t^2}dt}{\frac{1}{t}\sqrt{\left(\frac{1}{t}-1\right)^2-1}}$$

$$\Rightarrow -\int \frac{dt}{\sqrt{1-2t}}=-\int (1-2t)^{-1/2}dt$$

$$\Rightarrow -\frac{(1-2t)^{1/2}}{\frac{1}{2}(-2)}+C=\sqrt{1-2t}+C$$

$$\Rightarrow \sqrt{1-2\frac{1}{x+1}}+C=\sqrt{\frac{x-1}{x+1}}+C$$

3. Evaluate the following integral

$$\int \frac{x}{(x^2+4)\sqrt{x^2-5}}dx$$

Soln :– Put $\sqrt{x^2-5}=t$

$$\Rightarrow x^2=t^2+5$$

$$\Rightarrow 2x\,dx=2t\,dt$$

$$\Rightarrow x\,dx=t\,dt$$

$$\therefore \int \frac{x}{(x^2+4)\sqrt{(x^2-5}}dx=\int \frac{t\,dt}{[(t^2+5)+4]t}$$

$$\Rightarrow \int \frac{dt}{t^2+9}=\frac{1}{3}\tan^{-1}\frac{t}{3}+C$$

$$\Rightarrow \frac{1}{3}\tan^{-1}\left(\sqrt{\frac{x^2-5}{3}}\right)+C$$

4. Evaluate $\int \frac{dx}{x^2\sqrt{x+1}}$

Soln :– Put $\sqrt{x+1}=t \Rightarrow x+1=t^2 \Rightarrow dx=2t\,dt$

$$\therefore \int \frac{dx}{x^2\sqrt{x+1}}=\int \frac{2t\,dt}{(t^2-1)^2 t}=\int \frac{2\,dt}{(t-1)^2(t+1)^2}$$

Let $\frac{2}{(t-1)^2(t+1)^2}=\frac{A}{t-1}+\frac{B}{(t-1)^2}+\frac{C}{t+1}+\frac{D}{(t+1)^2}$

$$\Rightarrow 2=A(t-1)(t+1)^2+B(t+1)^2+C(t+1)(t-1)^2+D(t-1)^2$$

On putting $t=1,-1$

we get; $2=B(2)^2,\; 2=D(-2)^2 \Rightarrow B=\frac{1}{2},\; D=\frac{1}{2}$

Equating coefficients of t^3 and constant terms on both sides, we get

$$0=A+C,\; 2=-A+B+C+D$$

$$\Rightarrow A+C=0,\; 2=-A+C+\frac{1}{2}+\frac{1}{2}$$

$$\Rightarrow A+C=0 \;\&\; -A+C=1 \Rightarrow A=-\frac{1}{2} \;\&\; C=\frac{1}{2}$$

$$\therefore \int \frac{dx}{x^2\sqrt{x+1}}=\int \left[\frac{-\frac{1}{2}}{t-1}+\frac{\frac{1}{2}}{(t-1)^2}+\frac{\frac{1}{2}}{t+1}+\frac{\frac{1}{2}}{(t+1)^2}\right]dt$$

$$\Rightarrow \frac{1}{2}\left[-\log|t-1|+\frac{(t-1)^{-1}}{-1}+\log|t+1|+\frac{(t+1)^{-1}}{-1}\right]+C$$

$$\Rightarrow -\frac{1}{2}\left[\log\left|\frac{t-1}{t+1}\right|+\frac{1}{t-1}+\frac{1}{t+1}\right]+C$$

$$\Rightarrow -\frac{1}{2}\left[\log\left|\frac{t-1}{t+1}\right|+\frac{2t}{t^2-1}\right]+C$$

$$\Rightarrow -\frac{1}{2}\log\left|\frac{\sqrt{x+1}-1}{\sqrt{x+1}+1}\right|-\frac{\sqrt{x+1}}{x}+C$$

5. Evaluate $\int \frac{\sqrt{1+x^2}}{1-x^2}dx$

Soln :– $\int \frac{\sqrt{1+x^2}}{1-x^2}dx=\int \frac{1+x^2}{(1-x^2)\sqrt{1+x^2}}dx$

$$\Rightarrow \int \frac{-(1-x^2)+2}{(1-x^2)\sqrt{1+x^2}}dx$$

$$\Rightarrow -\int \frac{1}{\sqrt{1+x^2}}dx+2\int \frac{dx}{(1-x^2)\sqrt{1+x^2}}$$

$$\Rightarrow -\log\left|x+\sqrt{1+x^2}\right|+2I$$

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

‘ಕೇಂದ್ರದ ಹುನ್ನಾರ ಸೋಲಿಸೋಣ’

ನರೇಗಾ ರದ್ದತಿ ● ಜನವರಿ 5 ರಿಂದ ಹೋರಾಟ– ಸಿ.ಎಂ. ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನರೇಗಾ ರದ್ದತಿ ಮೂಲಕ ಮಹಾತ್ಮ ಗಾಂಧಿ ಅವರ ಹೆಸರು ಅಳಿಸಲು ಕೇಂದ್ರ ಸರ್ಕಾರ ನಡೆಸಿರುವ ಹುನ್ನಾರವನ್ನು ಸೋಲಿಸೋಣ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಭಾನುವಾರ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಕೇಂದ್ರದ ಈ ಜನವಿರೋಧಿ ನೀತಿಯ ವಿರುದ್ಧ ಜನಾಂದೋಲನ ರೂಪಿಸಬೇಕು ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಈ ಪ್ರಕಾರ ಜನವರಿ 5ರಿಂದ, ಗ್ರಾಮ ಪಂಚಾಯಿತಿ ಮಟ್ಟದಿಂದ ರಾಜ್ಯಮಟ್ಟದವರೆಗೂ ತೀವ್ರ ಹೋರಾಟ ಸಂಘಟಿಸಲಾಗುವುದು’ ಎಂದರು.

‘ಮಹಾತ್ಮ ಗಾಂಧಿ ಅವರ ಹೆಸರಿನಲ್ಲಿ ಯುಪಿಎ ಸರ್ಕಾರ ಜಾರಿಗೆ ತಂದಿದ್ದ ಈ ಯೋಜನೆಯಿಂದ ಗ್ರಾಮೀಣ ಭಾಗದ ಜನರಿಗೆ ಉದ್ಯೋಗದ ಖಾತರಿ ದೊರೆತಿತ್ತು. ಅದನ್ನು ರದ್ದುಪಡಿಸಿರುವ ಬಿಜೆಪಿ ಸರ್ಕಾರವು, ಉದ್ಯೋಗದ ದಿನಗಳನ್ನು ಕಡಿಮೆ ಮಾಡಿದೆ. ನರೇಗಾದ ಅಡಿಯಲ್ಲಿ ಕೇಂದ್ರವು ಶೇ 90ರಷ್ಟು ವೆಚ್ಚವನ್ನು ಭರಿಸಬೇಕಿತ್ತು. ಈಗ ಅದನ್ನು ಶೇ 60ಕ್ಕೆ ಇಳಿಸಿ, ಹೊಣೆಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿದೆ. ಈ ಹುನ್ನಾರವನ್ನು ವಿಫಲಗೊಳಿಸಬೇಕು’ ಎಂದು ಸಲಹೆ ನೀಡಿದರು.

> **ಕೇಂದ್ರದ ಈ ನಡೆಯಿಂದ ಬಡವರು, ದಲಿತರಿಗೆ ಉದ್ಯೋಗ ಖಾತರಿ ಇಲ್ಲದಂತಾಗುತ್ತದೆ. ರಾಜ್ಯ ಸರ್ಕಾರಗಳ ಮೇಲೂ ಹೊರೆ ಹೆಚ್ಚುತ್ತದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಶೇ 60–ಶೇ 40ರಷ್ಟು ಅನುದಾನ ಅನುಪಾತದಲ್ಲಿ ಜಿ–ರಾಮ್‌ಜಿ ಯೋಜನೆಯನ್ನು ಬಿಜೆಪಿ ರಾಜ್ಯಗಳಲ್ಲೇ ಜಾರಿಗೆ ತರಲು ಸಾಧ್ಯವಿಲ್ಲ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಕೇಂದ್ರ ಸರ್ಕಾರವು ಏನು ಮಾಡಿದರೂ, ಗಾಂಧೀಜಿ ಅವರ ಹೆಸರನ್ನು ಅಳಿಸಲು ಸಾಧ್ಯವಿಲ್ಲ. ಬೆಳಗಾವಿ ಕಾಂಗ್ರೆಸ್ ಅಧಿವೇಶನವನ್ನು ಗಾಂಧೀಜಿ ಅವರು ಸಂಘಟಿಸಿದ ಪರಿ ಮತ್ತು ಅವರ ಅಭಿಪ್ರಾಯಗಳನ್ನು ಒಳಗೊಂಡ ಪುಸ್ತಕವನ್ನು ರಚಿಸಿದ್ದೇನೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕೈಯಲ್ಲಿ ಆ ಪುಸ್ತಕ ಬಿಡುಗಡೆ ಮಾಡಿಸಲು ಪ್ರಯತ್ನಿಸುತ್ತಿದ್ದೇನೆ’ ಎಂದರು.

‘ಇಡೀ ದೇಶದಲ್ಲೇ ನರೇಗಾವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿದ್ದು ನಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ. ನಮ್ಮಲ್ಲಿ ₹200 ಕೋಟಿ ವೆಚ್ಚ ಮಾಡಿ 57,000 ದನದ ಕೊಟ್ಟಿಗೆ, ಕುರಿ ಶೆಡ್, ಇಂಗುಗುಂಡಿ ನಿರ್ಮಿಸಿದ್ದೆವು. ಇದನ್ನು ಪ್ರಶಂಸಿಸುವ ಬದಲಿಗೆ ಕೇಂದ್ರ ಸರ್ಕಾರವು, ತನಿಖೆಗೆ ತಂಡಗಳನ್ನು ಕಳಿಸಿತ್ತು. ಏನೂ ಅಕ್ರಮ ಇಲ್ಲದ ಕಾರಣ, ನಮ್ಮ ತಾಲ್ಲೂಕಿಗೆ ಪ್ರಶಸ್ತಿ ನೀಡಬೇಕಾಯಿತು. ಜನರಿಗೆ ಉದ್ಯೋಗ ನೀಡುವ ಮತ್ತು ಆಸ್ತಿ ಸೃಜನೆಗೆ ಅವಕಾಶವಿರುವ ಈ ಯೋಜನೆಯನ್ನು ರದ್ದುಪಡಿಸಲು ಕೇಂದ್ರ ಮುಂದಾಗಿದೆ’ ಎಂದು ಆರೋಪಿಸಿದರು.

‘ಅತ್ಯಂತ ವ್ಯವಸ್ಥಿತವಾಗಿ ಈ ಹೋರಾಟ ಸಂಘಟಿಸಬೇಕು. ಕಾಂಗ್ರೆಸ್‌ನ ಪ್ರತಿಯೊಬ್ಬರೂ ಹೋರಾಟದಲ್ಲಿ ಭಾಗಿಯಾಗಬೇಕು. ಗ್ಯಾರಂಟಿ ಸಮಿತಿ ಸದಸ್ಯರು, ಎಸ್ಕಾಂಗಳು, ಆರೋಗ್ಯ ಸಮಿತಿ ಸೇರಿದಂತೆ ಇತರೆ ಇಲಾಖೆಗಳಿಂದ ನಾಮನಿರ್ದೇಶನ ಆಗಿರುವವರೆಲ್ಲರೂ ಹೊರಾಟದ ಹೊಣೆ ಹೊರಬೇಕು. ಇದರ ಉಸ್ತುವಾರಿಗೆ ಜಿ.ಸಿ. ಚಂದ್ರಶೇಖರ್ ನೇತೃತ್ವದಲ್ಲಿ ವೀಕ್ಷಕರನ್ನು ನೇಮಿಸಲಾಗುತ್ತದೆ’ ಎಂದರು.

ಬಿಜೆಪಿಗೂ ಕೊನೆ ಇದೆಯಲ್ಲವೇ?: ಡಿಕೆಶಿ

‘ಬಿಜೆಪಿ ಹಾಗೂ ಅವರ ಅಧಿಕಾರ ಯಾವುದೂ ಶಾಶ್ವತವಲ್ಲ. ಆ ಪಕ್ಷ ಇನ್ನೆಷ್ಟು ದಿನ ಇರುತ್ತದೆ? ಎಲ್ಲದಕ್ಕೂ ಕೊನೇ ಎಂಬುದು ಇರಲೇ ಬೇಕಲ್ಲವೇ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ಎಂತೆಂತಹ ಚಕ್ರವರ್ತಿಗಳೇ ಮೂಲೆಗುಂಪಾಗಿದ್ದಾರೆ. ಅಲೆಗ್ಸಾಂಡರ್ ದಿ ಗ್ರೇಟ್ ಎನಿಸಿಕೊಂಡು, ಪ್ರಪಂಚದ ಮುಕ್ಕಾಲು ಪಾಲು ಗೆದ್ದಿದ್ದವರೇ ಶಾಶ್ವತವಾಗಿ ಉಳಿಯಲಿಲ್ಲ. ಗೆದ್ದವರೇ ಶಾಶ್ವತವಲ್ಲ. ಸದ್ದಾಂ ಹುಸೇನ್ ಕೊನೆಗಾಲದಲ್ಲಿ ಅವಿತು ಕುಳಿತುಕೊಳ್ಳಬೇಕಾಯಿತು. ಇನ್ನು ಬೇರೆಯವರದು ಯಾವ ಲೆಕ್ಕ’ ಎಂದು ಅವರು ಹೇಳಿದರು.

‘ಕೈ’ ಹೋರಾಟ ದಿಕ್ಕು ತಪ್ಪಿಸುವ ತಂತ್ರ : ಸಂಸದ ಯದುವೀರ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ನರೇಗಾ ಹೆಸರು ಬದಲಾವಣೆ ವಿರುದ್ಧ ಕಾಂಗ್ರೆಸ್ ನಡೆಸುತ್ತಿರುವ ಹೋರಾಟ ಜನರ ದಿಕ್ಕು ತಪ್ಪಿಸುವ ತಂತ್ರ’ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಲ್ಲಿ ಆರೋಪಿಸಿದರು.

‘ವಿಕಸಿತ ಭಾರತ ಗಾಂಧೀಜಿಯ ಕನಸಾಗಿದೆ. ಕಾಂಗ್ರೆಸ್‌ನ ಹೋರಾಟ ಚುನಾವಣಾ ತಂತ್ರಗಾರಿಕೆ ಎಂಬುದು ಜನರಿಗೂ ಗೊತ್ತಾಗಿದೆ’ ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ಬೆಂಗಳೂರಿನ ಕೋಗಿಲು ಬಡಾವಣೆಯಲ್ಲಿನ ಒತ್ತುವರಿ ತೆರವು ವಿಚಾರದಲ್ಲಿ ಸರ್ಕಾರ ಕಾನೂನು ಪ್ರಕಾರ ಮುಂದುವರಿಯುವುದು ಒಳ್ಳೆಯದು. ಅಕ್ರಮವೋ ಅಧಿಕೃತವೋ ಎಂಬುದನ್ನು ಕೋರ್ಟ್ ನಿರ್ಧರಿಸುತ್ತದೆ’ ಎಂದರು.

> **ನರೇಗಾ ಯೋಜನೆಯ ಸ್ವರೂಪದಲ್ಲಿ ಬದಲಾವಣೆ ತಂದು, ಮಾನವ ದಿನಗಳನ್ನು 125ಕ್ಕೆ ಹೆಚ್ಚಿಸಿದೆ. ರಾಜ್ಯವೂ ಅನುದಾನ ನೀಡಬೇಕು ಎಂದು ಕೇಂದ್ರ ಹೇಳಿದೆ. ಇದರಲ್ಲಿ ತಪ್ಪೇನಿದೆ?**
> **ಅರವಿಂದ ಬೆಲ್ಲದ,**
> ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

ಕಲಬುರಗಿಯಲ್ಲಿ ಭಾನುವಾರ ನಡೆದ 16ನೇ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವದಲ್ಲಿ ರಾಯಚೂರಿನ ಕೃಷಿ ಮಹಾವಿದ್ಯಾಲಯ ವಿದ್ಯಾರ್ಥಿಗಳು ಜನಪದ ನೃತ್ಯದ ವೇಷದಲ್ಲಿ ಕಂಡಿದ್ದು ಹೀಗೆ ಚಿತ್ರ:ತಾಜುದ್ದೀನ್ ಆಜಾದ್

ಧರ್ಮಸ್ಥಳ: ಸಾಮೂಹಿಕ ವಿವಾಹ ಅರ್ಜಿ ಆಹ್ವಾನ

ಉಜಿರೆ (ದಕ್ಷಿಣ ಕನ್ನಡ): ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ 2026ರ ಏ.29ರಂದು ಸಂಜೆ 6.40ಕ್ಕೆ ಗೋಧೂಳಿ ಮುಹೂರ್ತದಲ್ಲಿ 54ನೇ ವರ್ಷದ ಉಚಿತ ಸಾಮೂಹಿಕ ವಿವಾಹ ನಡೆಯಲಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು. 2ನೇ ವಿವಾಹಕ್ಕೆ ಅವಕಾಶವಿಲ್ಲ.

ವರನಿಗೆ ಧೋತಿ, ಶಾಲು, ವಧುವಿಗೆ ಸೀರೆ, ರವಿಕೆ ಕಣ, ಮಂಗಳಸೂತ್ರ, ಹೂವಿನ ಹಾರ ನೀಡಲಾಗುವುದು. ಮದುವೆಯ ಸಂಪೂರ್ಣ ವೆಚ್ಚವನ್ನು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆಯ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ಭರಿಸುತ್ತದೆ.

‘ಮದುವೆ ಆಗಲು ಇಚ್ಛಿಸುವರು 2026ರ ಏ. 25ರೊಳಗೆ ಸವಿವರ, ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 08256- 266644, ವಾಟ್ಸ್‌ಆ್ಯಪ್ ಸಂಖ್ಯೆ 9663464648, 8147263422 ಸಂಪರ್ಕಿಸಿ.

ವರದಕ್ಷಿಣೆ, ಮದುವೆಯ ದುಂದುವೆಚ್ಚ ತಡೆಯಲು ವೀರೇಂದ್ರ ಹೆಗ್ಗಡೆ ಅವರು 1972ರಲ್ಲಿ ಉಚಿತ ಸಾಮೂಹಿಕ ವಿವಾಹ ಆರಂಭಿಸಿದ್ದರು. ಈ ವರೆಗೆ 13 ಸಾವಿರ ಜೋಡಿ ಮದುವೆಯಾಗಿದ್ದಾರೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಒಂದೇ ತಾಸಿನಲ್ಲಿ ಹುಬ್ಬಳ್ಳಿಗೆ ಶಿಶು ರವಾನೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಅಸಹಜವಾಗಿ ಜನಿಸಿದ್ದ ನವಜಾತು ಗಂಡು ಶಿಶುವನ್ನು ತುರ್ತು ಚಿಕಿತ್ಸೆಗಾಗಿ ಭಾನುವಾರ ಬೆಳಿಗ್ಗೆ ಕೊಪ್ಪಳದ ತಾಯಿ ಮತ್ತು ಮಗುವಿನ ಆಸ್ಪತ್ರೆಯಿಂದ ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆಗೆ ‘ಝೀರೊ ಟ್ರಾಫಿಕ್’ನಲ್ಲಿ ಒಂದು ತಾಸಿನಲ್ಲಿ ಆಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಯಿತು.

ಜಿಲ್ಲೆಯ ಕುಕನೂರು ತಾಲ್ಲೂಕಿನ ಬೂದಗುಂಪಾ ಗ್ರಾಮದ ವಿಜಯಲಕ್ಷ್ಮೀ ಎಂಬುವವರಿಗೆ ಶನಿವಾರ ಮಧ್ಯರಾತ್ರಿ ಸಹಜ ಹೆರಿಗೆಯಾಗಿತ್ತು. ಆದರೆ, ಶಿಶುವಿಗೆ ಹೊಟ್ಟೆ ಮೇಲಿನ ಚರ್ಮ ಸರಿಯಾಗಿ ಬೆಳೆಯದೇ ಕರಳು, ಕಿಡ್ನಿ ಹೊರಗಡೆ ಬಂದಿದ್ದವು. ಹೀಗಾಗಿ, ಹೆರಿಗೆ ಹಿಂದೆಯೇ ಕುಕನೂರಿನಿಂದ ತಾಯಿ ಹಾಗೂ ಮಗುವಿನ ಆಸ್ಪತ್ರೆಗೆ ಕರೆದುಕೊಂಡು ಬರಲಾಗಿದ್ದು, ಇಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು.

ನವಜಾತ ಶಿಶುವನ್ನು ಕರೆದುಕೊಂಡು ಹೋದ ಆಂಬುಲೆನ್ಸ್

ಭಾನುವಾರ ಬೆಳಿಗ್ಗೆ 10.10ಕ್ಕೆ ಕೊಪ್ಪಳದಿಂದ ಹೊರಟ ಆಂಬುಲೆನ್ಸ್ 120 ಕಿ.ಮೀ. ದೂರದ ಹುಬ್ಬಳ್ಳಿ ಆಸ್ಪತ್ರೆಗೆ 60 ನಿಮಿಷದಲ್ಲಿ ತಲುಪಿದೆ. ಮಗುವನ್ನು ಕರೆದೊಯ್ದ ಸರ್ಕಾರಿ ಆಸ್ಪತ್ರೆ ಆಂಬುಲೆನ್ಸ್ ಜೊತೆ ಖಾಸಗಿಯ ಮೂರು ಆಂಬುಲೆನ್ಸ್‌ಗಳು ‘ಝೀರೊ ಟ್ರಾಫಿಕ್’ನಲ್ಲಿ ತೆರಳಲು ನೆರವಾದವು. ಕೊಪ್ಪಳ, ಗದಗ ಹಾಗೂ ಹುಬ್ಬಳ್ಳಿಯ ಸಂಚಾರ ಪೊಲೀಸರು ಆಂಬುಲೆನ್ಸ್‌ನ ಸರಾಗ ಸಂಚಾರಕ್ಕೆ ನೆರವಾದರು. ಕೊಪ್ಪಳ, ಹುಬ್ಬಳ್ಳಿಯಲ್ಲಿ ಅಖಿಲ ಕರ್ನಾಟಕ ಆಂಬುಲೆನ್ಸ್ ರಸ್ತೆ ಸುರಕ್ಷತಾ ಸಂಘಟನೆ ಸದಸ್ಯರು ಕೂಡ ಈ ಮಾನವೀಯ ಕಾರ್ಯಕ್ಕೆ ಕೈಜೋಡಿಸಿದರು.

‘ಬೇಗ ತಲುಪಲು ಚಾಲಕ ನ ಸಮಯಪ್ರಜ್ಞೆಯು ಇದಕ್ಕೆ ನೆರವಾಯಿತು. ಹುಬ್ಬಳ್ಳಿಯಲ್ಲಿ ವೈದ್ಯರು ಚಿಕಿತ್ಸೆ ಆರಂಭಿಸಿದ್ದಾರೆ’ ಎಂದು ಕೊಪ್ಪಳದ ಆಂಬುಲೆನ್ಸ್‌ನ ಸಿಬ್ಬಂದಿ ಮಂಜುನಾಥ ಗಾಡಿ ತಿಳಿಸಿದರು. ಪ್ರಕಾಶ ವಾಹನ ಚಲಾಯಿಸಿದ್ದರು.

ರೈಲ್ವೆ ಮಾರ್ಗದ ವಿದ್ಯುದೀಕರಣ ಪೂರ್ಣ

ಪ್ರಜಾವಾಣಿ ವಾರ್ತೆ

ಸಕಲೇಶಪುರ ಸುಬ್ರಹ್ಮಣ್ಯ ಮಾರ್ಗ

ಮಂಗಳೂರು: ಸಕಲೇಶಪುರ -ಸುಬ್ರಹ್ಮಣ್ಯ ರಸ್ತೆ ನಡುವಿನ 55 ಕಿ.ಮೀ. ಉದ್ದದ ಘಟ್ಟದ ರೈಲ್ವೆ ಮಾರ್ಗದ ವಿದ್ಯುದ್ದೀಕರಣ ಕಾರ್ಯ ಪೂರ್ಣಗೊಂಡಿದೆ. ಪ್ರಯೋಗಾತ್ಮಕ ಚಾಲನೆ ಭಾನುವಾರ ಯಶಸ್ವಿಯಾಗಿ ನಡೆದಿದೆ’ ಎಂದು ನೈರುತ್ಯ ರೈಲ್ವೆಯ ಮೈಸೂರು ವಿಭಾಗ ತಿಳಿಸಿದೆ.

‘ಇದು ಅತ್ಯಂತ ತಾಂತ್ರಿಕ ಸವಾಲಿನ ವಿಭಾಗಗಳಲ್ಲಿ ಒಂದಾಗಿತ್ತು. ಈ ಮಾರ್ಗದಲ್ಲಿ 57 ಸುರಂಗ, 258 ಸೇತುವೆ, 108 ತೀಕ್ಷ್ಣ ವಕ್ರಗಳ ಜೊತೆಗೆ ಜೊತೆಗೆ, ಹೆಚ್ಚು ಭೂಕುಸಿತ ಪ್ರದೇಶ ಆಗಿದ್ದರಿಂದ ವಿದ್ಯುದೀಕರಣ ಅತ್ಯಂತ ಸಂಕೀರ್ಣವಾಗಿತ್ತು.

ವಿದ್ಯುದೀಕರಣ ಕಾರ್ಯವು 2023ರ ಡಿಸೆಂಬರ್ 1ರಂದು ಆರಂಭಗೊಂಡು, ₹93.55 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿದೆ. ಯೋಜನೆಯಡಿ ಮಾರ್ಗದೊಳಗೆ ಐದು ಸ್ವಿಚಿಂಗ್ ಸ್ಟೇಷನ್‌ಗಳ ನಿರ್ಮಾಣ ಹಾಗೂ ಸಂಪೂರ್ಣ ವಿಭಾಗದಲ್ಲಿ ಮೇಲ್ಮೈ ವಿದ್ಯುದೀಕರಣ ಕಾರ್ಯ ನಡೆದಿದೆ.

ಮೇಲ್ಮೈ ವಿದ್ಯುತ್ ವ್ಯವಸ್ಥೆಯನ್ನು ಗರಿಷ್ಠ 120 ಕಿ.ಮೀ. ಪ್ರತಿ ಗಂಟೆ ವೇಗಕ್ಕೆ ಅನುಗುಣವಾಗಿ ವಿನ್ಯಾಸಗೊಳಿಸಿದ್ದು, ಎರಡು ವಿದ್ಯುತ್ ಕಂಬಗಳ ನಡುವಿನ ಗರಿಷ್ಠ ಅಂತರ 67.5 ಮೀಟರ್‌ಗೆ ಮಿತಿಗೊಳಿಸಿದೆ. ಇದರಿಂದ ಕಾರ್ಯಾಚರಣಾ ಸುರಕ್ಷತೆ, ವಿಶ್ವಾಸಾರ್ಹತೆ ಖಚಿತಗೊಂಡಿದೆ.

ವಿದ್ಯುದೀಕರಣ ಕಾರ್ಯ ಮತ್ತು ವಿದ್ಯುತ್ ಲೋಕೊಮೋಟಿವ್ ಪ್ರಯೋಗಾತ್ಮಕ ಚಾಲನೆ ಯಶಸ್ವಿಯಾಗಿ ಆಗಿರುವುದರಿಂದ ಸಂಪೂರ್ಣ ಘಾಟ್ ವಿಭಾಗವು ಈಗ ವಿದ್ಯುತ್ ಆಧರಿತ ರೈಲು ಸಂಚಾರಕ್ಕೆ ಸಿದ್ಧವಾಗಿದೆ. ಇದು, ಕಠಿಣ ಭೌಗೋಳಿಕ ಸ್ಥಿತಿಗಳಲ್ಲೂ ಸ್ಥಿರ ರೈಲು ಸೌಕರ್ಯ ನಿರ್ಮಾಣದ ಇಲಾಖೆಯ ಬದ್ಧತೆಯನ್ನು ಬಿಂಬಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕುವೆಂಪು ಜಯಂತಿ ಅಂಗವಾಗಿ ವಿಶ್ವಮಾನವ ದಿನಾಚರಣೆ ಇಂದು

ಸಿದ್ಧಗೊಳ್ಳುತ್ತಿದೆ ‘ಕುವೆಂಪು ಚಿತಾಭಸ್ಮ ಸ್ಮಾರಕ’

● ಎಂ.ಮಹೇಶ್

ಮೈಸೂರು: ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಯಾಚೇನಹಳ್ಳಿ ಗ್ರಾಮದಲ್ಲಿ ರಾಜ್ಯ ಸರ್ಕಾರದಿಂದ ‘ವಿಶ್ವಕವಿ ಕುವೆಂಪು ಚಿತಾಭಸ್ಮ ಸ್ಮಾರಕ ಭವನ’ ನಿರ್ಮಿಸಲಾಗುತ್ತಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಪ್ರತಿನಿಧಿಸುವ ತಿ.ನರಸೀಪುರ ಕ್ಷೇತ್ರ ವ್ಯಾಪ್ತಿಯ, ಮೈಸೂರು ಮತ್ತು ಮಂಡ್ಯ ಜಿಲ್ಲೆ ಗಡಿಯಲ್ಲಿರುವ ಈ ಗ್ರಾಮದಲ್ಲಿ 2024ರ ಜುಲೈ 27ರಂದು ಶಂಕುಸ್ಥಾಪನೆ ನೆರವೇರಿತ್ತು. ಈಗ ಶೇ 80ರಷ್ಟು ಪೂರ್ಣಗೊಂಡಿದೆ.

ಗ್ರಾಮದಲ್ಲಿರುವ ಶ್ರೀರಾಮಕೃಷ್ಣ ಸೇವಾ ಕೇಂದ್ರದ ನಾದಾನಂದನಾಥ ಸ್ವಾಮೀಜಿ ಅವರ ಆಶಯದಂತೆ, ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯೋಜನೆ ಜಾರಿ ಆಗುತ್ತಿದೆ. ಅಗತ್ಯ ಜಾಗವನ್ನು ಅಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷ ವೈ.ಎನ್. ಶಂಕರೇಗೌಡ ಅವರು ಉಚಿತವಾಗಿ ಒದಗಿಸಿದ್ದಾರೆ.

ಯಾಚೇನಹಳ್ಳಿಯಲ್ಲಿ ನಿರ್ಮಾಣ ಹಂತದಲ್ಲಿರುವ ‘ವಿಶ್ವಕವಿ ಕುವೆಂಪು ಚಿತಾಭಸ್ಮ ಸ್ಮಾರಕ ಭವನ’

ಸ್ವಾಮೀಜಿ 2018ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಆಗ ₹85 ಲಕ್ಷ ಮಂಜೂರು ಆಗಿದ್ದರೂ ಅನುದಾನ ಬಿಡುಗಡೆ ಆಗಿರಲಿಲ್ಲ. ಮತ್ತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಮನವಿ ಸಲ್ಲಿಸಿದ್ದು, 2024ರ ಫೆಬ್ರುವರಿಯಲ್ಲಿ ಸರ್ಕಾರಕ್ಕೆ ರವಾನಿಸಲಾಗಿತ್ತು. ಅದಕ್ಕೆ ಅನುಮತಿ ದೊರೆತಿದೆ. ಅತಿಥಿಗಳ ಕೊಠಡಿ, ಸಂಶೋಧಕರಿಗೆ ವಸತಿ ವ್ಯವಸ್ಥೆ, ಗ್ರಂಥಾಲಯ, ಸಭಾಭವನ ನಿರ್ಮಾಣಗೊಳ್ಳಲಿದೆ. ₹1.50 ಕೋಟಿ ಮೊತ್ತದಲ್ಲಿ ಯೋಜನೆ ಕೈಗೊಳ್ಳಲಾಗಿದೆ.

ಭವನದಲ್ಲಿ ಕುವೆಂಪು ಅವರ ವಿಶ್ವಮಾನವ ಸಂದೇಶ, ಚಿಂತನೆ ಪಸರಿಸುವ ಕಾರ್ಯ ನಡೆಯಲಿದೆ. ವಿಚಾರಸಂಕಿರಣ, ತರಬೇತಿ ಕಾರ್ಯಕ್ರಮ, ಸಮ್ಮೇಳನ, ಸಂಶೋಧನೆ ಕಾರ್ಯ ನಡೆಸಲೂ ಯೋಜಿಸಲಾಗಿದೆ. ನಿರ್ಮಿತಿ ಕೇಂದ್ರದ ಮೂಲಕ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

‘ನಿರ್ಮಾಣ ಕಾಮಗಾರಿ ಶೇ 80ರಷ್ಟು ನಡೆದಿದೆ. ಉಳಿದ ಕಾಮಗಾರಿಗೆ ಹೆಚ್ಚುವರಿ ಅನುದಾನ ಕೋರಿ ಮನವಿ ಸಲ್ಲಿಸಿದ್ದೇವೆ. ಹೆಚ್ಚುವರಿ ₹1 ಕೋಟಿ ಅನುದಾನ ಸಿಕ್ಕರೆ ಅನುಕೂಲ ಎಂದು ಕೋರಲಾಗಿದೆ’ ಎಂದು ನಾದಾನಂದನಾಥ ಸ್ವಾಮೀಜಿ ‘ಪ್ರಜಾವಾಣಿ’ಗೆ ತಿಳಿಸಿದರು.

ವಿಶ್ವಮಾನವ ಧರ್ಮದ ಮೊದಲ ಮಹಾಧಿವೇಶನ ಇಂದು

ವಿಶ್ವಮಾನವ ಧರ್ಮ ಜಾಗೃತಿ ವೇದಿಕೆಯಿಂದ ಸೋಮವಾರ (ಡಿ.29) ಯಾಚೇನಹಳ್ಳಿಯ ಶ್ರೀರಾಮಕೃಷ್ಣ ಸೇವಾ ಕೇಂದ್ರದ ಶಾಲೆ ಆವರಣದಲ್ಲಿ ‘ವಿಶ್ವಮಾನವ ಧರ್ಮದ ಮೊದಲ ಮಹಾಧಿವೇಶನ’ ಜರುಗಲಿದೆ.

‘ಕುವೆಂಪು ಅವರ ಮನುಜಮತ ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಯ ತಾತ್ವಿಕ ಪರಿಕಲ್ಪನೆಗಳ ತಹಳಹದಿಯೇ ವಿಶ್ವಮಾನವ ಧರ್ಮವಾಗಿದೆ. ಕೋಮು ದ್ವೇಷ ಹರಡುವ ಈ ಕಾಲದಲ್ಲಿ ಕುವೆಂಪು ಅವರ ವಿಶ್ವಮಾನವ ಧರ್ಮ ಪರಿಕಲ್ಪನೆಯನ್ನು ನೆಲೆಗೊಳಿಸಬೇಕಾಗಿದೆ. ದೇವರು, ಧರ್ಮದ ಹೆಸರಿನಲ್ಲಿ ಮೌಢ್ಯ ತುಂಬಿ ದಾರಿ ತಪ್ಪಿಸುವುದರ ವಿರುದ್ಧ ಜಾಗೃತಿ ಮೂಡಿಸಲಾಗುವುದು’ ಎಂದು ನಾದಾನಂದನಾಥ ಸ್ವಾಮೀಜಿ ತಿಳಿಸಿದರು.

‘ಆಯುರ್ವೇದದಲ್ಲಿ ಅಡ್ಡಪರಿಣಾಮವಿಲ್ಲ’

ಆಯುರ್ವೇದ ಸಮ್ಮೇಳನ ಸಮಾರೋಪದಲ್ಲಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಮಾಂಸಾಹಾರದ ಬಗ್ಗೆ ಮಾತನಾಡುವುದಿಲ್ಲ. ಆಯುರ್ವೇದ ಪರಿಣಾಮಕಾರಿಯಾಗಬೇಕಾದರೆ ಯಾವುದೇ ಸಮುದಾಯದವರು ಇರಲಿ ಅವರು ಸಸ್ಯಾಹಾರವನ್ನು ಸೇವಿಸಬೇಕು. ಆಯುರ್ವೇದದಲ್ಲಿ ಅಡ್ಡಪರಿಣಾಮ ಇಲ್ಲ’ ಎಂದು ಮೂಡಬಿದಿರೆ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹೇಳಿದರು.

ಆಯುಷ್ ಸಚಿವಾಲಯ ಹಾಗೂ ರಾಜ್ಯ ಆಯುಷ್ ಇಲಾಖೆಯ ಸಹಯೋಗದಲ್ಲಿ ಕಜೆ ಆಯುರ್ವೇದಿಕ್ ಚಾರಿಟಬಲ್ ಫೌಂಡೇಷನ್ ಹಮ್ಮಿಕೊಂಡಿದ್ದ ನಾಲ್ಕು ದಿನಗಳ ಆಯುರ್ವೇದ ವಿಶ್ವ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಅವರು ಮಾತನಾಡಿದರು.

‘ಆಧುನಿಕ ವೈದ್ಯ ಪದ್ಧತಿಯಲ್ಲಿ ಮಾತ್ರ ಅಡ್ಡಪರಿಣಾಮ ಇರುವುದು. ಆಯುರ್ವೇದದಲ್ಲಿ ಅಡ್ಡಪರಿಣಾಮ ಇಲ್ಲ. ರಾಸಾಯನಿಕ ಗೊಬ್ಬರ ಹಾಕಿ ಬೆಳೆದ ಆಹಾರ ಪದಾರ್ಥಗಳನ್ನು ಸೇವಿಸಿದವರಿಗೆ ಆಯುರ್ವೇದ ಪರಿಣಾಮಕಾರಿಯಾಗುವುದಿಲ್ಲ’ ಎಂದು ತಿಳಿಸಿದರು.

‘ಅಂಗಾಂಗಗಳು ಸರಿ ಇರುವವರೇ ಶ್ರೀಮಂತರು. ಅವು ಸರಿ ಇಲ್ಲದೇ ಇದ್ದರೆ ಎಷ್ಟೇ ದುಡ್ಡಿದ್ದರೂ ಬಡವರು. ಅಧ್ಯಾತ್ಮ ಬೂಟಾಟಿಕೆಯಲ್ಲ. ಪ್ರತಿ ಆಚರಣೆಯಲ್ಲಿ ರಹಸ್ಯ ಇದೆ. ಅಧ್ಯಾತ್ಮ, ಆಯುರ್ವೇದ ಸ್ವೀಕರಿಸಿದವರು 120 ವರ್ಷ ಬದುಕುತ್ತಾರೆ’ ಎಂದರು.

ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಮಾತನಾಡಿ, ‘ಆಯುರ್ವೇದ ಜೀವನ ಪದ್ಧತಿ. ಅದರಂತೆ ಬದುಕಿದರೆ ಸ್ವಸ್ಥರಾಗಿರಬಹುದು. ಇಲ್ಲದೇ ಇದ್ದರೆ ಸುಸ್ತರಾಗಬಹುದು. ಸುಸ್ತಿನ ಬದುಕು ಬೇಡವೆಂದಾದರೆ ಆಯುರ್ವೇದ ಅಳವಡಿಸಿಕೊಳ್ಳಬೇಕು’ ಎಂದು ಹೇಳಿದರು.

‘ಬದುಕು ಮತ್ತು ಸಾವನ್ನು ತಿಳಿಯಲು ಸಮಸ್ತ ಜನರು ಆಯುರ್ವೇದವನ್ನು ಅರಿಯಬೇಕು. ಜ್ಯೋತಿಷ ಕೂಡಾ ಸಾವಿನ ಬಗ್ಗೆ ಹೇಳಲು ಹಿಂಜರಿಯುತ್ತದೆ. ಆದರೆ, ಆಯುರ್ವೇದ ನಿಖರವಾಗಿ ಹೇಳುತ್ತದೆ. ಇಂಥ ಅದ್ಭುತ ವಿಜ್ಞಾನ, ವಿದ್ಯೆ, ಶಾಸ್ತ್ರವು ಮಂಗನ ಕೈಯಲ್ಲಿ ಸಿಕ್ಕಿದ ಮಾಣಿಕ್ಯದಂತಾಗಿದೆ. ಮೂಲೆಗೆ ತಳ್ಳಿ ಬಿಟ್ಟಿದ್ದೇವೆ. ಪಾಶ್ಚಾತ್ಯರಿಗೆ ಈ ವಿದ್ಯೆ ಸಿಕ್ಕಿದ್ದರೆ ಅವರು ಹೊತ್ತು ಮೆರೆಯುತ್ತಿದ್ದರು. ಅನರ್ಘ್ಯ ರತ್ನವನ್ನು ಉಳಿಸಲು ಸರ್ಕಾರ ಪ್ರಯತ್ನ ಮಾಡಬೇಕು. ಸರ್ಕಾರ ಮಾಡದೇ ಇದ್ದರೂ ನಾವು ಮಾಡಬೇಕು. ಆಯುರ್ವೇದದಿಂದ ನಾವು ಉಳಿದುಕೊಂಡಿದ್ದೇವೆ. ನಾವು ಆಯುರ್ವೇದವನ್ನು ಉಳಿಸಬೇಕು’ ಎಂದರು.

ಕಾರ್ಯಕ್ರಮದ ರೂವಾರಿ ಡಾ. ಗಿರಿಧರ್ ಕಜೆ ಮಾತನಾಡಿ, ‘ಎಲ್ಲ ಔಷಧಗಳು ಜನರಿಗೆ ತಲುಪಿದರೆ ಎಲ್ಲರಿಗೂ ಆರೋಗ್ಯ ಸಿಗುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿತ್ತು. ಈ ಯೋಚನೆಯೇ ತಪ್ಪಾದುದು. ಈಗಾಗಲೇ ಕೆಮಿಕಲ್ ಸಿಂಥೆಟಿಕ್ ಔಷಧ ಎಲ್ಲರ ದೇಹಕ್ಕೆ ಸೇರಿ ದೇಹವೇ ದುರ್ಬಲಗೊಂಡಿದೆ. ಆರೋಗ್ಯ ತಲುಪುವ ಬದಲು ರೋಗಗಳು ಎಲ್ಲರಿಗೂ ತಲುಪಿವೆ. ದೇಹವು ಔಷಧ ಸಂಗ್ರಹಿಸುವ ವಸ್ತು ಎಂಬಂತಾಗಿದೆ. ಎಲ್ಲ ಜನರಿಗೆ ಔಷಧದ ಬದಲು ಆಯುರ್ವೇದ ತಲುಪಿದರೆ ಆರೋಗ್ಯ ಉಳಿಯಲಿದೆ’ ಎಂದು ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಗಿರಿಧರ ಕಜೆ ಅವರಿಗೆ ರಾಘವೇಶ್ವರ ಭಾರತಿ ಸ್ವಾಮೀಜಿ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ಪ್ರಮಾಣಪತ್ರ ನೀಡಿ ಗೌರವಿಸಿದರು. ಎಸ್‌. ರವಿಕುಮಾರ್, ಜಯಪ್ರಕಾಶ್ ನಾರಾಯಣ್, ಹರಿಕೃಷ್ಣ ಎಂ., ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸಂಪನ್ನಗೊಂಡ ಸಮ್ಮೇಳನ

ನಾಲ್ಕು ದಿನ ನಡೆದ ವಿಶ್ವ ಆಯುರ್ವೇದ ಸಮ್ಮೇಳನದಲ್ಲಿ 1,000ಕ್ಕೂ ಅಧಿಕ ಪ್ರಬಂಧಗಳು ಮಂಡನೆಯಾದವು. 64 ತಜ್ಞರು ಭಾಗವಹಿಸಿದ್ದರು. ಮೂರು ವೇದಿಕೆಗಳಲ್ಲಿ ಸಮಾವೇಶ, ತಾಂತ್ರಿಕ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಆರೋಗ್ಯಕ್ಕೆ ಪೂರಕವಾದ ಊಟ, ಉಪಾಹಾರಗಳನ್ನು ನಾಲ್ಕು ದಿನವೂ ನೀಡಲಾಯಿತು. ಪ್ರತಿ ದಿನ ನೂರು ಸಾಧಕರಿಗೆ ಆಯುರ್ವೇದ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹುಣಸೂರು: ಗಾಳಿಯಲ್ಲಿ ಗುಂಡು ಹಾರಿಸಿ ಬೆದರಿಕೆ

ಐವರಿಂದ ಚಿನ್ನಾಭರಣ ದರೋಡೆ

ಪ್ರಜಾವಾಣಿ ವಾರ್ತೆ

ಹುಣಸೂರು (ಮೈಸೂರು ಜಿಲ್ಲೆ): ಇಲ್ಲಿನ ಬೈಪಾಸ್ ರಸ್ತೆಯಲ್ಲಿರುವ ‘ಸ್ಕೈ ಗೋಲ್ಡ್ ಆ್ಯಂಡ್ ಡೈಮಂಡ್’ ಚಿನ್ನಾಭರಣ ಮಳಿಗೆಗೆ ಭಾನುವಾರ ಮಧ್ಯಾಹ್ನ ನುಗ್ಗಿದ ಐವರು ಬಂದೂಕು ಧಾರಿಗಳು, ಸಿಬ್ಬಂದಿಗೆ ಬಂದೂಕು ತೋರಿಸಿ ಬೆದರಿಸಿ ಚಿನ್ನಾಭರಣ ದೋಚಿದ್ದಾರೆ. ಹೋಗುವಾಗ ಗಾಳಿಯಲ್ಲಿ ಗುಂಡು ಹಾರಿಸಿದ್ದರಿಂದ ಸ್ಥಳದಲ್ಲಿ ಆತಂಕ ಉಂಟಾಗಿತ್ತು.

ದ್ವಿಚಕ್ರವಾಹನಗಳಲ್ಲಿ ಬಂದ ಐವರು, ಮಧ್ಯಾಹ್ನ 2.02ರ ಸುಮಾರಿಗೆ ಮಳಿಗೆಗೆ ನುಗ್ಗಿ 2.06ರೊಳಗೆ ಚಿನ್ನಾಭರಣ ತೆಗೆದುಕೊಂಡು ಸಿನಿಮೀಯ ರೀತಿಯಲ್ಲಿ ಪರಾರಿಯಾಗಿದ್ದಾರೆ. ‘ದರೋಡೆಯಾದ ಚಿನ್ನಾಭರಣದ ಮೌಲ್ಯ ₹ 4 ಕೋಟಿ ಎಂದು ಅಂದಾಜಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಸ್ಕೈ ಗೋಲ್ಡ್ ಆ್ಯಂಡ್ ಡೈಮಂಡ್’ ಮಳಿಗೆ

‘ಇಬ್ಬರು ಮುಸುಕುಧಾರಿಗಳಾಗಿದ್ದರು. ಮೂವರ ಮುಖ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇಬ್ಬರ ಕೈಯಲ್ಲಿ ಎರಡೆರಡು ಗನ್ ಇದ್ದವು, ಉಳಿದವರು ಒಂದು ಗನ್ ಹಿಡಿದಿದ್ದುದು ಸೆರೆಯಾಗಿದೆ. ಒಬ್ಬ ಹಿಂದಿಯಲ್ಲಿ ಮಾತನಾಡುತ್ತಿದ್ದ ಎಂಬ ಮಾಹಿತಿ ಸಿಕ್ಕಿದೆ.

‘ಬೆಳ್ಳಿ ಆಭರಣ ಹಾಗೂ ನಗದು ಮುಟ್ಟಿಲ್ಲ. ಕೆಲವೇ ನಿಮಿಷಗಳಲ್ಲಿ ಸಿಕ್ಕ ಬಂಗಾರದ ಸರಗಳನ್ನಷ್ಟೇ ದೋಚಿದ್ದಾರೆ. ಹೋಗುವಾಗ ಯಾರೂ ಹಿಂಬಾಲಿಸಬಾರದೆಂಬ ಕಾರಣಕ್ಕೆ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ’ ಎಂದು ಎಸ್‌ಪಿ ಎನ್. ವಿಷ್ಣುವರ್ಧನ್ ಮಾಹಿತಿ ನೀಡಿದರು.

‘ತನಿಖೆಗೆ ಐದು ತಂಡ ರಚಿಸಲಾಗಿದೆ. ಎಷ್ಟು ಮೌಲ್ಯದ ಚಿನ್ನಾಭರಣ ದರೋಡೆಯಾಗಿದೆ ಎಂದು ಇನ್ನೂ ತಿಳಿದುಬಂದಿಲ್ಲ. ಅಂಗಡಿಯಲ್ಲಿರುವ ದಾಸ್ತಾನು ಹಾಗೂ ಕಳೆದುಕೊಂಡಿರುವ ಚಿನ್ನಾಭರಣದ ಲೆಕ್ಕಾಚಾರದ ಬಳಿಕ ನಿಖರ ಮಾಹಿತಿ ತಿಳಿಯಲಿದೆ. ಜಿಲ್ಲೆಯ ಚೆಕ್‌ಪೋಸ್ಟ್‌ಗಳಲ್ಲಿ ಪರಿಶೀಲಿಸುತ್ತಿದ್ದು, ಎಲ್ಲಾ ಆಯಾಮದಲ್ಲೂ ತನಿಖೆ ನಡೆಯುತ್ತಿದೆ’ ಎಂದು ಹೇಳಿದರು.

ಸ್ಥಳಕ್ಕೆ ಬೆರಳಚ್ಚು ಮತ್ತು ಶ್ವಾನದಳ ತಜ್ಞರು ಭೇಟಿ ನೀಡಿ ಪರಿಶೀಲಿಸಿದರು. ಡಿವೈಎಸ್‌ಪಿ ರವಿ, ಸಿಪಿಐ ಸಂತೋಷ್ ಕಶ್ಯಪ್, ಅಪರಾಧ ವಿಭಾಗದ ಪಿಎಸ್‌ಐ ಜಮೀರ್ ಇದ್ದರು.

ವಿದ್ಯಾರ್ಥಿ ಸಂಘ ಚುನಾವಣೆ: ಅಧ್ಯಯನಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮತ್ತೆ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸುವ ಕುರಿತು ಅಧ್ಯಯನ ನಡೆಸಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು (ಕೆಪಿಸಿಸಿ) ಉನ್ನತ ಮಟ್ಟದ ಸಮಿತಿ ರಚಿಸಿದೆ.

ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರು, ಸಮಿತಿಗೆ ಸಂಚಾಲಕರು ಮತ್ತು ಸದಸ್ಯರನ್ನು ನೇಮಕ ಮಾಡಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಅವರನ್ನು ಸಮಿತಿಯ ಸಂಚಾಲಕರಾಗಿ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಒಳಗೊಂಡು ಒಟ್ಟು ಎಂಟು ಸದಸ್ಯರನ್ನು ಸಮಿತಿಗೆ ನೇಮಕ ಮಾಡಲಾಗಿದೆ.

ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕರಾದ ರಿಜ್ವಾನ್ ಅರ್ಷದ್, ಬಿ. ಶಿವಣ್ಣ, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಬಸವನಗೌಡ ಬಾದರ್ಲಿ, ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಚ್. ಎಸ್.ಮಂಜುನಾಥ್, ಎಸ್‌ಎಸ್‌ಯುಐ ಅಧ್ಯಕ್ಷ ಕೀರ್ತಿ ಗಣೇಶ್ ಈ ಸಮಿತಿಯ ಸದಸ್ಯರು.

ವಿದ್ಯಾರ್ಥಿ ಸಂಘಗಳ ಚುನಾವಣೆಯ ಕಾರ್ಯಸಾಧ್ಯತೆ ಮತ್ತು ಅಗತ್ಯ, ಅವುಗಳ ಪರಿಣಾಮಗಳು, ಚುನಾವಣೆಯ ಸ್ವರೂಪ, ಮೀಸಲಾತಿ ನೀಡುವ ಬಗ್ಗೆ ಅಧ್ಯಯನ ನಡೆಸಿ 15 ದಿನಗಳ ಒಳಗೆ ವರದಿ ನೀಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮಿತಿಗೆ ಸೂಚಿಸಿದ್ದಾರೆ.

ನಕಲಿ ದಾಖಲೆ; ಐವರ ವಿರುದ್ಧ ಎಫ್‌ಐಆರ್

ಬಳ್ಳಾರಿ: ಕುಡಿಯುವ ನೀರಿನ ಕಾಮಗಾರಿ ಗುತ್ತಿಗೆ ಪಡೆಯಲು ಗುತ್ತಿಗೆದಾರರೊಬ್ಬರಿಗೆ ನಕಲಿ ದಾಖಲೆ ಮಾಡಿಕೊಟ್ಟಿದ್ದಪ್ರಕರಣದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ನಾಲ್ವರು ಅಧಿಕಾರಿಗಳು ಸೇರಿ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.

ಸಂಡೂರು ತಾಲ್ಲೂಕಿನ ಯಶವಂತನಗರದಲ್ಲಿ ಪೈಪ್‌ಲೈನ್, ಮನೆಗಳಿಗೆ ನಳ ಸಂಪರ್ಕ ಮತ್ತು ಟಿಎಚ್‌ಟಿ ಒದಗಿಸುವ ಒಟ್ಟು ₹18.64 ಲಕ್ಷ ಮೊತ್ತದ ಕಾಮಗಾರಿಗೆ 2020-21ನೇ ಸಾಲಿನಲ್ಲಿ ಕರೆದಿದ್ದ ಟೆಂಡರ್‌ನಲ್ಲಿ ಗುತ್ತಿಗೆದಾರ ಮೌಲಾಲಿ ಅವರು ಭಾಗವಹಿಸಿದ್ದರು.

ಅಂದಿನ ಕಾರ್ಯಪಾಲಕ ಎಂಜಿನಿಯರ್ ಆರ್.ಪ್ರಭು, ಲೆಕ್ಕಾಧೀಕ್ಷಕ ಎಂ.ಮಾಲತೇಶ್, ಅಂದಿನ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಎಸ್.ಶ್ರೀಕಂಠ, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ಸುರೇಂದ್ರನಾಥ ಅವರು ನಕಲಿ ‘ವರ್ಕ್ ಡನ್’ ಪ್ರಮಾಣ ಪತ್ರ ಮತ್ತು ನಕಲಿ ರಹಸ್ಯ ವರದಿಗಳನ್ನು ಮೌಲಾಲಿಗೆ ಒದಗಿಸಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಗ್ರಾಮೀಣ ಕುಡಿಯುವ ನೀರು ಇಲಾಖೆಯ ಇಇ ಎಚ್. ಇಂದೂಧರ ಪೊಲೀಸರಿಗೆ ದೂರು ನೀಡಿದ್ದಾರೆ.

ಕೋಗಿಲು ಒತ್ತುವರಿ ತೆರವು: ಸಿಎಂ ಸಭೆ

ಕೋಗಿಲು ಗ್ರಾಮಕ್ಕೆ ಭೇಟಿ ನೀಡಿದ್ದ ಸಚಿವ ಜಮೀರ್ ಅಹಮದ್ ಖಾನ್ ಅವರು ಸ್ಥಳೀಯರೊಂದಿಗೆ ಮಾತುಕತೆ ನಡೆಸಿದರು

ಒಂದನೇ ಪುಟದಿಂದ...

‘ಈ ಜನರಿಗೆ ಶಾಶ್ವತವಾಗಿ ಮನೆ ಕಟ್ಟಿಕೊಡಲು ನಾಲ್ಕು ಎಕರೆ ಮಂಜೂರು ಮಾಡುವ ಬಗ್ಗೆ ಕಂದಾಯ ಸಚಿವರು ಕ್ರಮ ತೆಗೆದುಕೊಂಡಿದ್ದರು. ಅದಕ್ಕೆ ನಿವಾಸಿಗಳು ಒಪ್ಪಿಕೊಳ್ಳಲಿಲ್ಲ. ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು, ಮುಖ್ಯಮಂತ್ರಿ ಅವರ ನೇತೃತ್ವದಲ್ಲಿ ನಡೆಯುವ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ’ ಎಂದರು.

‘ಕೇರಳದಲ್ಲಿ ಇನ್ನೇನು ಚುನಾವಣೆ ಬರಲಿದೆ. ಅದಕ್ಕಾಗಿಯೇ ಅಲ್ಲಿನ ಸಚಿವರು, ಶಾಸಕರು, ಸಂಸದರು ಇಲ್ಲಿಗೆ ಬರುತ್ತಿದ್ದಾರೆ. ಕೇರಳದಲ್ಲಿ ಪ್ರವಾಹದಲ್ಲಿ ಜನರು ನಿರ್ಗತಿಕರಾದಾಗ ಕರ್ನಾಟಕ ಸರ್ಕಾರದಿಂದ ನೂರು ಮನೆ ನಿರ್ಮಿಸಿಕೊಟ್ಟಿದ್ದೇವೆ. ಕೇರಳ ಮುಖ್ಯಮಂತ್ರಿಗೆ ಕಾಳಜಿ ಇದ್ದರೆ, ಇಲ್ಲಿ ಅವರು ಮನೆ ನಿರ್ಮಿಸಿಕೊಡಲಿ ಅಥವಾ ಆರ್ಥಿಕ ನೆರವು ನೀಡಲಿ. ಸುಮ್ಮನೆ ಇಲ್ಲಿಗೆ ಬಂದು ಹೋದರೆ ಉಪಯೋಗವಿಲ್ಲ’ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

> **ಸರ್ಕಾರದ ಕ್ರಮ ಸಮರ್ಥಿಸಿಕೊಂಡು ಕೇರಳ ಮುಖ್ಯಮಂತ್ರಿಗೆ ಉತ್ತರ ನೀಡಿರುವ ನಿಮಗೆ ಎಐಸಿಸಿಯ ನಿಮ್ಮ ಬಾಸ್ ವೇಣುಗೋಪಾಲ್ ಅವರಿಗೆ ಅದೇ ಧಾಟಿಯಲ್ಲಿ ಉತ್ತರ ನೀಡುವ ಧೈರ್ಯ ಇದೆಯಾ?**
>
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಭಾರತಕ್ಕೆ ಸಿ–130ಜೆ ನೀಡಲು ಮುಂದಾದ ಲಾಕ್‌ಹೀಡ್

ಮೆರಿಯಾಟಾ(ಅಮೆರಿಕ) (ಪಿಟಿಐ): ಸುಮಾರು 80 ವಿಮಾನಗಳ ಖರೀದಿಗೆ ಭಾರತ ಸಿದ್ಧತೆ ನಡೆಸುತ್ತಿದ್ದು, ಅಮೆರಿಕದ ಪ್ರಮುಖ ಏರೊಸ್ಪೇಸ್ ಕಂಪನಿ ಲಾಕ್‌ಹೀಡ್ ಮಾರ್ಟಿನ್ ತನ್ನ ಸಿ–130ಜೆ ಸೂಪರ್ ಹೆರ್ಕ್ಯುಲಸ್ ನೀಡಲು ಮುಂದೆ ಬಂದಿದೆ.

ಕ್ವಾಡ್ ಸದಸ್ಯ ರಾಷ್ಟ್ರಗಳಿಗೆ ಕಂಪನಿಯು ಬಲಿಷ್ಠವಾದ ವಿಮಾನವನ್ನು ಪೂರೈಕೆ ಮಾಡಲಿದೆ ಎಂದು ಲಾಕ್‌ಹೀಡ್ ಮಾರ್ಟಿನ್ ತಿಳಿಸಿದೆ.

ಕಾಂತಾವರ ಕನ್ನಡ ಸಂಘದ ದತ್ತಿ ಪ್ರಶಸ್ತಿ ಪ್ರದಾನ

ಕನ್ನಡಪರ ಕೆಲಸ ಕುಂಠಿತ: ಕಳವಳ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ‘ನಮ್ಮ ಭಾಷೆ, ಸಂಸ್ಕೃತಿ ಉಳಿವಿಗೆ ಕನ್ನಡ ಪರ ಕೆಲಸಗಳು ನಿರಂತರ ನಡೆಯುತ್ತಿರಬೇಕು. ಇತ್ತೀಚಿನ ದಿನಗಳಲ್ಲಿ ಇಂತಹ ಚಟುವಟಿಕೆಗಳು ಕುಂಠಿತ ಆಗುತ್ತಿರುವುದು ಖೇದಕರ’ ಎಂದು ಸಾಹಿತಿ ಮೋಹನ ಕುಂಟಾರ್ ಕಾಸರಗೋಡು ಹೇಳಿದರು.

ಕನ್ನಡ ಸಂಘ ಕಾಂತಾವರದ 50ರ ಸಂಭ್ರಮದ ದ್ವಿತೀಯ ಕಾರ್ಯಕ್ರಮ ನಿಮಿತ್ತ ಭಾನುವಾರ ಎಂಟು ಮಂದಿ ಸಾಧಕರಿಗೆ ದತ್ತಿಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಡಾ.ನಾ ಮೊಗಸಾಲೆ ಅವರು ವಿಶಿಷ್ಟ ಕಾರ್ಯಕ್ರಮಗಳ ಮೂಲಕ ಕನ್ನಡದ ಕಂಪನ್ನು ನಾಡಿನ ಉದ್ದಕ್ಕೂ ಪಸರಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಧರ್ಮದರ್ಶಿ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಿದ್ದರು.

‘ಸಂಘದ ವಾರ್ಷಿಕ ಗೌರವ ಪ್ರಶಸ್ತಿ'ಯನ್ನು ಹುಲಿಮನೆ ಜಯರಾಮ ಹೆಗಡೆ ಮಿಜಾರು ಅವರಿಗೆ (₹5 ಸಾವಿರ) ನೀಡಿ ಗೌರವಿಸಲಾಯಿತು.

ದತ್ತಿ ಪ್ರಶಸ್ತಿ ಪ್ರಾಯೋಜಕರ ಪರವಾಗಿ ಡಾ.ಸಿ.ಕೆ ಬಲ್ಲಾಳ್ ದಂಪತಿ, ಪ್ರಸನ್ನ ಮೊಗಸಾಲೆ ಮತ್ತು ಶ್ರೀಪತಿ ಮಂಜನಬೈಲ್ ಅವರನ್ನು ಗೌರವಿಸಲಾಯಿತು. ವಿಮರ್ಶಕ ಬೆಳಗೋಡು ರಮೇಶ್ ಭಟ್ ಮೈಸೂರು ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು. ಉಡುಪಿ ಸಂಸ್ಕೃತಿ ವಿಶ್ವಪ್ರತಿಷ್ಠಾನದ ಅಧ್ಯಕ್ಷ ಯು.ವಿಶ್ವನಾಥ ಶೆಣೈ, ಉದ್ಯಮಿ ಕೆ.ಶ್ರೀಪತಿ ಭಟ್, ರಾಮಚಂದ್ರ ನಾಯಕ್ ಕಾರ್ಕಳ ಉಪಸ್ಥಿತರಿದ್ದರು.

ಎಂಟು ಸಾಧಕರಿಗೆ ದತ್ತಿಪ್ರಶಸ್ತಿ ಪ್ರದಾನ ಮಾಡಲಾಯಿತು. ಮೋಹನ ಕುಂಟಾರ್, ಡಾ.ನಾ ಮೊಗಸಾಲೆ ಮತ್ತಿತರರು ಪಾಲ್ಗೊಂಡಿದ್ದರು

ದತ್ತಿ ಪ್ರಶಸ್ತಿ ಪುರಸ್ಕೃತರು

ಕರ್ನಾಟಕ ಏಕೀಕರಣದ ನೇತಾರ ಕೆ.ಬಿ. ಜಿನರಾಜ ಹೆಗ್ಡೆ ಪುತ್ರಿ ಸರಸ್ವತಿ ಬಲ್ಲಾಳ್ ಮತ್ತು ಪತಿ ಡಾ.ಸಿ.ಕೆ. ಬಲ್ಲಾಳ್ ಸ್ಥಾಪಿಸಿದ ‘ಸಾಂಸ್ಕೃತಿಕ ಏಕೀಕರಣ ಪ್ರಶಸ್ತಿ’ ಯನ್ನು ಲೋಹಿಯಾ ಪ್ರಕಾಶನದ ಚೆನ್ನಬಸವಣ್ಣ ಅವರಿಗೆ,- ಧಾರವಾಡದ ಜಿ.ಎಂ.ಹೆಗಡೆ ಸ್ಥಾಪಿಸಿದ ‘ಪ್ರಾಧ್ಯಾಪಕ ಸಂಶೋಧಕ ಪ್ರಶಸ್ತಿ’ಯನ್ನು ತುಮಕೂರಿನ ಆರ್. ಲಕ್ಷ್ಮೀನಾರಾಯಣ ಅವರಿಗೆ, ನಾಡಿಗೆ ನಮಸ್ಕಾರ ಗ್ರಂಥ ಮಾಲೆಗೆ ಕೃತಿಗಳನ್ನು ಬರೆದುಕೊಟ್ಟ ಲಕ್ಷ್ಮಣ ಕೊಡಸೆ ಅವರಿಗೆ ‘ಶ್ರೇಷ್ಠ ಪತ್ರಕರ್ತ ಪ್ರಶಸ್ತಿ’, ‘ಶ್ರೇಷ್ಠ ಶಿಕ್ಷಕ ಸೌರಭ ಪ್ರಶಸ್ತಿ’ಯನ್ನು ಕಾಂತಾವರದ ಸರೋಜಿನಿ ನಾಗಪ್ಪಯ್ಯ ಅವರಿಗೆ, ಮೊಗಸಾಲೆ ಕುಟುಂಬ ಸ್ಥಾಪಿಸಿದ ಕಾಂತಾವರ ಸಾಹಿತ್ಯ ಪ್ರಶಸ್ತಿಯನ್ನು ಕಾಸರಗೋಡಿನ ರಾಧಾಕೃಷ್ಣ ಕೆ.ಉಳಿಯತ್ತಡ್ಕ ಅವರಿಗೆ, ಸರೋಜಿನಿ ನಾಗಪ್ಪಯ್ಯ ಈಶ್ವರಮಂಗಲ ದತ್ತಿನಿಧಿಯಿಂದ ‘ಯಕ್ಷಗಾನ ಸಾಹಿತ್ಯ ಸಂಶೋಧನಾ ಪ್ರಶಸ್ತಿ’ಯನ್ನು ಉತ್ತರ ಕನ್ನಡದ ಅಶೋಕ ಹಾಸ್ಯಗಾರ ಅವರಿಗೆ, ಹಿರಿಯ ರಂಗಕರ್ಮಿ ಶ್ರೀಪತಿ ಮಂಜನಬೈಲ್ ಅವರ ‘ಮಂಜನಬೈಲ್ ರಂಗ ಸ್ಮಾರಕ ಪ್ರಶಸ್ತಿ’ಯನ್ನು ಶಶಿರಾಜ ರಾವ್ ಕಾವೂರು ಅವರಿಗೆ ನೀಡಿ ಸನ್ಮಾನಿಸಲಾಯಿತು. ಈ ಎಲ್ಲ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಒಳಗೊಂಡಿವೆ.

ಕುಡಿದು ವಾಹನ ಚಲಾಯಿಸುವವರ ಸಂಖ್ಯೆ ಹೆಚ್ಚುತ್ತಿದೆ ಯಾಕೆ?

- ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡದಿರುವುದು
- ಕಾನೂನು ಬಗ್ಗೆ ಚಾಲಕರು ಅಥವಾ ಮಾಲೀಕರಿಗೆ ಭಯ ಇಲ್ಲದೇ ಇರುವುದು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸಿಗಾಚಿ ಇಂಡಸ್ಟ್ರೀಸ್ ಸಿಇಒ ಬಂಧನ

ಹೈದರಾಬಾದ್ (ಪಿಟಿಐ): 54 ಜನರ ಸಾವಿಗೆ ಕಾರಣವಾದ ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಔಷಧ ಕಾರ್ಖಾನೆ ಸ್ಫೋಟ ಪ್ರಕರಣ ಸಂಬಂಧ ಸಿಗಾಚಿ ಇಂಡಸ್ಟ್ರೀಸ್‌ನ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಅಮಿತ್ ರಾಜ್ ಸಿನ್ಹಾ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಜೂನ್ 30ರಂದು ನಡೆದಿದ್ದ ಅವಘಡ ಸಂಬಂಧ ಔಷಧ ಕಾರ್ಖಾನೆಯ ಆರು ಮಂದಿ ವಿರುದ್ಧ ಪ್ರಕರಣ ದಾಖಲಾಗಿತ್ತು.

ಹೋರಾಟದ ಹಾದಿ ತುಳಿದ ಕೊರಗರು

ಉನ್ನತ ಶಿಕ್ಷಣ ಪಡೆದರೂ ಕೊರಗ ಸಮುದಾಯದವರಿಗೆ ಉದ್ಯೋಗ ಮರೀಚಿಕೆ

• ನವೀನ್ ಕುಮಾರ್ ಜಿ.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಕೊರಗ ಸಮುದಾಯದವರು ಧರಣಿ ನಡೆಸಿದರು

ಉಡುಪಿ: ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ಹಿಂದುಳಿದ ಆದಿವಾಸಿ ಕೊರಗ ಸಮುದಾಯದ ಯುವಜನರು ಶಿಕ್ಷಣವಂತರಾಗುತ್ತಿದ್ದರೂ ಉದ್ಯೋಗ ಇನ್ನೂ ಅವರಿಗೆ ಮರೀಚಿಕೆಯಾಗಿದೆ.

‘ಉನ್ನತ ಶಿಕ್ಷಣ ಪಡೆದರೂ ಪುರಸಭೆಗಳಲ್ಲಿ ಪೌರ ಕಾರ್ಮಿಕ ಹುದ್ದೆಗಳನ್ನು ಬಿಟ್ಟರೆ ನಮ್ಮವರಿಗೆ ಬೇರೆ ಸರ್ಕಾರಿ ಉದ್ಯೋಗಗಳು ಸಿಗುತ್ತಿಲ್ಲ’ ಎಂದು ಸಮುದಾಯದವರು ಅಳಲು ತೋಡಿಕೊಳ್ಳುತ್ತಾರೆ.

ಸಮುದಾಯದ ಯುವಜನರಿಗೆ ಸರ್ಕಾರಿ ಉದ್ಯೋಗದಲ್ಲಿ ನೇರ ನೇಮಕಾತಿಗೆ ಆಗ್ರಹಿಸಿ ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ ಕರ್ನಾಟಕ–ಕೇರಳ ವತಿಯಿಂದ ಮಣಿಪಾಲದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಮತ್ತೆ ಅಹೋರಾತ್ರಿ ಧರಣಿ ಆರಂಭಿಸಿದ್ದು, ಧರಣಿಯು ಭಾನುವಾರ 14ನೇ

> **ಕೊರಗ ಸೇರಿದಂತೆ 13 ಸಮುದಾಯದವರಿಗೆ ಉದ್ಯೋಗದಲ್ಲಿ ವಿಶೇಷ ನೇಮಕಾತಿ ನೀಡುವ ಕುರಿತು ಬಜೆಟ್‌ನಲ್ಲಿ ಘೋಷಣೆಯಾಗಿತ್ತು. ನೇರ ನೇಮಕಾತಿಯು ಸರ್ಕಾರದ ಹಂತದಲ್ಲೇ ನಡೆಯಬೇಕಾಗಿದೆ**
>
> **ನಾರಾಯಣ ಸ್ವಾಮಿ**
>
> ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯ ಅಧಿಕಾರಿ

ದಿನಕ್ಕೆ ಕಾಲಿರಿಸಿದೆ. ಒಂದು ವರ್ಷದ ಹಿಂದೆಯೂ ಹಲವು ದಿನಗಳವರೆಗೆ ಕೊರಗ ಸಮುದಾಯದವರು ಅಹೋರಾತ್ರಿ ಧರಣಿ ನಡೆಸಿದ್ದರು.

‘ಉಡುಪಿ, ದಕ್ಷಿಣ ಕನ್ನಡ ಹಾಗೂ ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ನೆಲಸಿರುವ ಕೊರಗ ಸಮುದಾಯದವರ ಜನಸಂಖ್ಯೆ ಅಂದಾಜು 12 ಸಾವಿರದಷ್ಟಿದೆ. ನಮ್ಮ ಸಮುದಾಯ

> **ಯುವಜನರಿಗೆ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿ ಕಳೆದ ವರ್ಷ ಹತ್ತು ದಿನ ಅಹೋರಾತ್ರಿ ಧರಣಿ ನಡೆಸಿದ್ದೆವು. ಈ ಬಾರಿ ಬೇಡಿಕೆ ಈಡೇರುವವರೆಗೂ ಹೋರಾಟ ಮುಂದುವರಿಸುತ್ತೇವೆ**
>
> **ಸುಶೀಲಾ ನಾಡ**
>
> ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟದ ಅಧ್ಯಕ್ಷೆ

ಕರಾವಳಿಯ ಮೂಲ ನಿವಾಸಿಗಳಾಗಿದ್ದು, ಭಾರತ ಸರ್ಕಾರವು ನಮ್ಮನ್ನು ಪ್ರಾಚೀನ ಬುಡಕಟ್ಟು ಅತಿ ದುರ್ಬಲ ಸಮುದಾಯವೆಂದು ಗುರುತಿಸಿದೆ. ಜನಗಣತಿಯಿಂದ ಜನಗಣತಿಗೆ ನಮ್ಮವರ ಜನಸಂಖ್ಯೆ ಕಡಿಮೆಯಾಗುತ್ತಿದೆ’ ಎಂದು ಒಕ್ಕೂಟದ ಅಧ್ಯಕ್ಷೆ ಸುಶೀಲಾ ನಾಡ ತಿಳಿಸಿದರು.

‘ಎಸ್‌ಎಸ್‌ಎಲ್‌ಸಿಯಿಂದ ಹಿಡಿದು ಉನ್ನತ ಶಿಕ್ಷಣ ಪಡೆದ ಅಂದಾಜು ಎರಡು ಸಾವಿರ ಮಂದಿಗೆ ಉದ್ಯೋಗ ನೀಡಿ ಎಂದು ನಾವು ಕೇಳುತ್ತಿದ್ದೇವೆ. ಈ ಹಿಂದೆ ಸರ್ಕಾರವು ‘ಸಿ’ ಮತ್ತು ‘ಡಿ’ ದರ್ಜೆಯ ಉದ್ಯೋಗದಲ್ಲಿ ನೇರ ನೇಮಕಾತಿ ನಡೆಸುವ ಭರವಸೆ ನೀಡಿತ್ತು. ಆದರೆ ಅದು ಇನ್ನೂ ಈಡೇರಿಲ್ಲ. ಈ ಕಾರಣಕ್ಕೆ ಮತ್ತೆ ಹೋರಾಟಕ್ಕಿಳಿದಿದ್ದೇವೆ’ ಎಂದು ಅವರು ಹೇಳಿದರು.

‘ನಮ್ಮ ಸಮುದಾಯದಲ್ಲಿ 300ಕ್ಕೂ ಹೆಚ್ಚು ಮಂದಿ ಪದವೀಧರರಿದ್ದಾರೆ, 50 ಮಂದಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ನಾಲ್ಕು ಮಂದಿ ಪಿಎಚ್.ಡಿ. ಮಾಡಿದ್ದಾರೆ. ಪಿಎಚ್.ಡಿ. ಮಾಡಿದವರಲ್ಲಿ ಒಬ್ಬರಿಗಷ್ಟೇ ಸರ್ಕಾರಿ ಉದ್ಯೋಗ ಸಿಕ್ಕಿದೆ’ ಎಂದು ವಿವರಿಸಿದರು.

‘ದಲೈ ಲಾಮಾ ಸಂದೇಶ ಮುಂದುವರಿಸಿ’

ಪ್ರಜಾವಾಣಿ ವಾರ್ತೆ

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ‘ಯುವ ಪೀಳಿಗೆಯು ಟಿಬೆಟಿಯನ್ ಧರ್ಮಗುರು ದಲೈ ಲಾಮಾ ಅವರ ಪರಸ್ಪರ ಸಹಾನುಭೂತಿ, ನೈತಿಕ ಜೀವನದ ಸಂದೇಶವನ್ನು ಮುಂದಕ್ಕೆ ಕೊಂಡೊಯ್ಯಬೇಕು’ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದರು.

ತಾಲ್ಲೂಕಿನ ಟಿಬೆಟಿಯನ್ ಕ್ಯಾಂಪ್ ನಂ. 6ರ ಡ್ರೆಪುಂಗ್ ಲೋಸಲಿಂಗ್ ಬೌದ್ಧ ಮಂದಿರದಲ್ಲಿ ದಲೈ ಲಾಮಾ ಅವರ 90ನೇ ಜನ್ಮದಿನದ ಪ್ರಯುಕ್ತ ಭಾನುವಾರ ಆಯೋಜಿಸಿದ್ದ ವಿದ್ವಾಂಸರ ಸಮ್ಮೇಳನದಲ್ಲಿ ಅವರು ಮಾತನಾಡಿದರು.

‘ದಲೈ ಲಾಮಾ ಅವರ ಜೀವನದ ಮೈಲುಗಲ್ಲನ್ನು ಸದಾ ಸ್ಮರಿಸಬೇಕು. ಅವರ ಕರುಣೆ, ಶಾಂತಿ, ಬುದ್ಧಿವಂತಿಕೆ ಮತ್ತು ಮಾನವೀಯತೆ ಗುಣಗಳನ್ನು ಅಳವಡಿಸಿಕೊಳ್ಳಬೇಕು’ ಎಂದು ಹೇಳಿದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಶಿವರಾಮ ಹೆಬ್ಬಾರ, ಬೌದ್ಧ ಮಂದಿರದ ಗಾಡೆನ್ ತ್ರಿ ರಿನ್‌ಪೋಚೆ ಮತ್ತು ಹಿರಿಯ ಭಿಕ್ಕುಗಳು ಇದ್ದರು.

ಮುಂಡಗೋಡ ತಾಲ್ಲೂಕಿನ ಟಿಬೆಟಿಯನ್ ಕ್ಯಾಂಪ್ ನಂ.6ರ ಡ್ರೆಪುಂಗ್ ಲೋಸಲಿಂಗ್ ಬೌದ್ಧ ಮಂದಿರದಲ್ಲಿ ದಲೈ ಲಾಮಾ ಅವರನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಕೇಂದ್ರ ಸಚಿವ ಕಿರಣ್ ರಿಜಿಜು ಭಾನುವಾರ ಭೇಟಿಯಾದರು

ಚಿತ್ರದುರ್ಗ ಬಳಿಯ ಬಸ್ ದುರಂತ: ಸಂಬಂಧಿಕರ ಕಣ್ಣೀರು

ಮೃತದೇಹಗಳ ಅವಶೇಷ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹಿರಿಯೂರು ತಾಲ್ಲೂಕಿನ ಜವನಗೊಂಡನಹಳ್ಳಿ ಬಳಿ ಡಿ.25ರಂದು ನಡೆದಿದ್ದ ಬಸ್ ದುರಂತದಲ್ಲಿ ಸುಟ್ಟು ಕರಕಲಾಗಿದ್ದ ಐವರ ಮೃತದೇಹಗಳ ಅವಶೇಷಗಳನ್ನು ಭಾನುವಾರ ಕುಟುಂಬ ಸದಸ್ಯರಿಗೆ ಹಸ್ತಾಂತರ ಮಾಡಲಾಯಿತು.

ಬೆಂಗಳೂರಿನ ಬಿಂದು (28), ಅವರ ಮಗಳು ಗ್ರೇಯಾ (5), ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಎಚ್.ಸಿ.ಮಾನಸ (26), ಮಂಡ್ಯ ಜಿಲ್ಲೆ ಅಂಕನಹಳ್ಳಿಯ ಎ.ಎಂ.ನವ್ಯಾ (27), ಭಟ್ಕಳದ ರಶ್ಮಿ ಆರ್. ಮಹಾಲೆ (25) ಸಜೀವ ದಹನಗೊಂಡಿದ್ದರು. ದೇಹಗಳು ಗುರುತಿಸಲು ಅಸಾಧ್ಯವಾದ ರೀತಿಯಲ್ಲಿ ಕರಕಲಾಗಿದ್ದ ಕಾರಣ ಡಿಎನ್‌ಎ ಪರೀಕ್ಷೆ ನಡೆಸಲಾಗಿತ್ತು. ಹುಬ್ಬಳ್ಳಿಯ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆದಿತ್ತು.

ಭಾನುವಾರ ಪರೀಕ್ಷಾ ವರದಿ ಕೈಸೇರಿದ್ದು, ಜಿಲ್ಲಾ ಆಸ್ಪತ್ರೆ ಶವಾಗಾರದಲ್ಲಿ ಇರಿಸಿದ್ದ ಅವಶೇಷಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು. ಮೃತದೇಹಗಳಲ್ಲಿ ಪತ್ತೆಯಾಗಿದ್ದ ಚೈನು, ಉಂಗುರ, ಬಳೆಗಳನ್ನೂ ಕುಟುಂಬ ಸದಸ್ಯರಿಗೆ ಪೊಲೀಸರು ನೀಡಿದರು.

ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಬೆಂಗಳೂರಿನ ಬಿಂದು, ಗ್ರೇಯಾ ಕುಟುಂಬ ಸದಸ್ಯರು ದುಃಖದ ನಡುವೆ ಮೃತದೇಹದ ಅವಶೇಷ ಸ್ವೀಕರಿಸಿದರು

‘ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಮೃತಪಟ್ಟ ಬಸ್ ಚಾಲಕ ರಫೀಕ್ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬ ಸದಸ್ಯರಿಗೆ ಒಪ್ಪಿಸಲಾಗಿದೆ. ಕಂಟೇನರ್ ಚಾಲಕ ಕುಲದೀಪ್ ಯಾದವ್ ಮೃತದೇಹದ ಅವಶೇಷವನ್ನು ಹರಿಯಾಣದಿಂದ ಬಂದಿದ್ದ ಕುಟುಂಬ ಸದಸ್ಯರಿಗೆ ನೀಡಿದ್ದು, ಅವರು ಹಿರಿಯೂರಿನಲ್ಲೇ ಅಂತ್ಯಕ್ರಿಯೆ ನಡೆಸಿದ್ದಾರೆ’ ಎಂದು ತಿಳಿಸಿದರು.

ಅವಘಡದಲ್ಲಿ ಏಳು ಮಂದಿ ಮೃತಪಟ್ಟಿದ್ದರು. ಸುಟ್ಟು ಕರಕಲಾಗಿದ್ದ ಮೃತದೇಹಗಳ ಅವಶೇಷ ಕಂಡು ಅವರ ಕುಟುಂಬ ಸದಸ್ಯರು ಆಸ್ಪತ್ರೆ ಆವರಣದಲ್ಲಿ ಕಣ್ಣೀರು ಹಾಕಿದರು.

‘ಯಾರಿಗೂ ಇಂತಹ ಸಾವು ಬರಬಾರದು. ಬಸ್‌ಗಳಲ್ಲಿ ಸುರಕ್ಷಿತ ಪ್ರಯಾಣಕ್ಕೆ ಆದ್ಯತೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ರಶ್ಮಿ ಮಹಾಲೆ ಸಹೋದರ ವಿನಾಯಕ್ ಹೇಳಿದರು.

ಬಸ್‌ಗಳಲ್ಲಿ ನೂತನ ತಂತ್ರಜ್ಞಾನ ಅಳವಡಿಸಿ: ಬೆಲ್ಲದ

ಹುಬ್ಬಳ್ಳಿ: ‘ವೋಲ್ವೊ ಬಸ್‌ಗಳು ಅಪಘಾತಕ್ಕೆ ಒಳಗಾದಾಗ ಕಿಟಕಿ, ಬಾಗಿಲುಗಳು ಸ್ವಯಂಚಾಲಿತವಾಗಿ ತೆರೆಯುವ, ಬೆಂಕಿ ನಂದಕ ರಾಸಾಯನಿಕ ಸಿಂಪಡಣೆ ಆಗುವ ತಂತ್ರಜ್ಞಾನವನ್ನು ಬಸ್‌ಗಳಲ್ಲಿ ಅಳವಡಿಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರತಿ ಬಾರಿ ಅಪಘಾತವಾದ ಸಂದರ್ಭದಲ್ಲಿ ರಸ್ತೆ ಹಾಳಾಗಿರುವುದು, ಚಾಲಕನ ಅಜಾಗರೂಕತೆ ಬಗ್ಗೆ ಹೆಚ್ಚು ಚರ್ಚೆಯಾಗುತ್ತದೆ. ಬಸ್‌ಗಳಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಬೇಕು’ ಎಂದರು.

‘ಡ್ರಗ್ಸ್ ಮಾಫಿಯಾ ನಿಯಂತ್ರಣದಲ್ಲಿ ರಾಜ್ಯ ಸರ್ಕಾರ’

ಪ್ರಜಾವಾಣಿ ವಾರ್ತೆ

ಗದಗ: ‘ರಾಜ್ಯದಲ್ಲಿ ಡ್ರಗ್ಸ್ ಬಳಕೆ ಹೆಚ್ಚಿದೆ. ವಿಶೇಷ ದಳ ರಚಿಸಿದರೂ ನಿಯಂತ್ರಣಕ್ಕೆ ಬಂದಿಲ್ಲ. ಡ್ರಗ್ಸ್ ಮಾಫಿಯಾ ನಿಯಂತ್ರಣದಲ್ಲಿ ಸರ್ಕಾರ ಇದೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಭಾನುವಾರ ಆರೋಪಿಸಿದರು.



ಬಸವರಾಜ ಬೊಮ್ಮಾಯಿ

‘ಮಾದಕ ವಸ್ತು ತಯಾರಿಕೆ, ಕಳ್ಳ ಸಾಗಣೆ ಜಾಲದಲ್ಲಿ ಪೊಲೀಸರೂ ಶಾಮೀಲಾಗಿರುವ ಅನುಮಾನ ಮೂಡುತ್ತಿದೆ. ಮುಖ್ಯಮಂತ್ರಿ ಅವರು ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಉಡ್ತಾ ಪಂಜಾಬ್ ರೀತಿ, ಉಡ್ತಾ ಕರ್ನಾಟಕ ಆಗಲಿದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಮಾದಕ ವಸ್ತು ಬಳಕೆ, ಸಾಗಣೆ ತಡೆಗೆ ವಿಶೇಷ ಕಾನೂನು ಇದ್ದು, ಪರಿಣಾಮಕಾರಿಯಾಗಿ ಬಳಕೆ ಮಾಡಬೇಕು. ದ್ವೇಷ ಭಾಷಣದ ವಿರುದ್ಧ ಕಾನೂನು ತರುವ ಬದಲು, ಡ್ರಗ್ಸ್, ಕಳ್ಳಭಟ್ಟಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದರು.

ಡ್ರಗ್ಸ್ ಜಾಲ: ಬೆಚ್ಚಿದ ಬೆಂಗಳೂರು

ಒಂದನೇ ಪುಟದಿಂದ...

ಬೆಂಗಳೂರು ಉತ್ತರ ಜಿಲ್ಲೆಯ ಬಾಗಲೂರಿನ ಸ್ಪಂದನಾ ಲೇಔಟ್ ಕಾಲೋನಿ, ಕೊತ್ತನೂರಿನ ಎನ್.ಜಿ.ಗೊಲ್ಲಹಳ್ಳಿ ಪ್ರದೇಶ ಹಾಗೂ ಅವಲಹಳ್ಳಿ ಠಾಣಾ ವ್ಯಾಪ್ತಿಯ ಯರಪ್ಪನಹಳ್ಳಿಯಲ್ಲಿ ದಾಳಿ ನಡೆಸಿ, ₹55.88 ಕೋಟಿ ಮೌಲ್ಯದ ಮಾದಕ ವಸ್ತು ತಯಾರಿಸುವ ಕಚ್ಚಾ ವಸ್ತುಗಳು, ರಾಸಾಯನಿಕ, ಯಂತ್ರೋಪಕರಣಗಳನ್ನು ವಶಪಡಿಸಿಕೊಂಡಿಸಿರುವುದಾಗಿ ಎನ್‌ಟಿಎಫ್ ಪ್ರಕಟಣೆಯಲ್ಲಿ ತಿಳಿಸಿದೆ.

ಡ್ರಗ್ಸ್ ಸಾಗಣೆ ಮತ್ತು ಮಾರಾಟ ವಿರುದ್ಧ ರಾಜ್ಯವ್ಯಾಪಿ ಕಾರ್ಯಾಚರಣೆ ಆರಂಭಿಸಿದ್ದ ಎಎನ್‌ಟಿಎಫ್, ಡಿಸೆಂಬರ್ 21ರಂದು ಆರೋಪಿ ಅಬ್ದುಲ್ ಖಾದರ್ ರಶೀದ್ ಅವರನ್ನು ಬಂಧಿಸಿ, ₹1.48 ಕೋಟಿ ಮೌಲ್ಯದ ಮೆಫೆಡ್ರೋನ್ ವಶಪಡಿಸಿಕೊಂಡಿತ್ತು. ಆತ ನೀಡಿದ ಮಾಹಿತಿ ಆಧರಿಸಿ ಬೆಳಗಾವಿ ನಿವಾಸಿ ಪ್ರಶಾಂತ ಯಲ್ಲಪ್ಪ ಪಾಟೀಲ ಅವರನಮ್ನು ವಶಕ್ಕೆ ಪಡೆದು, ವಿಚಾರಣೆಗೆ ಒಳಪಡಿಸಿತ್ತು. ಆತ ನೀಡಿದ ಮಾಹಿತಿ ಆಧರಿಸಿ, ಬೆಂಗಳೂರಿನಲ್ಲಿ ಡ್ರಗ್ಸ್ ತಯಾರಿಸುವ ಮೂರು ಕಾರ್ಖಾನೆಗಳ ಮೇಲೆ ದಾಳಿ ನಡೆಸಲಾಯಿತು ಎಂದೂ ಪ್ರಕಟಣೆ ಹೇಳಿದೆ.

ಡ್ರಗ್ಸ್ ತಯಾರಿಸುವ ಕಾರ್ಖಾನೆಗಳ ಬಗ್ಗೆ ಸ್ಥಳೀಯ ಗಸ್ತು ಪೊಲೀಸರ ಗಮನಕ್ಕೆ ಬಾರದಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಬಾಗಲೂರು, ಕೊತ್ತನೂರು ಮತ್ತು ಅವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ವಸತಿ ಪ್ರದೇಶಗಳಲ್ಲಿ ಹಲವು ತಿಂಗಳಿನಿಂದ ಈ ಘಟಕಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ಮಹಾರಾಷ್ಟ್ರ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಆರೋಪಿಗಳು ಘಟಕ ಆರಂಭಿಸಲು ನಕಲಿ ದಾಖಲೆಗಳನ್ನು ನೀಡಿ ನೋಂದಾಯಿಸಿದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುವುದು. ಇದೇ ಕಾರಣಕ್ಕೆ ಪತ್ತೆ ಹಚ್ಚುವುದು ಕಷ್ಟವಾಗಿದೆ. ಈ ಬಗ್ಗೆ ಜಂಟಿ ತನಿಖೆ ನಡೆಸಲಾಗುವುದು ಎಂದು ನಗರದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಎಎನ್‌ಟಿಎಫ್ ಪ್ರಕಟಣೆ: ‘ಎಎನ್‌ಟಿಎಫ್‌ನ ತಂಡಗಳು ಕಾರ್ಯಾಚರಣೆ ನಡೆಸಿ, ಇತ್ತೀಚೆಗೆ ರಾಜಸ್ಥಾನ ನಿವಾಸಿಗಳಾದ ಸೂರಜ್ ರಮೇಶ್ ಯಾದವ್ ಹಾಗೂ ಮಲ್ಕನ್ ರಾಮಲಾಲ್ ಬಿಷ್ಣೋಯಿ ಅವರನ್ನು ಬಂಧಿಸಿದ್ದವು. ಇವರು ಬೆಂಗಳೂರಿನಲ್ಲಿ ಚಟುವಟಿಕೆ ನಡೆಸುತ್ತಿದ್ದುದು ತನಿಖೆಯಿಂದ ಗೊತ್ತಾಯಿತು’ ಎಂದು ಎಎನ್‌ಟಿಎಫ್ ತನ್ನ ಪ್ರಕಟಣೆಯಲ್ಲಿ ವಿವರಿಸಿದೆ.

‘ಅವರನ್ನು ವಿಚಾರಣೆಗೆ ಒಳಪಡಿಸಿದಾಗ ಬೆಂಗಳೂರಿನಲ್ಲಿ ಮೂರು ತಯಾರಿಕಾ ಘಟಕಗಳು ಇರುವುದಾಗಿ ಆರೋಪಿಗಳು ಬಾಯ್ಬಿಟ್ಟಿದ್ದಾರೆ. ಬಳಿಕ ಈ ಘಟಕಗಳ ಮೇಲೆ ದಾಳಿ ನಡೆಸಿ, ಘನ ಮತ್ತು ದ್ರವ ರೂಪದಲ್ಲಿದ್ದ ಒಟ್ಟು 21.4 ಕೆ.ಜಿ ಮೆಫೆಡ್ರೋನ್ ಜಪ್ತಿ ಮಾಡಲಾಗಿದೆ. ಈ ಡ್ರಗ್ಸ್ ತಯಾರಿಸಲು ಬಳಸುತ್ತಿದ್ದ ಯಂತ್ರೋಪಕರಣಗಳು ಹಾಗೂ ರಾಸಾಯನಿಕಗಳನ್ನು ಮುಟ್ಟುಗೋಲು ಹಾಕಿಕೊಂಡು, ಮೂರೂ ಕಾರ್ಖಾನೆಗಳನ್ನು ಧ್ವಂಸ ಮಾಡಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

‘ಈ ಕಾರ್ಖಾನೆಗಳಲ್ಲಿ ತಯಾರಿಸಲಾಗುತ್ತಿದ್ದ ಮೆಫೆಡ್ರೋನ್ ಅನ್ನು ಹಲವು ರಾಜ್ಯಗಳಿಗೆ ಪೂರೈಸಲಾಗುತ್ತಿತ್ತು. ಈ ಡ್ರಗ್ಸ್ ಮಾರಾಟದಿಂದ ಬಂದ ಹಣವನ್ನು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಸಲಾಗುತ್ತಿತ್ತು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ’ ಎಂದು ತಿಳಿಸಿದೆ.

> **ಶೌರ್ಯ, ಸಾಹಸ, ದಕ್ಷತೆಗೆ ಹೆಸರುವಾಸಿ ಆಗಿದ್ದ ಕರ್ನಾಟಕ ಪೊಲೀಸ್ ಇಲಾಖೆ ಕಾಂಗ್ರೆಸ್ ಸರ್ಕಾರದ ಅಸಮರ್ಥತೆಯಿಂದ ನಿತ್ರಾಣವಾಗಿದೆ. ಡ್ರಗ್ಸ್ ದಂಧೆ ನಡೆಯುತ್ತಿದ್ದರೂ ಪೊಲೀಸರು ಏನು ಮಾಡುತ್ತಿದ್ದಾರೆ?**
>
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

‘₹1.20 ಕೋಟಿ ಮೌಲ್ಯದ ಡ್ರಗ್ಸ್ ಕಚ್ಚಾವಸ್ತು ವಶ’

ಒಂದನೇ ಪುಟದಿಂದ...

‘ಪತ್ತೆಯಾಗಿರುವ ಡ್ರಗ್ಸ್ ರಾಸಾಯನಿಕದ ಮೌಲ್ಯ 1 ಕೆ.ಜಿ.ಗೆ 30 ಲಕ್ಷ. ಒಟ್ಟು 4 ಕೆ.ಜಿ.ಗೆ ₹1.20 ಕೋಟಿ ಆಗುತ್ತದೆ. ಮುಂಬೈನಲ್ಲಿ ಸೆರೆಸಿಕ್ಕ ಆರೋಪಿಯು ನೀಡಿದ ಸುಳಿವಿನ ಮೇರೆಗೆ ಬೆಂಗಳೂರು ನಗರ ಪೊಲೀಸ್, ಮುಂಬೈ ಪೊಲೀಸ್, ಎನ್‌ಸಿಬಿ, ಸೋಕೋ ತಂಡ ಜಂಟಿಯಾಗಿ ಕಾರ್ಯಾಚರಣೆ ನಡೆಸಿವೆ. ಆರೋಪಿಯು ಡ್ರಗ್ಸ್ ತಯಾರಿಸಲು ಬೇಕಾದ ಮೆಫೆಡ್ರೋನ್ ಎಂಬ ರಾಸಾಯನಿಕ ಸಂಗ್ರಹಿಸಿಟ್ಟುಕೊಂಡಿದ್ದ. ಈ ಪ್ರಕರಣದಲ್ಲಿ ಬೆಂಗಳೂರು ನಗರ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದು ಸರಿಯಲ್ಲ ಎಂದರು.

‘ಅನೇಕ ಸಂದರ್ಭಗಳಲ್ಲಿ ಪೊಲೀಸರು, ತಮ್ಮ ರಾಜ್ಯದಲ್ಲಿ ಸೆರೆಸಿಕ್ಕ ಆರೋಪಿಗಳು ನೀಡುವ ಮಾಹಿತಿ ಆಧರಿಸಿ ಬೇರೆ ರಾಜ್ಯಗಳಲ್ಲಿ ಕಾರ್ಯಾಚರಣೆ ಕೈಗೊಳ್ಳುತ್ತಾರೆ. ಈಗಾಗಲೇ ಬೇರೆ ಬೇರೆ ಪ್ರಕರಣಗಳಲ್ಲಿ ನಮ್ಮ ಪೊಲೀಸರ ನಾಲ್ಕು ತಂಡಗಳು ಬೇರೆ ರಾಜ್ಯಗಳಲ್ಲೂ ಮಾಹಿತಿ ಸಂಗ್ರಹಿಸುತ್ತಿವೆ. ಆಗ ಅಲ್ಲಿನ ಪೊಲೀಸರ ವೈಫಲ್ಯ ಎಂದು ಹೇಳಲಾಗುತ್ತದೆಯೇ’ ಎಂದು ಪ್ರಶ್ನಿಸಿದರು.

‘ಬೆಂಗಳೂರಿನಲ್ಲಿ ಮುಂದೆ ಇಂತಹ ಘಟನೆ ಆಗಬಾರದು. ಡಿಸಿಪಿ, ಎಸಿಪಿ ಅಥವಾ ಸ್ಥಳೀಯ ಅಧಿಕಾರಿಗಳು ಯಾರೇ ಇರಲಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಅಮಾನತು ಅಷ್ಟೇ ಅಲ್ಲದೇ ಬೇರೆ ರೀತಿಯ ಕ್ರಮ ತೆಗೆದುಕೊಳ್ಳುತ್ತಿದ್ದೇವೆ’ ಎಂದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಜಂಟಿ ಪೊಲೀಸ್ ಆಯುಕ್ತರಾದ ರಮೇಶ್ ಬಾನೋಥ್, ವಂಶಿಕೃಷ್ಣ, ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಅಜಯ್ ಹಿಲೋರಿ, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಸಭೆಯಲ್ಲಿ ಹಾಜರಿದ್ದರು.

‘ಕಾಂಗ್ರೆಸ್ ಒಂದು ಸಿದ್ಧಾಂತ; ಅದಕ್ಕೆ ಸಾವಿಲ್ಲ’

ಪಕ್ಷದ 140ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದನೆ

ನವದೆಹಲಿ (ಪಿಟಿಐ): ‘ಕಾಂಗ್ರೆಸ್ ಎಂಬುದು ಒಂದು ಸಿದ್ಧಾಂತ. ಸಿದ್ಧಾಂತಗಳಿಗೆ ಎಂದಿಗೂ ಸಾವು ಇಲ್ಲ’ ಎಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಹೇಳಿದ್ದಾರೆ.

ಕಾಂಗ್ರೆಸ್‌ನ 140ನೇ ಸಂಸ್ಥಾಪನಾ ದಿನದ ಅಂಗವಾಗಿ ಪಕ್ಷದ ಕೇಂದ್ರ ಕಚೇರಿ ‘ಇಂದಿರಾ ಭವನ’ದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕಾಂಗ್ರೆಸ್ ಪಕ್ಷ ನಾಶವಾಯಿತು ಎಂದು ಕೆಲವರು ಹೇಳುತ್ತಿದ್ದಾರೆ. ಪಕ್ಷದ ಸಂಸ್ಥಾಪನಾ ದಿನದ ಸಂದರ್ಭದಲ್ಲಿ ಅಂಥವರಿಗೆ ನಾನು ಹೇಳುವುದಿಷ್ಟೆ, ಪಕ್ಷವು ಅಧಿಕಾರ ಕಳೆದುಕೊಂಡಿರಬಹುದು ಆದರೆ, ನಮ್ಮ ಬೆನ್ನೆಲುಬು ಬಲಿಷ್ಠವಾಗಿದೆ. ಅಧಿಕಾರಕ್ಕಾಗಿ ನಾವು ಚೌಕಾಸಿ ಮಾಡುವುದಿಲ್ಲ’ ಎಂದು ಹೇಳಿದರು.

‘ಪಕ್ಷದ ಸಿದ್ಧಾಂತದೊಂದಿಗೆ ನಾವು ರಾಜಿ ಆಗಿಲ್ಲ. ಸಂವಿಧಾನದ ಆಶಯಗಳು ಅಥವಾ ಜಾತ್ಯತೀತ ತತ್ವಗಳು ಇಲ್ಲವೇ ಬಡ ಜನರ ಹಕ್ಕುಗಳೊಂದಿಗೂ ರಾಜಿ ಆಗಿಲ್ಲ. ಪಕ್ಷವು ಯಾವತ್ತೂ ಧರ್ಮದ ಹೆಸರಿನಲ್ಲಿ ಮತ ಕೇಳಿಲ್ಲ. ಮಂದಿರ–ಮಸೀದಿ ಹೆಸರಿನಲ್ಲಿ ದ್ವೇಷ ಹಬ್ಬಿಸಿಲ್ಲ’ ಎಂದು ಖರ್ಗೆ ಹೇಳಿದರು.

ನವದೆಹಲಿಯಲ್ಲಿರುವ ಪಕ್ಷದ ಕೇಂದ್ರ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಪಕ್ಷದ 140ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು. ಸೋನಿಯಾ ಗಾಂಧಿ ಉಪಸ್ಥಿತರಿದ್ದರು —ಪಿಟಿಐ ಚಿತ್ರ

ಖರ್ಗೆ ಭಾಷಣದ ಪ್ರಮುಖ ಅಂಶಗಳು

- ಬಿಜೆಪಿ ಕೈಯಲ್ಲಿ ಈಗ ಅಧಿಕಾರ ಇದೆ ಆದರೆ, ಅವರು ಸತ್ಯ ಹೇಳುತ್ತಿಲ್ಲ. ಇದೇ ಕಾರಣಕ್ಕೆ ಅವರು ಕೆಲವೊಮ್ಮೆ ದತ್ತಾಂಶವನ್ನು ಮುಚ್ಚಿಟ್ಟರೆ ಕೆಲವು ಸಲ ಜನಗಣತಿ ಕಾರ್ಯವನ್ನು ಸ್ಥಗಿತಗೊಳಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಸಂವಿಧಾನ ಬದಲಾಯಿಸುವ ಮಾತುಗಳನ್ನಾಡುತ್ತಾರೆ
- ಇಂದು ಕೆಲವರು ಇತಿಹಾಸದ ಬಗ್ಗೆ ಭಾಷಣ ಮಾಡುತ್ತಿದ್ದಾರೆ. ಆದರೆ, ಅವರ ಪೂರ್ವಜರು ಇತಿಹಾಸದಿಂದಲೇ ವಿಮುಖರಾಗುತ್ತಿದ್ದರು
- ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕ ಹಕ್ಕುಗಳಲ್ಲಿ ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು ಎಂದು ಸಂವಿಧಾನ ಹೇಳುತ್ತದೆ. ಸಂವಿಧಾನ ಪ್ರತಿಪಾದಿಸುವ ಈ ಆಶಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಲವಾದ ನಂಬಿಕೆ ಇದೆ

‘ಕಾಂಗ್ರೆಸ್ ಪಕ್ಷವು ಜನರನ್ನು ಒಂದುಗೂಡಿಸಿದರೆ, ಬಿಜೆಪಿ ವಿಭಜಿಸುತ್ತದೆ. ಕಾಂಗ್ರೆಸ್ ಪಕ್ಷವು ಧರ್ಮವನ್ನು ಒಂದು ನಂಬಿಕೆಯನ್ನಾಗಿ ಮಾತ್ರ ಪರಿಗಣಿಸುತ್ತದೆ. ಕೆಲವರು ಧರ್ಮವನ್ನು ರಾಜಕೀಯವನ್ನಾಗಿ ಮಾಡಿಕೊಂಡಿದ್ದಾರೆ’ ಎಂದರು.

ಕಾರ್ಯಕ್ರಮದಲ್ಲಿ ಕೆ.ಸಿ. ವೇಣುಗೋಪಾಲ್, ಅಜಯ್ ಮಾಕನ್, ಶಶಿ ತರೂರ್, ದಿಗ್ವಿಜಯ್ ಸಿಂಗ್ ಸೇರಿ ಹಲವರು ನಾಯಕರು ಉಪಸ್ಥಿತರಿದ್ದರು. ಪ್ರಿಯಾಂಕಾ ಗಾಂಧಿ ವಾದ್ರಾ ಗೈರಾಗಿದ್ದರು.

ಭಾರತದ ಆತ್ಮದ ದನಿಯಂತೆ: ರಾಹುಲ್



ರಾಹುಲ್ ಗಾಂಧಿ

‘ಕಾಂಗ್ರೆಸ್ ಒಂದು ರಾಜಕೀಯ ಪಕ್ಷ ಮಾತ್ರವಲ್ಲ, ಪ್ರತಿಯೊಬ್ಬ ದುರ್ಬಲ, ಶೋಷಿತ ವ್ಯಕ್ತಿ ಹಾಗೂ ಶ್ರಮಜೀವಿಯ ಪರ ನಿಲ್ಲುವ ಭಾರತದ ಆತ್ಮದ ಧ್ವನಿಯೇ ಆಗಿದೆ’ ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

‘ದ್ವೇಷ, ಅನ್ಯಾಯ ಹಾಗೂ ಸರ್ವಾಧಿಕಾರ ಧೋರಣೆಯಿಂದ ಸಂವಿಧಾನ ರಕ್ಷಿಸುವ ಸಲುವಾಗಿ ಮತ್ತಷ್ಟು ಪ್ರಬಲ ಹೋರಾಟ ನಡೆಸುವುದು ನಮ್ಮ ಅಚಲ ನಿರ್ಧಾರ’ ಎಂದು ಅವರು ಕಾಂಗ್ರೆಸ್ ಸಂಸ್ಥಾಪನಾ ದಿನ ಕಾರ್ಯಕ್ರಮದ ಬಳಿಕ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

‘ಪಕ್ಷದ ಸಂಸ್ಥಾಪನಾ ದಿನದ ಅಂಗವಾಗಿ ಪ್ರತಿಯೊಬ್ಬ ಕಾಂಗ್ರೆಸ್ ಸದಸ್ಯಗೆ ಶುಭಾಶಯಗಳು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಹಾಗೂ ಸಂವಿಧಾನ, ಪ್ರಜಾಪ್ರಭುತ್ವ, ಜಾತ್ಯತೀತ ತತ್ವ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯಂತಹ ಮೌಲ್ಯಗಳನ್ನು ಗಟ್ಟಿಗೊಳಿಸುವುದಕ್ಕೆ ಭದ್ರ ತಳಪಾಯ ಹಾಕಿದ ಪರಂಪರೆಗೆ ಹಾಗೂ ಬಲಿದಾನಗಳಿಗೆ ಗೌರವ ಸಲ್ಲಿಸುವೆ’ ಎಂದು ಅವರು ಪೋಸ್ಟ್‌ನಲ್ಲಿ ಹೇಳಿದ್ದಾರೆ.

> **ಕಾಂಗ್ರೆಸ್ ಪಕ್ಷದ ಮಹಾನ್ ನಾಯಕರ ಶ್ರಮ ಹಾಗೂ ಬಲಿದಾನದ ಫಲವಾಗಿ ಭಾರತವು ಇಂದು ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ**
>
> **ಮಲ್ಲಿಕಾರ್ಜುನ ಖರ್ಗೆ**
>
> ಎಐಸಿಸಿ ಅಧ್ಯಕ್ಷ

‘ಕೃಷ್ಣಾ ಮೇಲ್ದಂಡೆ ಶೀಘ್ರವೇ ಪರಿಹಾರ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಸಂತ್ರಸ್ತರಿಗೆ ಸರ್ಕಾರ ಘೋಷಿಸಿರುವ ಪರಿಹಾರ ವಿತರಣೆಗೆ ದಿನಾಂಕ ಚರ್ಚಿಸ ಲಾಗುತ್ತಿದೆ. ಮುಖ್ಯಮಂತ್ರಿ ಪರಿಹಾರ ವಿತರಿಸುವರು. ಹಿಂದೆ ಸರಿವ ಪ್ರಶ್ನೆಯೇ ಇಲ್ಲ’ ಎಂದು ಸಚಿವ ಆರ್.ಬಿ. ತಿಮ್ಮಾಪುರ ಭಾನುವಾರ ಹೇಳಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಕೃಷ್ಣಾ ಮೇಲ್ದಂಡೆ ಯೋಜನೆಯ ಭೂ ಸಂತ್ರಸ್ತರಿಗೆ ಎಕರೆ ನೀರಾವರಿ ಜಮೀನಿಗೆ ₹40 ಲಕ್ಷ, ಒಣಬೇಸಾಯ ಜಮೀನಿಗೆ ₹30 ಲಕ್ಷ ಪರಿಹಾರ ಘೋಷಿಸಿದ್ದೇವೆ’ ಎಂದು ಹೇಳಿದರು.

ಆರ್.ಬಿ. ತಿಮ್ಮಾಪುರ

ಬಿಜೆಪಿಯವರಿಗೆ ಈತನಕ ಅಧಿಸೂಚನೆ ಹೊರಡಿಸಲು ಸಾಧ್ಯ ವಾಗಿಲ್ಲ. ಮಹದಾಯಿ ಯೋಜನೆಗೆ ಪರಿಸರ ಸಚಿವಾಲಯದ ಅನುಮತಿ ಕೊಡಿಸಲು ಆಗಿಲ್ಲ. ಅವರಿಗೆ ಏನು ನೈತಿಕತೆ ಇದೆ. ಅಧಿವೇಶನದಲ್ಲಿ ಇವರೇನು ಉತ್ತರ ಕರ್ನಾಟಕದ ಸಮಸ್ಯೆ ಚರ್ಚಿಸುತ್ತಾರೆ?’ ಎಂದರು.

ದಿಗ್ವಿಜಯ್ ಸಿಂಗ್ ಕುಟುಕಿದ ಕಾಂಗ್ರೆಸ್ ನಾಯಕರು

ಒಂದನೇ ಪುಟದಿಂದ...

ಅದರಲ್ಲೂ, ಪಕ್ಷದ ಕಾರ್ಯಕ್ರಮವೊಂದರ ಬಳಿಕ ರಾಹುಲ್ ಗಾಂಧಿ ಅವರು, ‘ನಿನ್ನೆ ನೀವು ನಿಮ್ಮ ಕೆಲಸ ಮಾಡಿದಿರಿ’ ಎಂಬುದಾಗಿ ದಿಗ್ವಿಜಯ್ ಸಿಂಗ್ ಉದ್ದೇಶಿಸಿ ಹೇಳಿದ್ದರು. ಇದರ ಬೆನ್ನಲ್ಲೇ ಪಕ್ಷದ ನಾಯಕರು ದಿಗ್ವಿಜಯ್ ಸಿಂಗ್ ಅವರನ್ನು ಕುಟುಕುವಂಥ ಪ್ರತಿಕ್ರಿಯೆಗಳನ್ನು ನೀಡಿದ್ದಾರೆ.

ರಾಹುಲ್ ಗಾಂಧಿ ಅವರ ‘ನಿಗೂಢ’ ಪ್ರತಿಕ್ರಿಯೆಯನ್ನು ಕಾಂಗ್ರೆಸ್ ನಾಯಕರು ಹಲವು ರೀತಿಯಲ್ಲಿ ವಿಶ್ಲೇಷಿಸುತ್ತಿದ್ದಾರೆ. ಒಂದೆಡೆ, ಪಕ್ಷದ ಸಂಘಟನೆ ಬಲಪಡಿಸುವ ವಿಚಾರವಾಗಿ ವ್ಯಕ್ತವಾದ ಕಳಕಳಿಯನ್ನು ರಾಹುಲ್ ಗಾಂಧಿ ಸಕಾರಾತ್ಮಕವಾಗಿ ತೆಗೆದುಕೊಂಡಿದ್ದಾರೆ ಎನ್ನಲಾಗುತ್ತಿದೆ. ಮತ್ತೊಂದೆಡೆ, ಕಾಂಗ್ರೆಸ್ ಮತ್ತು ಆರ್‌ಎಸ್‌ಎಸ್‌ನ ಕಾರ್ಯವೈಖರಿ ಹೋಲಿಕೆ ಮಾಡಿದ್ದಕ್ಕಾಗಿ ರಾಹುಲ್ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ ಎಂದೂ ವಿಶ್ಲೇಷಿಸಲಾಗುತ್ತಿದೆ.

ಕಾಂಗ್ರೆಸ್‌ನಲ್ಲಿ ಆಂತರಿಕವಾಗಿ ಸುಧಾರಣೆಗಳ ಅಗತ್ಯವಿದೆ ಎಂದು ಪ್ರತಿಪಾದಿಸಿ ದಿಗ್ವಿಜಯ್ ಸಿಂಗ್ ಅವರು ವಾರದ ಹಿಂದೆಯಷ್ಟೇ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದರು. ಅದರ ಬೆನ್ನಲ್ಲೇ ಆರ್‌ಎಸ್‌ಎಸ್ ಮತ್ತು ಬಿಜೆಪಿಯನ್ನು ಹೊಗಳಿ ಅವರು ಪೋಸ್ಟ್ ಮಾಡಿದ್ದರು.

ಸಿಂಗ್ ಅವರು ತಮ್ಮ ಈ ಪೋಸ್ಟ್ ಅನ್ನು ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಖಾತೆಗಳಿಗೆ, ಎಐಸಿಸಿ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ, ಸಂಸದರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ‘ಟ್ಯಾಗ್’ ಮಾಡಿದ್ದರು.

ಸಿಂಗ್‌ಗೆ ತರೂರ್ ಬೆಂಬಲ: ದಿಗ್ವಿಜಯ್ ಸಿಂಗ್ ಅಭಿಪ್ರಾಯಗಳಿಗೆ ಮುಖಂಡ ಶಶಿ ತರೂರ್ ಬೆಂಬಲ ವ್ಯಕ್ತಪಡಿಸಿದ್ದಾರೆ.

ಭಾನುವಾರ ನಡೆದ ಪಕ್ಷದ 140ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ತರೂರ್, ದಿಗ್ವಿಜಯ್ ಸಿಂಗ್ ಅವರ ಪಕ್ಕದ ಆಸನದಲ್ಲಿ ಕುಳಿತಿದ್ದರಲ್ಲದೇ, ಅವರೊಂದಿಗೆ ಮಾತುಕತೆಯಲ್ಲಿ ತೊಡಗಿ ಗಮನ ಸೆಳೆದರು.

ಬಳಿಕ, ದಿಗ್ವಿಜಯ್ ಸಿಂಗ್ ಅವರ ಹೇಳಿಕೆ ಕುರಿತಂತೆ ಪತ್ರಕರ್ತರು ಕೇಳಿದ ಪ್ರಶ್ನೆಗೆ, ‘ಪಕ್ಷದ ಸಂಘಟನೆ ಬಲಪಡಿಸಬೇಕು. ಇದರಲ್ಲಿ ಯಾವುದೇ ಸಂಶಯ ಇಲ್ಲ’ ಎಂದು ತರೂರ್ ಪ್ರತಿಕ್ರಿಯಿಸಿದರು.

‘ನೀವು ದಿಗ್ವಿಜಯ್ ಸಿಂಗ್ ಪಕ್ಕದಲ್ಲಿಯೇ ಕುಳಿತಿದ್ದಿರಿ. ಅವರ ಹೇಳಿಕೆ ವಿಚಾರವಾಗಿ ಮಾತುಕತೆ ನಡೆಯಿತೇ’ ಎಂಬ ಮತ್ತೊಂದು ಪ್ರಶ್ನೆಗೆ, ‘ನಾವು ಸ್ನೇಹಿತರು. ಉಭಯಕುಶಲೋಪರಿ ಇದ್ದೇ ಇರುತ್ತದೆ’ ಎಂದು ಉತ್ತರಿಸಿದರು.

ವರಸೆ ಬದಲಿಸಿದ ಸಿಂಗ್

ಪಕ್ಷದ ಸಂಘಟನೆ ಕುರಿತು ಕಟು ಟೀಕೆ ಮಾಡಿದ್ದ ದಿಗ್ವಿಜಯ್ ಸಿಂಗ್, ಭಾನುವಾರ ತಮ್ಮ ವರಸೆ ಬದಲಿಸಿದಂತೆ ಕಂಡುಬಂದರು.

‘ಪಕ್ಷವನ್ನು ಜಿಲ್ಲಾ ಮಟ್ಟದಿಂದ ಮರುಸಂಘಟಿಸುವ ಕಾರ್ಯಕ್ಕೆ ರಾಹುಲ್ ಗಾಂಧಿ ಚಾಲನೆ ನೀಡಿದ್ದಾರೆ. ಈ ಕಾರ್ಯ ತಳಮಟ್ಟದವರೆಗೂ ಹೋಗಲಿದೆ. ಈ ಕಾರ್ಯವನ್ನು ಶೀಘ್ರವೇ ಪೂರ್ಣಗೊಳಿಸಲಾಗುವುದು’ ಎಂದು ಹೇಳಿದರು.

‘ಸಿದ್ಧಾಂತ ವಿಚಾರವಾಗಿ ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಗಾಂಧಿ ಕುಟುಂಬದಲ್ಲಿ ಒಡಕು ಮೂಡಿಸಲು ಬಿಜೆಪಿ ಯತ್ನಿಸುತ್ತಿದೆ’ ಎಂದು ಹೇಳಿದ್ದಾರೆ.

‘ರಾಹುಲ್ ಹಟಾವೋ ಆಂದೋಲನ’

ಕಾಂಗ್ರೆಸ್ ಪಕ್ಷವೀಗ ರಾಹುಲ್ ಬಣ ಹಾಗೂ ಪ್ರಿಯಾಂಕಾ ಬಣ ಎಂದು ಇಬ್ಭಾಗವಾಗಿದೆ. ರಾಹುಲ್ ಗಾಂಧಿ ಬಣದ ವಿರುದ್ಧ ನಡೆಯುತ್ತಿರುವ ನಿರಂತರ ವಾಗ್ದಾಳಿಯು ಪಕ್ಷದ ಕಾರ್ಯಕರ್ತರು ಅವರಲ್ಲಿ ವಿಶ್ವಾಸ ಕಳೆದುಕೊಂಡಿರುವುದನ್ನು ತೋರಿಸುತ್ತದೆ. ರಾಹುಲ್ ಗಾಂಧಿ ಅವರ ಮನವೊಲಿಸುವುದು ಕಷ್ಟ ಎಂದು ಸ್ವತಃ ಅವರ ಮಾರ್ಗದರ್ಶಕ ದಿಗ್ವಿಜಯ್ ಸಿಂಗ್ ಹೇಳುತ್ತಿದ್ದಾರೆ. ಟಿ.ಎಸ್.ಸಿಂಗ್ ದೇವ್, ರಶೀದ್ ಅಲ್ವಿಯಂತಹ ನಾಯಕರು ಸಿಂಗ್ ಅವರ ಮಾತಿಗೆ ಬೆಂಬಲ ಸೂಚಿಸುತ್ತಿದ್ದಾರೆ. ಇದು ರಾಹುಲ್ ಹಟಾವೊ ಆಂದೋಲನದಂತೆ ಗೋಚರಿಸುತ್ತಿದೆ ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಹೇಳಿದ್ದಾರೆ.

ಈ ಬಾರಿ ‘ಬಹುರೂಪಿ ಬಾಬಾಸಾಹೇಬ್’

ಒಂದನೇ ಪುಟದಿಂದ...

‘ದೇಶದಲ್ಲಿ ಅಂಬೇಡ್ಕರ್ ಆಶಯಗಳನ್ನು ಪ್ರತಿಪಾದಿಸುವ ನಾಟಕಗಳಿವೆ. ಸಂಗೀತ–ಹಾಡುಗಳ ಮೂಲಕವೂ ಅಂಬೇಡ್ಕರ್ ಅವರನ್ನು ಕಟ್ಟಿಕೊಡುವ ಪ್ರಯತ್ನಗಳೂ ನಡೆದಿವೆ. ಲಾವಣಿ, ಭಜನೆಗಳಲ್ಲೂ ಅಂಬೇಡ್ಕರ್ ಮೂಡಿದ್ದಾರೆ. ಕನ್ನಡದ ಗಾಯಕರಾದ ಜನಾರ್ದನ್ (ಜನ್ನಿ), ಪಿಚ್ಚಳ್ಳಿ ಶ್ರೀನಿವಾಸ್ ಸೇರಿದಂತೆ ಸ್ಥಳೀಯ ಗಾಯಕರು, ಮರಾಠಿಯ ಅನಿರುದ್ಧ ವಂಕರ್, ಪಂಜಾಬಿನ ಜಾನಪದ, ರಾಪ್ ಮತ್ತು ಹಿಪ್-ಹಾಪ್ ಗಾಯಕಿ ಗಿನ್ನಿ ಮಾಹಿ ಅವರೂ ಅಂಬೇಡ್ಕರ್ ಕುರಿತ ಗೀತೆಗಳನ್ನು ಹಾಡಲಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಮೈಸೂರು ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಡಾ. ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ ಉತ್ಸವಕ್ಕೆ ಸಹಯೋಗ ನೀಡಿದೆ’ ಎಂದು ತಿಳಿಸಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಳಿಗಾಗಿ ಆಹ್ವಾನ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಆ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ(ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ಗುಣ ಆಶ್ವಾಸನೆ	ಬೆಂಜಮಂ/ಇಕ್ಯೂಎಟಿಇ/ಪಿಬಿ/1283/ 2025–26 ದಿನಾಂಕ: 23.12.2025	ರೂ. 49,02,269/– / ರೂ. 98,100/–	05.01.2026ರ ಸಂಜೆ 05:30 ಗಂಟೆಯವರೆಗೆ	07.01.2026ರ ಮಧ್ಯಾಹ್ನ 12:00 ಗಂಟೆಗೆ
2		ಬೆಂಜಮಂ/ಇಕ್ಯೂಎಟಿಇ/ಪಿಬಿ/1308/ 2025–26 ದಿನಾಂಕ: 24.12.2025	ರೂ. 23,34,811/– / ರೂ. 47,000/–	06.01.2026ರ ಸಂಜೆ 05:30 ಗಂಟೆಯವರೆಗೆ	08.01.2026ರ ಮಧ್ಯಾಹ್ನ 12:00 ಗಂಟೆಗೆ
3		ಬೆಂಜಮಂ/ಇಕ್ಯೂಎಟಿಇ/ಪಿಬಿ/1310/ 2025–26 ದಿನಾಂಕ: 24.12.2025	ರೂ. 32,37,500/– / ರೂ. 64,750/–	05.01.2026ರ ಸಂಜೆ 05:30 ಗಂಟೆಯವರೆಗೆ	07.01.2026ರ ಮಧ್ಯಾಹ್ನ 12:00 ಗಂಟೆಗೆ
4		ಬೆಂಜಮಂ/ಇಕ್ಯೂಎಟಿಇ/ಪಿಬಿ/1312/ 2025–26 ದಿನಾಂಕ: 24.12.2025	ರೂ. 65,93,200/– / ರೂ. 1,32,000/–		
5		ಬೆಂಜಮಂ/ಇಕ್ಯೂಎಟಿಇ/ಪಿಬಿ/1314/ 2025–26 ದಿನಾಂಕ: 24.12.2025	ರೂ. 29,56,963.73 / ರೂ. 59,200/–		
6		ಬೆಂಜಮಂ/ಇಕ್ಯೂಎಟಿಇ/ಪಿಬಿ/1317/ 2025–26 ದಿನಾಂಕ: 24.12.2025	ರೂ. 48,25,513/– / ರೂ. 96,510/–	06.01.2026ರ ಸಂಜೆ 05:30 ಗಂಟೆಯವರೆಗೆ	08.01.2026ರ ಮಧ್ಯಾಹ್ನ 12:00 ಗಂಟೆಗೆ
7		ಬೆಂಜಮಂ/ಇಕ್ಯೂಎಟಿಇ/ಪಿಬಿ/1318/ 2025–26 ದಿನಾಂಕ: 24.12.2025	– / ರೂ. 38,000/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಗುಣ ಆಶ್ವಾಸನೆ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜೆಎ/4686/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಕವಿಯ ಹೃದಯವೊಂದು ವೀಣೆ; ಲೋಕವದನು ಮಿಡಿವುದು/
ವ್ಯಕ್ತಿತನವೆ ಕವಿಗೆ ಇಲ್ಲ; ಅವನು ಇಲ್ಲ, ಅಥವಾ ಎಲ್ಲ!
– ಕುವೆಂಪು

ಸಂಪಾದಕೀಯ

ಸ್ವಂತ ಸೂರಿಲ್ಲದವರ ಸಂಖ್ಯೆ ಹೆಚ್ಚಳ ಯೋಜನೆಗಳ ಪರಾಮರ್ಶೆ ಅಗತ್ಯ

ಬಡವರಿಗೆ ಹಾಗೂ ಜನಸಾಮಾನ್ಯರಿಗೆ ವಸತಿ ಕಲ್ಪಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಅನೇಕ ಯೋಜನೆಗಳ ನಡುವೆಯೂ, ರಾಜ್ಯದಲ್ಲಿನ 37.48 ಲಕ್ಷ ಕುಟುಂಬಗಳಿಗೆ ಈವರೆಗೂ ಸ್ವಂತ ಸೂರು ಹೊಂದುವುದು ಸಾಧ್ಯವಾಗಿಲ್ಲ ಎನ್ನುವುದು ಕಳವಳಕಾರಿ ಸಂಗತಿ. ತಲಾ ಆದಾಯದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ಹಾಗೂ 'ಗ್ಯಾರಂಟಿ ಯೋಜನೆ'ಗಳ ಮೂಲಕ ದೇಶಕ್ಕೆ ಮಾದರಿಯಾಗಿರುವ ರಾಜ್ಯದಲ್ಲಿ ಕೋಟ್ಯಂತರ ನಾಗರಿಕರು ಸೂರಿಲ್ಲದೆ ಇರುವುದು ವಿರೋಧಾಭಾಸದಂತಿದೆ. ಕೇಂದ್ರ ಸರ್ಕಾರದ ಸೂಚನೆಯಂತೆ ರಾಜ್ಯ ಸರ್ಕಾರ ನಡೆಸಿದ ಸಮೀಕ್ಷೆ, ನಾಡಿನ 37.48 ಲಕ್ಷ ಕುಟುಂಬಗಳು ಸ್ವಂತ ಮನೆ ಹೊಂದಿಲ್ಲದಿರುವುದನ್ನು ಬೆಳಕಿಗೆ ತಂದಿದೆ. ಇವರಲ್ಲಿ 17.31 ಲಕ್ಷ ಕುಟುಂಬಗಳು ಸ್ವಂತ ನಿವೇಶನವನ್ನೂ ಹೊಂದಿಲ್ಲ. ಸುಮಾರು 20.17 ಲಕ್ಷ ಜನರು ಸ್ವಂತ ನಿವೇಶನಗಳನ್ನು ಖರೀದಿಸಿದ್ದರೂ, ಮನೆ ಕಟ್ಟಿಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ.

ಬಡವರಿಗೆ ಹಾಗೂ ಜನಸಾಮಾನ್ಯರಿಗೆ ವಸತಿ ಕಲ್ಪಿಸಿಕೊಡುವ ಉದ್ದೇಶದಿಂದ ಹಲವು ಸರ್ಕಾರಿ ಯೋಜನೆಗಳು ರೂಪುಗೊಂಡಿವೆ. ಬಸವ ವಸತಿ ಯೋಜನೆ, ಡಾ. ಬಿ.ಆರ್. ಅಂಬೇಡ್ಕರ್ ನಗರ ಮತ್ತು ಗ್ರಾಮೀಣ ವಸತಿ ಯೋಜನೆ, ದೇವರಾಜ ಅರಸು ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆಗಳನ್ನು ರಾಜ್ಯ ಸರ್ಕಾರ ರೂಪಿಸಿದೆ. ಬೆಂಗಳೂರು ಮಹಾನಗರದಲ್ಲಿನ ವಸತಿ ರಹಿತರಿಗಾಗಿ ಬಹುಮಹಡಿ ವಸತಿ ಯೋಜನೆ ಜಾರಿಯಲ್ಲಿದೆ. ಕೇಂದ್ರ ಸರ್ಕಾರ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ವಸತಿ ರಹಿತರಿಗಾಗಿ ಪ್ರಧಾನಮಂತ್ರಿ ಆವಾಸ್ ಯೋಜನೆ ಜಾರಿಗೊಳಿಸಿದೆ. ಪಿಎಂ-ಜನಮನ್ ಯೋಜನೆ ಅಡಿಯೂ ಮನೆಗಳನ್ನು ಮಂಜೂರು ಮಾಡಲಾಗುತ್ತಿದೆ. ಇಷ್ಟೆಲ್ಲ ಯೋಜನೆಗಳು ಇರುವಾಗಲೂ 37.48 ಲಕ್ಷ ಕುಟುಂಬಗಳು ಈಗಲೂ ಮನೆ ಹೊಂದಿಲ್ಲದಿರುವುದು, ಯೋಜನೆಗಳ ಫಲಪ್ರದತೆಯಲ್ಲಿ ಸಮಸ್ಯೆ ಇರುವುದರ ಸೂಚನೆಯಂತಿದೆ. ವಸತಿ ಯೋಜನೆಗಳ ಆಮೆಗತಿಯೂ ಸ್ವಂತ ಸೂರಿಲ್ಲದವರ ಸಂಖ್ಯೆ ಹೆಚ್ಚಾಗುವುದಕ್ಕೆ ಕಾರಣವಾಗಿದೆ. ರಾಜ್ಯ ಸರ್ಕಾರ, 2024–25ನೇ ಸಾಲಿನಲ್ಲಿ 7.38 ಲಕ್ಷ ಮನೆಗಳನ್ನು ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ನಿರ್ಮಿಸುವುದಾಗಿ ಘೋಷಿಸಿತ್ತು. ಆದರೆ, 3.27 ಲಕ್ಷ ಮನೆಗಳ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು, ಅವುಗಳಲ್ಲಿ ಈವರೆಗೆ 9,839 ಮನೆಗಳಷ್ಟೇ ಪೂರ್ಣಗೊಂಡಿವೆ; 46,540 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇನ್ನೂ 4.11 ಲಕ್ಷ ಮನೆಗಳ ಅನುಮೋದನೆ ಬಾಕಿ ಉಳಿದಿದೆ. ಕೇಂದ್ರದ ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ 2024–25ರಲ್ಲಿ ರಾಜ್ಯದಲ್ಲಿ 2.74 ಲಕ್ಷ ಮನೆ ನಿರ್ಮಾಣದ ಗುರಿ ಹೊಂದಿದ್ದರೂ, ಇಲ್ಲಿಯವರೆಗೆ 4,443 ಮನೆಗಳು ನಿರ್ಮಾಣವಷ್ಟೇ ಪೂರ್ಣವಾಗಿದೆ.



ಹಲವು ವಸತಿ ಯೋಜನೆಗಳ ನಡುವೆಯೂ ಸ್ವಂತ ಸೂರಿಲ್ಲದವರು ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವಸತಿ ಹಕ್ಕನ್ನು ಎಲ್ಲರಿಗೂ ದೊರಕಿಸುವುದು ಸರ್ಕಾರಕ್ಕೆ ಆದ್ಯತೆಯ ವಿಷಯವಾಗಬೇಕು.

ನಗರೀಕರಣ, ಬಡತನ, ವಲಸೆ ಮತ್ತು ಅಸಮರ್ಪಕ ಆಡಳಿತ ನೀತಿಗಳಿಂದಾಗಿ ವಸತಿ ಸಮಸ್ಯೆ ಹೆಚ್ಚಾಗುತ್ತಿದೆ. ನಿವೇಶನರಹಿತರಿಗಾಗಿ ಸಾಕಷ್ಟು ಯೋಜನೆಗಳನ್ನು ರೂಪಿಸಲಾಗಿದ್ದರೂ, ಅವುಗಳ ಅನುಷ್ಠಾನದಲ್ಲಿನ ವಿಳಂಬ, ಭ್ರಷ್ಟಾಚಾರ ಮತ್ತು ಅರ್ಹತಾ ಮಾನದಂಡಗಳ ಸಮಸ್ಯೆಯು ಯೋಜನೆಗಳ ಉದ್ದೇಶಗಳು ಪೂರ್ಣಗೊಳ್ಳದಿರುವುದಕ್ಕೆ ಕಾರಣವಾಗಿವೆ. ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ವಿಳಂಬ, ನಿವೇಶನಕ್ಕಾಗಿ ಪಕ್ಕಾ ದಾಖಲೆಗಳ ಕೊರತೆ, ಸಾಲ ಮಂಜೂರಾತಿ ವಿಳಂಬದಂತಹ ಸಮಸ್ಯೆಗಳೂ ಮನೆಗಳ ನಿರ್ಮಾಣ ಕುಂಟುವಂತೆ ಮಾಡಿವೆ. ಸರ್ಕಾರದ ಮಹತ್ವಾಕಾಂಕ್ಷೆಯ ವಸತಿ ಯೋಜನೆಯಲ್ಲಿ ಸರ್ಕಾರ ನೀಡುವ ಕಡಿಮೆ ಮೊತ್ತದ ಸಹಾಯಧನ ನಿರ್ಮಾಣ ವೆಚ್ಚಕ್ಕೆ ಹೋಲಿಸಿದರೆ ಕನಿಷ್ಠ ಪ್ರಮಾಣದ್ದಾಗಿದೆ. ಉದ್ಯೋಗಖಾತರಿ ಯೋಜನೆಯಡಿ ದೊರೆಯುವ ₹20,000 ನೆರವಿನೊಂದಿಗೆ ಸರ್ಕಾರದಿಂದ ₹1.40 ಲಕ್ಷ ದೊರೆಯಲಿದ್ದು, ಉಳಿದ ಮೊತ್ತವನ್ನು ಫಲಾನುಭವಿಯೇ ಭರಿಸಬೇಕಾಗಿದೆ. ತನ್ನ ಪಾಲಿನ ಮೊತ್ತ ಭರಿಸುವುದು ಬಹುತೇಕರಿಗೆ ಸಾಧ್ಯವಾಗದೆ ಇರುವುದು ಮನೆಯ ನಿರ್ಮಾಣ ಕನಸಾಗಿಯೇ ಉಳಿಯಲು ಕಾರಣವಾಗಿದೆ. ಆಹಾರ, ನೀರು ಹಾಗೂ ವಸತಿ ಪ್ರತಿಯೊಬ್ಬ ನಾಗರಿಕನಿಗೆ ಅವಶ್ಯವಾದ ಮೂಲ ಸೌಕರ್ಯಗಳು. ಆಹಾರ ಮತ್ತು ನೀರು ಒದಗಿಸಲು ಸರ್ಕಾರ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳು ಸಾಕಷ್ಟು ಯಶಸ್ಸು ಪಡೆದಿವೆ. ವಸತಿಗೆ ಸಂಬಂಧಿಸಿದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ತೊಡಕುಗಳ ಬಗ್ಗೆ ಸರ್ಕಾರ ಪರಾಮರ್ಶೆ ನಡೆಸಬೇಕಾಗಿದೆ. ಹೆಚ್ಚಿನ ಅನುದಾನ ನೀಡುವುದರ ಜೊತೆಗೆ ಯೋಜನೆಗಳ ಪಾರದರ್ಶಕ ಹಾಗೂ ತ್ವರಿತ ಅನುಷ್ಠಾನದ ಬಗ್ಗೆಯೂ ಗಮನನೀಡಬೇಕಾಗಿದೆ. ಸ್ವಂತ ಸೂರು ಹೊಂದುವುದು ಪ್ರತಿಯೊಬ್ಬರ ಹಕ್ಕಾಗಿದ್ದು, ಆ ಹಕ್ಕನ್ನು ದೊರಕಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ.

ಇರುವುದೇ ಹೀಗೆ...

ಕಲಾವಿದ ಜೀನ್ಸ್ ಗಾಲ್ಷಿಯೋನ ಸುಪ್ರಸಿದ್ಧ ಕಲಾಕೃತಿಯೊಂದರಲ್ಲಿ, ಬಲಿಷ್ಠನನ್ನು ಕೃಶಕಾಯದ ಬಡವ ಹೊತ್ತುಕೊಂಡಿದ್ದಾನೆ. ನ್ಯಾಯದ ತಕ್ಕಡಿ ಇರುವುದೂ ಅವನ ಕೈಯಲ್ಲೇ. ದೇಶ, ಕಾಲವನ್ನು ಮೀರಿ, ಸಾರ್ವಕಾಲಿಕ ಕಟುಸತ್ಯವನ್ನು ಸದಾ ಮುಖಕ್ಕೆ ರಾಚುವ ಕಲಾಕೃತಿ ಇದು.

ಗಿರಿಧರ ಕಾರ್ಕಳ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಸರ್ಕಾರಿ ಆಸ್ಪತ್ರೆಗಳನ್ನು ಮುಚ್ಚುತ್ತಿಲ್ಲ. ಆದರೆ, ಈ ವಿಷಯದಲ್ಲಿ ಬಿಜೆಪಿಯ ಸೋಷಿಯಲ್ ಮೀಡಿಯಾ ತಂಡವು ಸುಳ್ಳುಸುದ್ದಿ ಹರಡುತ್ತಿದೆ. ಜನರ ಹಾದಿ ತಪ್ಪಿಸಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ.

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 29-12-2000

• ಆಲೂಗೆಡ್ಡೆ ಖರೀದಿ ಮತ್ತೆ ಆರಂಭ: ರೈತರಿಗೆ ನೆಮ್ಮದಿ

ಹುಬ್ಬಳ್ಳಿ, ಡಿ. 28– ಹುಬ್ಬಳ್ಳಿಯ ಅಮರಗೋಳ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಮಂಗಳವಾರ ಹತಾಶನಾದ ರೈತನೊಬ್ಬ ಆಲೂಗೆಡ್ಡೆ ಖರೀದಿ ಕೇಂದ್ರದ ನೌಕರರೊಬ್ಬರ ಮೇಲೆ ಹಲ್ಲೆ ನಡೆಸಿದ ನಂತರ ಎರಡು ದಿನ ಸ್ಥಗಿತಗೊಂಡಿದ್ದ ಆಲೂಗೆಡ್ಡೆ ಖರೀದಿ ಇಂದು ಮುಂಜಾನೆಯಿಂದ ಮತ್ತೆ ಆರಂಭವಾಯಿತು.

ಖರೀದಿ ನಿಂತೇ ಹೋಗುತ್ತದೆ ಎಂದು ಭಾವಿಸಿ ಆತಂಕದ ಕ್ಷಣಗಳನ್ನು ಎದುರಿಸುತ್ತಿದ್ದ ಬೆಳೆಗಾರರು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ. ಜಿಲ್ಲಾ ಆಡಳಿತದ ಹಿರಿಯ ಅಧಿಕಾರಿಗಳ ನೇರ ಉಸ್ತುವಾರಿಯಲ್ಲಿ ಚುರುಕಿನ ಖರೀದಿ ಚಟುವಟಿಕೆಗಳು ಇಂದು ಮುಂಜಾನೆ ಎರಡು ಮಾರುಕಟ್ಟೆಗಳಲ್ಲಿ ಆರಂಭವಾದವು.

• ಅಸ್ಸಾಂ: ಮತ್ತೆ ಎಂಟು ಹಿಂದಿ ಭಾಷಿಕರ ಹತ್ಯೆ

ಗುವಾಹಟಿ, ಡಿ. 28 (ಪಿಟಿಐ)– ಅಸ್ಸಾಂನಲ್ಲಿರುವ ಹಿಂದಿ ಭಾಷಿಕ ಸಮುದಾಯದ ಮೇಲೆ ನಡೆದ ಇನ್ನೊಂದು ಆಕ್ರಮಣದಲ್ಲಿ ಅಪರಿಚಿತ ದುಷ್ಕರ್ಮಿಗಳು ಎಂಟು ಮಂದಿಯನ್ನು ಕೊಂದಿದ್ದಾರೆ.

ಮೃತರಲ್ಲಿ ಒಬ್ಬ ಮಹಿಳೆ, ಮೂವರು ಮಕ್ಕಳೂ ಸೇರಿದ್ದಾರೆ. ಕರ್ಬಿ ಅಂಗ್ಲೊಂಗ್ ಜಿಲ್ಲೆಯ ರೊಂಗ್‌ನಗರ, ಗ್ರಾಮಗಳಲ್ಲಿ ಶಸ್ತ್ರಸಜ್ಜಿತ ಉಗ್ರಗಾಮಿಗಳು, ಬಿಹಾರಿಗಳ ಮೇಲೆ ಮನಬಂದಂತೆ ಗುಂಡು ಹಾರಿಸಿದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

75 ವರ್ಷಗಳ ಹಿಂದೆ

ಶುಕ್ರವಾರ, 29-12-1950

• ಪಕ್ಷದ ವಿಶ್ವಾಸ ಕೇಳುವುದಾಗಿ ಕೆ.ಸಿ. ರೆಡ್ಡಿ

ಬೆಂಗಳೂರು, ಡಿ. 28– ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಮೇಲೆ ಅವಿಶ್ವಾಸ ಸೂಚಿಸಿರುವ ಸದಸ್ಯರಿಗೂ, ನಾಯಕರಿಗೂ ಪ್ರಶ್ನೆಯ ಇತ್ಯರ್ಥದ ವಿಧಾನದ ಬಗ್ಗೆ ಒಂದು ರೀತಿಯ ಒಪ್ಪಂದವಾಗಿ ಇಂದು ನಡೆದ ಪಕ್ಷದ ಸಭೆ ಮುಕ್ತಾಯಗೊಂಡಿತು.

35 ಮಂದಿ ಸದಸ್ಯರು ತಾವು ಕಳುಹಿಸಿದ್ದ ಅವಿಶ್ವಾಸ ನಿರ್ಣಯವನ್ನು ವಾಪಸು ಪಡೆದರು. ನಾಯಕತ್ವ ಪ್ರಶ್ನೆಯ ಇತ್ಯರ್ಥಕ್ಕಾಗಿ, ಜನವರಿ 10 ಅಥವಾ ಅದರೊಳಗಾಗಿ ಪಕ್ಷದ ಸಭೆ ಕರೆದು ಸಭೆಯ ವಿಶ್ವಾಸ ಕೇಳುವುದಾಗಿ ನಾಯಕ ಕೆ.ಸಿ. ರೆಡ್ಡಿ ತಿಳಿಸಿದರು.

ಸಭೆ ಮಧ್ಯಾಹ್ನ 1.30ಕ್ಕೆ ಕುಮಾರ ಪಾರ್ಕಿನಲ್ಲಿ ಪಕ್ಷದ ನಾಯಕ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಇಷ್ಟೊಂದು ಲೈಟಾದ್ರೆ ಹೇಗೆ ಸ್ವಾಮಿ!



ಅನುಸಂಧಾನ
ರವೀಂದ್ರ ಭಟ್ಟ

> ಮುಖ್ಯಮಂತ್ರಿ ಕುರ್ಚಿಗೆ ಸಂಬಂಧಿಸಿದ ಕಾಂಗ್ರೆಸ್ ಒಳಜಗಳದ ಪರಿಣಾಮ ಆಡಳಿತ ಯಂತ್ರದ ಮೇಲೂ ಆಗಿದೆ. ಕರ್ನಾಟಕದಲ್ಲಿ ಭ್ರಷ್ಟಾಚಾರದ ಸೂಚ್ಯಂಕ ಹೊಸ ದಾಖಲೆ ಬರೆದಂತಿದೆ. ಜಗಳ ಪರಿಹರಿಸಬೇಕಾದ ಹೈಕಮಾಂಡ್ ಮೂಕಪ್ರೇಕ್ಷಕನಂತಿದೆ. ಈ ಮೌನ, ವರಿಷ್ಠರ ದೌರ್ಬಲ್ಯದ ಸಂಕೇತದಂತಿದೆ ಹಾಗೂ ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆ ಉಂಟುಮಾಡಿದೆ.

ಕಾಂಗ್ರೆಸ್ ಪಕ್ಷದ ಒಳಜಗಳ ಸದ್ಯಕ್ಕೆ ಮುಗಿಯುವ ಲಕ್ಷಣ ಕಾಣುತ್ತಿಲ್ಲ. ಇದು ಬರೀ ಆ ಪಕ್ಷದ ವಿದ್ಯಮಾನ ಅಲ್ಲ. ಕಾಂಗ್ರೆಸ್ ಆಡಳಿತ ಪಕ್ಷವೂ ಆಗಿರುವುದರಿಂದ, ಅದರ ಜಗಳದ ಪರಿಣಾಮ ಇಡೀ ರಾಜ್ಯದ ಮೇಲಾಗುತ್ತಿದೆ. ರಾಜಕೀಯ ಅತಂತ್ರ ಸ್ಥಿತಿ ಇದ್ದರೆ ಆಡಳಿತ ಯಂತ್ರ ಸುಗಮವಾಗಿ ಸಾಗುವುದಿಲ್ಲ ಎನ್ನುವ ಸತ್ಯ ಆಡಳಿತ ನಡೆಸುವ ಎಲ್ಲರಿಗೂ ಗೊತ್ತಿದೆ. ರಾಜ್ಯದಲ್ಲಿ ಕಳೆದ ಆರು ತಿಂಗಳಿನಿಂದಲೂ ಮುಖ್ಯಮಂತ್ರಿ ಬದಲಾವಣೆಯ ವಿಷಯವೇ ಪ್ರಮುಖವಾಗಿ ಚರ್ಚೆಯಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬೆಂಬಲಿಗರ ಹೇಳಿಕೆಗಳಿಂದ ಮತದಾರರ ತಲೆ ಚಿಟ್ಟು ಹಿಡಿದು ಹೋಗಿದೆ. 'ಯಾರಾದ್ರೂ ಮುಖ್ಯಮಂತ್ರಿಯಾಗಿರಿ. ಒಳ್ಳೆಯ ಆಡಳಿತ ಕೊಡ್ರಪ್ಪಾ' ಎಂದು ಅವರು ಹೇಳುತ್ತಿದ್ದಾರೆ. ಹೀಗೆಯೇ ಮುಂದುವರಿದರೆ ಮುಂದಿನ ಚುನಾವಣೆಯಲ್ಲಿ ನಿಮ್ಮ ಕತೆ ಅಷ್ಟೆ ಎಂಬ ಸಂದೇಶವನ್ನೂ ಮತದಾರರು ಕೊಟ್ಟಾಗಿದೆ. ಆದರೂ, ಕಾಂಗ್ರೆಸ್ ಹೈಕಮಾಂಡ್ ಮಾತ್ರ ಮುಗುಂ ಆಗಿಯೇ ಇದೆ. ಕೈಕಮಾಂಡ್ ಲೈಟ್ ಆಗಿದೆ. ಅದರ ಲಾಭವನ್ನು ಇನ್ಯಾರೋ ಪಡೆಯುತ್ತಾರೆ. ಆದರೂ ಕೈಕಮಾಂಡ್ ಕತ್ತಲೆಯಲ್ಲಿಯೇ ಹೆಜ್ಜೆ ಇಡುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ 'ಹೈಕಮಾಂಡ್ ಒಪ್ಪಿದರೆ ನಾನೇ ಐದು ವರ್ಷ ಮುಖ್ಯಮಂತ್ರಿಯಾಗಿರುತ್ತೇನೆ' ಎಂದು ಹೇಳಿಕೆ ಕೊಡುತ್ತಾರೆ. ಅವರ ಮಗ ಯತೀಂದ್ರ ಮಾತ್ರ 'ನನ್ನ ತಂದೆ ಐದು ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ. ಅದರಲ್ಲಿ ಅನುಮಾನವೇ ಬೇಡ' ಎಂದು ಘಂಟಾಘೋಷವಾಗಿ ಹೇಳುತ್ತಾರೆ. 'ನಾನು ಮತ್ತು ಸಿದ್ದರಾಮಯ್ಯ ಇಬ್ಬರೂ ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ' ಎಂದು ಡಿ.ಕೆ. ಶಿವಕುಮಾರ್ ಹೇಳುತ್ತಾರೆ. ಕೆಲವೇ ಸಮಯದಲ್ಲಿ ಅವರ ಬೆಂಬಲಿಗರು ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮುಹೂರ್ತವನ್ನೇ ನಿಗದಿ ಮಾಡುತ್ತಾರೆ. ಇಲ್ಲಿ ಯಾರು ಹೈಕಮಾಂಡ್, ಯಾರು ಕೈಕಮಾಂಡ್ ಎನ್ನುವುದು ಅರ್ಥವಾಗದೆ ಮತದಾರ ತಲೆ ಕೆರೆದುಕೊಳ್ಳುತ್ತಿದ್ದಾನೆ.

'ಕಾಂಗ್ರೆಸ್ ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದೆ. ಸೂಕ್ತ ಕಾಲದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳುತ್ತಾರೆ. ಎಐಸಿಸಿ ಅಧ್ಯಕ್ಷರಿಗಿಂತಲೂ ಹೈಕಮಾಂಡ್ ಯಾರು ಎನ್ನುವ ಪ್ರಶ್ನೆ ಜನರನ್ನು ಕಾಡದೇ ಇರದು. 'ರಾಹುಲ್ ಗಾಂಧಿ ಎಲ್ಲ ನೋಡಿಕೊಳ್ಳುತ್ತಾರೆ' ಎಂದು ಎಐಸಿಸಿ ಅಧ್ಯಕ್ಷರು ಒಮ್ಮೆ ಹೇಳಿದರೆ ಇನ್ನೊಮ್ಮೆ 'ರಾಜ್ಯ ಕಾಂಗ್ರೆಸ್ ಸಮಸ್ಯೆಗೂ ಹೈಕಮಾಂಡ್‌ಗೂ ಸಂಬಂಧವೇ ಇಲ್ಲ. ರಾಜ್ಯ ನಾಯಕರೇ ಅದನ್ನು ಬಗೆಹರಿಸಿಕೊಳ್ಳಬೇಕು' ಎಂದೂ ಹೇಳುತ್ತಾರೆ. 'ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ ಎಂದು ಹೇಳುತ್ತಿದ್ದ ಸಿದ್ದರಾಮಯ್ಯ ಈಗ ರಾಹುಲ್ ಗಾಂಧಿ ಹೇಳಿದಂತೆ ಕೇಳುತ್ತೇನೆ' ಎನ್ನುತ್ತಿದ್ದಾರೆ. ಇಲ್ಲಿ ಏನ್ ನಡೀತಿದೆ ಎನ್ನುವುದು ಜನರಿಗೂ ಅರ್ಥವಾಗುತ್ತಿಲ್ಲ. ಬಹುಶಃ ಕಾಂಗ್ರೆಸ್ ಹೈಕಮಾಂಡ್‌ಗೂ ಅರ್ಥವಾಗುತ್ತಿಲ್ಲ. ಇವೆಲ್ಲದರ ನಡುವೆ ಆಡಳಿತ ಹಳ್ಳ ಹಿಡಿದುಹೋಗಿದೆ. ಮೊದಲು ಮುಖ್ಯಮಂತ್ರಿ ಯಾರೆಂಬುದು ಇತ್ಯರ್ಥವಾಗಲಿ. ಮುಖ್ಯಮಂತ್ರಿ ಬದಲಾವಣೆ ಇಲ್ಲದಿದ್ದರೂ ಸಂಪುಟ ಪುನರ್ ರಚನೆಯೋ, ವಿಸ್ತರಣೆಯೋ ಏನೋ ಒಂದು ಆಗಲೇಬೇಕಲ್ಲ. ಅದೆಲ್ಲ ಮುಗೀಲಿ. ನಂತರ ಎಲ್ಲ ಕೆಲಸ ಮಾಡೋಣ ಎಂದು ಅಧಿಕಾರಿಗಳು ತಮ್ಮ ತಮ್ಮ ಲಾಭ ನೋಡಿಕೊಂಡು ಇದ್ದಾರೆ.

'ಪರಸ್ಪರ ಹೊಂದಾಣಿಕೆಯಿಂದ ಹೋಗಿ. ಇಬ್ಬರೂ ಒಂದಾಗಿದ್ದೀರಿ ಎಂಬ ಸಂದೇಶವನ್ನು ರಾಜ್ಯದ ಜನತೆಗೆ ನೀಡಿ' ಎಂಬ ಹೈಕಮಾಂಡ್ ಸೂಚನೆಗೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರೂ ಬ್ರೇಕ್ ಫಾಸ್ಟ್ ಮೀಟಿಂಗ್ ಮಾಡಿದ್ದೂ ಆಯಿತು. ಅವರು ಇವರ ಮನೆಗೆ ಬಂದರು. ಇವರು ಅವರ ಮನೆಗೆ ಹೋದರು. ಅಲ್ಲಿಗೆ ಎಲ್ಲವೂ ಸುಖಾಂತ್ಯವಾಯಿತು ಎನ್ನುವ ಹೊತ್ತಿಗೆ ಮತ್ತೆ ಯತೀಂದ್ರ ಸಿದ್ದರಾಮಯ್ಯ ತಮ್ಮ ತಂದೆ ಅಧಿಕಾರದಲ್ಲಿ ಮುಂದುವರಿಯುತ್ತಾರೆ ಎಂಬ ಹೇಳಿಕೆ ನೀಡಿದರು. ಮತ್ತೆ ಆ ಕಡೆ ಈ ಕಡೆ ಹೇಳಿಕೆಗಳು ಪುಂಖಾನುಪುಂಖವಾಗಿ ಹೊರಬರತೊಡಗಿದವು. 'ಬಾಯಿ ಮುಚ್ಚಿಕೊಂಡು ಕುಳಿತುಕೊ' ಎಂದು ಸಿದ್ದರಾಮಯ್ಯ ಅವರೂ ತಮ್ಮ ಮಗನಿಗೆ ಹೇಳಲಿಲ್ಲ. ಹೈಕಮಾಂಡ್ ಕೂಡ ಖಡಕ್ ಎಚ್ಚರಿಕೆಯನ್ನು ಎರಡೂ ಬಣದವರಿಗೆ ಕೊಡಲಿಲ್ಲ. ಇದರಿಂದ ಸ್ಪಷ್ಟವಾಗುವ ಅಂಶ ಏನೆಂದರೆ, ಮಗ ಹೇಳಿದ್ದರ ಬಗ್ಗೆ ಅಪ್ಪನಿಗೂ ಸಹಮತ ಇದೆ ಎನ್ನುವುದು. ಇನ್ನೊಂದು ಯಾರಿಗೂ ಸ್ಪಷ್ಟ ಸಂದೇಶ ನೀಡದಷ್ಟು ಕೈಕಮಾಂಡ್ ದುರ್ಬಲ ಆಗಿದೆ ಎನ್ನುವುದು. ದೇಶದೆಲ್ಲೆಡೆ ಅಧಿಕಾರ ಕಳೆದುಕೊಂಡು ಮೂರು ಮತ್ತೊಂದು ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಹೈಕಮಾಂಡ್ ಇಷ್ಟೊಂದು ಲೈಟ್ ಆದರೆ ಹೇಗೆ ಸ್ವಾಮಿ?

ಸಿದ್ದರಾಮಯ್ಯ ಅವರು 'ಅಹಿಂದ' ನಾಯಕರು. ಹಿಂದುಳಿದ ವರ್ಗಗಳ ಮುಖಂಡ. ಅವರ ಪದಚ್ಯುತಿಯಾದರೆ ಹಿಂದುಳಿದ ವರ್ಗಗಳು ಮುನಿಸಿಕೊಳ್ಳಬಹುದು. 'ಅಹಿಂದ' ವರ್ಗದ ಮತ ಬಾರದೇ ಇರಬಹುದು. ಕೇರಳ ಮತ್ತು ಇತರ ರಾಜ್ಯಗಳ ಚುನಾವಣೆಯಲ್ಲಿಯೂ ಕಾಂಗ್ರೆಸ್‌ಗೆ ಹಿನ್ನಡೆಯಾಗಬಹುದು ಎನ್ನುವ ಚಿಂತೆ ಹೈಕಮಾಂಡ್‌ಗೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡದೇ ಇದ್ದರೆ ರಾಜ್ಯದಲ್ಲಿ ಒಕ್ಕಲಿಗರು ಸಿಟ್ಟಾಗಬಹುದು. ಕಳೆದ ಚುನಾವಣೆಯಲ್ಲಿ ಒಕ್ಕಲಿಗ ಸಮುದಾಯದವರು ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂಬ ಭರವಸೆಯ ಹಿನ್ನೆಲೆಯಲ್ಲಿಯೇ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ. ಅವರು ಮುಖ್ಯಮಂತ್ರಿ ಆಗದಿದ್ದರೆ ಮುಂದಿನ ಚುನಾವಣೆಯಲ್ಲಿ ಒಕ್ಕಲಿಗರು ಜೆಡಿಎಸ್ ಕಡೆಗೆ ವಾಲುವುದು ಗ್ಯಾರಂಟಿ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟ ಮೂರನೇ ಎರಡರಷ್ಟು ಬಹುಮತ ಪಡೆಯುವುದು ಗ್ಯಾರಂಟಿ ಎಂಬುದು ಒಕ್ಕಲಿಗರ ವಾದ. ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೂ ಕಷ್ಟ. ಶಿವಕುಮಾರ್‌ಗೆ ಹುದ್ದೆ ಕೊಡದಿದ್ದರೂ ಕಷ್ಟ. ಅಡಕತ್ತರಿಯಲ್ಲಿ ಸಿಲುಕಿದ ಕೈಕಮಾಂಡ್ ಆಲೋಚಿಸುವ ಶಕ್ತಿಯನ್ನೇ ಕಳೆದುಕೊಂಡಂತೆ ಕಾಣುತ್ತಿದೆ. ಈ ನಡುವೆ ದಲಿತ ಮುಖ್ಯಮಂತ್ರಿ ಎನ್ನುವ ಬಾಣ ಪ್ರಯೋಗವೂ ಆಗಿದೆ. ದಲಿತರೊಬ್ಬರನ್ನು ಮುಖ್ಯಮಂತ್ರಿ ಮಾಡಲು ಇದು ಸಕಾಲವಾದರೂ ಅದನ್ನು ಮಾಡುವಷ್ಟು ಧೈರ್ಯ ಕೈಕಮಾಂಡ್‌ಗೆ ಇದ್ದ ಹಾಗೆ ಕಾಣುತ್ತಿಲ್ಲ. ದಲಿತ ಮುಖ್ಯಮಂತ್ರಿ ಎನ್ನುವುದು ರಾಜಕೀಯದಾಟವೇ ವಿನಾ, ನಿಜವಾಗಿಯೂ ಸಾಮಾಜಿಕ ನ್ಯಾಯ ಒದಗಿಸುವ ಬದ್ಧತೆಯ ಪ್ರತೀಕ ಅಲ್ಲ ಎನ್ನುವುದು ಎಳೆಯರಿಗೂ ಅರ್ಥವಾಗುವಂತಿದೆ.

ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇರುವುದು ಮೂರೇ ರಾಜ್ಯಗಳಲ್ಲಿ. ಅದರಲ್ಲೂ ಕರ್ನಾಟಕ ಪ್ರಮುಖ ರಾಜ್ಯ. ಈಗ ಸದ್ಯದಲ್ಲಿಯೇ ಕೇರಳ ವಿಧಾನಸಭೆ ಚುನಾವಣೆ ಬರಲಿದೆ. ಆ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಫಲಿತಾಂಶ ಕಾಂಗ್ರೆಸ್ ಪಕ್ಷಕ್ಕೆ ಶುಭ ಸೂಚನೆಯನ್ನೂ ನೀಡಿದೆ. ಇಂತಹ ಸಮಯದಲ್ಲಿ ಪಕ್ಕದ ಕರ್ನಾಟಕದಲ್ಲಿ ಅಧಿಕಾರ ಹಂಚಿಕೆಯ ಸಮಸ್ಯೆ ಮಾಡಿಕೊಳ್ಳುವುದಕ್ಕಿಂತ ಇಬ್ಬರನ್ನೂ ಸಂಭಾಳಿಸಿ ಇಬ್ಬರಿಂದಲೂ 'ಲಾಭ' ಮಾಡಿಕೊಳ್ಳುವ ಯೋಚನೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಇರುವಂತೆ ಕಾಣುತ್ತಿದೆ.

'ನಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲ. ನಾವಿಬ್ಬರೂ ಒಂದಾಗಿದ್ದೇವೆ' ಎಂದು ಡಿ.ಕೆ. ಶಿವಕುಮಾರ್ ಪದೇ ಪದೇ ಹೇಳುತ್ತಾರೆ. ಆದರೆ, ಅದನ್ನು ನಂಬುವ ಸ್ಥಿತಿಯಲ್ಲಿ ಮತದಾರರು ಇಲ್ಲ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ರಣದೀಪ್ ಸುರ್ಜೇವಾಲ ಸಮ್ಮುಖದಲ್ಲಿಯೇ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಒಪ್ಪಂದ ಆಗಿದೆ. ಎರಡೂವರೆ ವರ್ಷದ ನಂತರ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಯನ್ನು ಬಿಟ್ಟುಕೊಡಬೇಕು ಎಂದು ಇತ್ಯರ್ಥವಾಗಿದೆ. ಸಿದ್ದರಾಮಯ್ಯ ಅವರು ಡಿ.ಕೆ. ಸುರೇಶ್ ಅವರ ತಲೆಯ ಮೇಲೆ ಕೈ ಇಟ್ಟು 'ಗಡುವಿನ ಒಂದು ವಾರಕ್ಕೆ ಮೊದಲೇ ನಿನ್ನ ಅಣ್ಣನಿಗೆ ಹುದ್ದೆ ಬಿಟ್ಟು ಕೊಡುತ್ತೇನೆ' ಎಂದು ಮಾತುಕೊಟ್ಟಿದ್ದಾರೆ. ಈಗ ಅವರು ಮಾತು ಉಳಿಸಿಕೊಳ್ಳಬೇಕು ಅಷ್ಟೆ ಎಂದು ಶಿವಕುಮಾರ್ ಬೆಂಬಲಿಗರು ಗುಸುಗುಸು ಪಿಸಪಿಸ ಮಾಡುತ್ತಿದ್ದಾರೆ. 'ನಮ್ಮಿಬ್ಬರ ನಡುವೆ ಯಾವ ಒಪ್ಪಂದವೂ ಆಗಿಲ್ಲ' ಎಂದು ಸಿದ್ದರಾಮಯ್ಯ ಅವರು ವಿಧಾನಮಂಡಲದಲ್ಲಿಯೇ ಹೇಳಿದ್ದರೆ, 'ನಮ್ಮಿಬ್ಬರ ನಡುವೆ ಒಪ್ಪಂದ ಆಗಿರುವುದು ನಿಜ' ಎಂದು ಶಿವಕುಮಾರ್ ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಕಾಂಗ್ರೆಸ್ ಹೈಕಮಾಂಡ್ ಮೌನವಾಗಿಯೇ ಇದೆ.

ಈ ಗೊಂದಲಗಳ ನಡುವೆ ರಾಜ್ಯದ ಮತದಾರರ ಸ್ಥಿತಿ ಊದೋದು ಕೊಟ್ಟು ಬಾರಿಸೋದು ಕೊಂಡಂತೆ ಆಗಿದೆ. ಬಿಜೆಪಿ ಕೋಮುವಾದಿ ಪಕ್ಷ, ಮಿತಿ ಮೀರಿದ ಭ್ರಷ್ಟಾಚಾರ ಇದೆ, ಶೇ 40ರಷ್ಟು ಕಮಿಷನ್ ದಂಧೆ ನಡೆಯುತ್ತಿದೆ ಎಂದು ಆರೋಪಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿಯೂ ಭ್ರಷ್ಟಾಚಾರ ಕಡಿಮೆಯಾಗಿರುವ ಲಕ್ಷಣ ಕಾಣುತ್ತಿಲ್ಲ. ಶೇ 40ರಷ್ಟಿದ್ದ ಭ್ರಷ್ಟಾಚಾರ ಶೇ 63ರಷ್ಟಾಗಿದೆ ಎಂಬ ಹೇಳಿಕೆಗಳು ಬರುತ್ತಿವೆ. ಗುತ್ತಿಗೆದಾರರು ಈ ಸರ್ಕಾರದ ವಿರುದ್ಧವೂ ಆರೋಪ ಮಾಡುತ್ತಿದ್ದಾರೆ.

ಇದೆಲ್ಲ ಗೊಂದಲ ಹೀಗೆಯೇ ಮುಂದುವರಿದರೆ ಪಂಚ ಗ್ಯಾರಂಟಿಯಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷಕ್ಕೆ ಮತದಾರರು ಬೀಳ್ಕೊಡುಗೆಯ ಗ್ಯಾರಂಟಿ ಕರುಣಿಸುವುದಂತೂ ಪಕ್ಕಾ.

ವಾಚಕರ ವಾಣಿ

ಶ್ರೇಯಕ್ಕೆ ಜಗ್ಗಾಟ; ಜನರ ವಿಶ್ವಾಸಕ್ಕೆ ಚ್ಯುತಿ

ಫಾಕ್ಸ್‌ಕಾನ್ ಕಂಪನಿಯ ಹೂಡಿಕೆಗೆ ಸಂಬಂಧಿಸಿದಂತೆ ರಾಜಕೀಯ ಲಾಭ ಪಡೆಯಲು ನಡೆಯುತ್ತಿರುವ ಪೈಪೋಟಿ ಜನರ ಬುದ್ಧಿಮತ್ತೆಗೆ ಮಾಡುವ ಅವಮಾನ. ಉದ್ಯೋಗ ಸೃಷ್ಟಿಯಂತಹ ಗಂಭೀರ ವಿಷಯವೂ ಪಕ್ಷಗಳ ಸ್ವಪ್ರಚಾರಕ್ಕೆ ವೇದಿಕೆಯಾಗಿರುವುದು ಹೇಸಿಗೆ ಹುಟ್ಟಿಸುವಂತಿದೆ. ಯುವಜನರ ಭವಿಷ್ಯ ರೂಪಿಸಬೇಕಾದ ವಿಷಯವು ಅಸಹ್ಯ ಜಗಳಕ್ಕೆ ಕಾರಣವಾಗಿರುವುದು ನೋವುಂಟುಮಾಡುತ್ತದೆ. ರಾಜ್ಯ ಸರ್ಕಾರದ ಸಹಕಾರವಿಲ್ಲದೆ ಕೈಗಾರಿಕೆ ಬಾರದು; ಕೇಂದ್ರ ಸರ್ಕಾರದ ನೀತಿಗಳಿಲ್ಲದೆ ಜಾಗತಿಕ ಕಂಪನಿಗಳು ಬರುವುದಿಲ್ಲ ಎಂಬ ಸರಳ ಸತ್ಯವನ್ನು ಮರೆಮಾಚುವುದು ಸರಿಯೆ? ಅಭಿವೃದ್ಧಿಯು ಪಕ್ಷದ ಬಾವುಟವಾಗದೆ ಜನರ ಬದುಕಿನ ಆಶಯವಾಗಬೇಕು. ಒಬ್ಬರ ಸಾಧನೆಯನ್ನು ಮತ್ತೊಬ್ಬರು ನುಂಗಿಕೊಳ್ಳುವ ರಾಜಕೀಯ ವರ್ತನೆ ಜನಸಾಮಾನ್ಯರ ವಿಶ್ವಾಸಕ್ಕೆ ಚ್ಯುತಿ ತರುತ್ತದೆ.

ಶಂಕರ ವಡ್ಡರ, ಗದಗ

'ಗ್ಯಾರಂಟಿ' ಮಮಕಾರ: ಶಾಲೆ ಬಗ್ಗೆ ತಾತ್ಸಾರ

ಸರ್ಕಾರಿ ಶಾಲೆಗಳಿಂದಷ್ಟೇ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಉಳಿವು ಸಾಧ್ಯ. ಈಗಿರುವ ಪಾಠ ಆಧಾರಿತ ಮೌಲ್ಯಮಾಪನ, ಎಫ್‌ಎಲ್‌ಎನ್, ನಲಿ–ಕಲಿ, ಸ್ಯಾಟ್ಸ್, ಎಚ್‌ಆರ್‌ಎಂಎಸ್, ಬಿಎಲ್‌ಒ ಮುಂತಾದ ಹೊರೆಗಳನ್ನು ಸ್ಥಗಿತಗೊಳಿಸಿ, ಮಕ್ಕಳಿಗೆ ಬೋಧನೆ ಮಾಡಲಷ್ಟೇ ಶಿಕ್ಷಕರನ್ನು ಸೀಮಿತಗೊಳಿಸಿದರೆ ಶೈಕ್ಷಣಿಕ ಪ್ರಗತಿ ಸಾಧ್ಯ. 20 ವರ್ಷಗಳ ಹಿಂದೆ ಮೊಟ್ಟೆ, ಬಾಳೆಹಣ್ಣು, ರಾಗಿಗಂಜಿ, ಶೂ, ಸಾಕ್ಸ್, ಕೆನೆಭರಿತ ಹಾಲು ಯಾವುದೂ ಇರಲಿಲ್ಲ. ಆಗ ಮಕ್ಕಳು ಹೆಚ್ಚು ಆರೋಗ್ಯವಾಗಿದ್ದರು. ಈಗ ಇವೆಲ್ಲ ಕೊಟ್ಟರೂ ಮಕ್ಕಳ ದೈಹಿಕ ಬೆಳವಣಿಗೆ ಕುಂಠಿತವಾಗುತ್ತಿದೆ. ಕೇವಲ ವರ್ಣರಂಜಿತ ಯೋಜನೆಗಳಿಂದ ಸರ್ಕಾರಿ ಶಾಲೆ ಉಳಿಸಲು ಸಾಧ್ಯವಿಲ್ಲ. ಅವುಗಳ ಗುಣಮಟ್ಟ ಸುಧಾರಿಸುವುದು ಬರೀ ಸರ್ಕಾರದ ಜವಾಬ್ದಾರಿಯಲ್ಲ, ಅದು ಸಮುದಾಯದ ಸಹಭಾಗಿತ್ವವನ್ನೂ ಬಯಸುತ್ತದೆ. ಸರ್ಕಾರದಿಂದ ಉಚಿತವಾಗಿ ನೀಡುವ ಎಲ್ಲವನ್ನೂ ಸ್ವೀಕರಿಸುವ ಪೋಷಕರು, ಮಕ್ಕಳನ್ನು ಸಂಪೂರ್ಣ ಉಚಿತವಾಗಿರುವ ಸರ್ಕಾರಿ ಶಾಲೆಗೆ ಸೇರಿಸಲು ಹಿಂಜರಿಯುತ್ತಿರುವುದು ವಿಪರ್ಯಾಸ.

ಕಲ್ಲನಗೌಡ ಬಿರಾದಾರ, ವಿಜಯಪುರ

ಸಾಮಾಜಿಕ ಭದ್ರತೆ ಬೇರುಗಳು ಸಡಿಲ

'ಉನ್ನಾವೊ: ನ್ಯಾಯಕ್ಕೇ ಅಗ್ನಿಪರೀಕ್ಷೆ!' ಲೇಖನ (ಲೇ: ನೇಮಿಚಂದ್ರ, ಪ್ರ. ವಾ., ಡಿ. 26) ಓದಿದಾಗ ಮಕ್ಕಳ ಭವಿಷ್ಯದ ಕುರಿತು ಭಯದ ಭಾವನೆ ಮೂಡಿತು. ನಿರ್ಭಯವಾಗಿ ಉತ್ತಮ ಸಾಮಾಜಿಕ ವ್ಯಕ್ತಿತ್ವ ರೂಪಿಸಿಕೊಳ್ಳುವುದು ಬದುಕಿನ ಗುರಿ. ಆದರೆ, ಇಂತಹ ಅತಂತ್ರ ಪರಿಸ್ಥಿತಿಯಿಂದ ಸಾಮಾಜಿಕ ಭದ್ರತೆಯ ಭಾವನೆ ಮೂಡಿಸಲು ಸಾಧ್ಯವೆ? ದುಷ್ಟರು ಅಧಿಕಾರದಲ್ಲಿದ್ದು ದುರ್ವರ್ತನೆ ತೋರುತ್ತಿರುವಾಗ ಸಭ್ಯರು, ಸುಸಂಸ್ಕೃತರು ಸುಮ್ಮನಿದ್ದರೆ ಹೇಗೆ? ನಾವು ಇನ್ನು ಮುಂದಾದರೂ ನಾಗರಿಕ ಸಮಾಜ ಕಟ್ಟಲು ಪ್ರಜ್ಞಾವಂತರಾಗಿ ಪ್ರಜಾತಂತ್ರ ಮೌಲ್ಯಗಳ ಅಡಿ ಕಾರ್ಯಪ್ರವೃತ್ತರಾಗದಿದ್ದರೆ ಇನ್ನೆಲ್ಲಿಯ ಪ್ರಜಾಪ್ರಭುತ್ವ? ಇನ್ನೆಲ್ಲಿಯ ಬದುಕುವ ಹಕ್ಕು?

ಮಾದಪ್ಪ ಎಸ್. ಕಠಾರಿ, ವಿಜಯಪುರ

ಶಾಲಾ ವಾರ್ಷಿಕೋತ್ಸವ ಕಡ್ಡಾಯವಾಗಲಿ

ವಿದ್ಯಾರ್ಥಿಗಳ ಸುಪ್ತ ಪ್ರತಿಭೆ ಅನಾವರಣಗೊಳಿಸಲು ಶಾಲಾ ವಾರ್ಷಿಕೋತ್ಸವ ಅಗತ್ಯ. ಹಿಂದೆ ಸಂಜೆ ಆರು ಗಂಟೆಯಿಂದ ಬೆಳಗಿನ ಸೂರ್ಯೋದಯದವರೆಗೂ ಶಾಲಾ ವಾರ್ಷಿಕೋತ್ಸವ ನಡೆಯುತ್ತಿದ್ದವು. ಪ್ರಸ್ತುತ ಕೆಲವು ಶಾಲೆಗಳಲ್ಲಿ ವಾರ್ಷಿಕ ಉತ್ಸವಗಳೇ ನಡೆಯುತ್ತಿಲ್ಲ. ಎಲ್ಲ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಮಕ್ಕಳ ಹಬ್ಬವಾಗಿ ವಾರ್ಷಿಕೋತ್ಸವವನ್ನು ಕಡ್ಡಾಯವಾಗಿ ಆಚರಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಸುತ್ತೋಲೆ ಹೊರಡಿಸಬೇಕಿದೆ.

ಎಸ್.ಎನ್. ಅಮೃತ, ಪುತ್ತೂರು

ಪಹಣಿ ಅವಾಂತರ: ಅನ್ನದಾತರು ಕಕ್ಕಾಬಿಕ್ಕಿ

2017–18ರಲ್ಲಿ ರಾಜ್ಯ ಸರ್ಕಾರ ರೈತರ ಹೊಲಗಳಿಗೆ ಹೊಸದಾಗಿ ಪೋಡಿ ಮಾಡುವುದಾಗಿ ಘೋಷಿಸಿತ್ತು. ಬಳಿಕ ಮೂರ್ನಾಲ್ಕು ವರ್ಷ ಕಾಲಹರಣ ಮಾಡಿತು. ಈ ಸಂದರ್ಭದಲ್ಲಿ ಹಣಕಾಸಿನ ಅವಶ್ಯಕತೆ ಇರುವವರು ತಮ್ಮ ಜಮೀನನ್ನು ಮಾರಾಟ ಮಾಡಿದ್ದಾರೆ. ಆಗ ಕಂದಾಯ ಇಲಾಖೆಯ ನೌಕರರು ಹಲವಾರು ವರ್ಷಗಳ ಹಿಂದೆಯೇ ಹಿಸ್ಸೆ ಮಾಡಲಾದ ಜಮೀನುಗಳನ್ನು ಒಂದೇ ಸರ್ವೆ ನಂಬರ್ ಅಡಿ ತೋರಿಸಿ ಅದರ ಭಾಗವನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿದ್ದಾರೆ. ಇದರ ಪರಿಣಾಮ, ಒಂದು ಕಾಲದಲ್ಲಿ ಕೂಡು ಕುಟುಂಬದ ಚಿಕ್ಕಪ್ಪ, ದೊಡ್ಡಪ್ಪರ ಹೆಸರು, ಅವರು ಯಾರಿಗಾದರೂ ಮಾರಾಟ ಮಾಡಿದ್ದರೆ ಅವರು ಹೆಸರುಗಳೂ ಪಹಣಿಯಲ್ಲಿ ಕಾಣಿಸಿಕೊಳ್ಳುತ್ತಿವೆ.

ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ತಹಶೀಲ್ದಾರ್ ಕಚೇರಿ ಸಿಬ್ಬಂದಿಯ ಅವಾಂತರವೇ ಇದಕ್ಕೆ ಕಾರಣ. ಇದನ್ನು ಸರಿಪಡಿಸಿಕೊಡಲು ತಹಶೀಲ್ದಾರ್ ಕಚೇರಿಗೆ ವಿನಂತಿಸಿದರೆ, ಅದಕ್ಕೆ ಹತ್ತಾರು ದಾಖಲೆ ತರಲು ಹೇಳುತ್ತಾರೆ. ಇಲಾಖೆಯ ಈ ತಪ್ಪಿಗೆ ಹೊಣೆ ಯಾರದು?

ಶಿವಶರಣಪ್ಪ ರಾ. ಬಿರಾದಾರ, ಹಿರೇಬೇವನೂರ

ದಿನಪತ್ರಿಕೆ ಓದಿನಿಂದ ಮಕ್ಕಳ ಜ್ಞಾನ ವೃದ್ಧಿ

ಉತ್ತರ ಪ್ರದೇಶ ಸರ್ಕಾರವು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಿರುವುದು ಒಳ್ಳೆಯ ನಿರ್ಧಾರ. ದಿನಪತ್ರಿಕೆ ಓದುವುದರಿಂದ ಮಕ್ಕಳಲ್ಲಿ ಓದುವ ಸಂಸ್ಕೃತಿಯನ್ನು ಉತ್ತೇಜಿಸಿದಂತಾಗುತ್ತದೆ; ಜೊತೆಗೆ ಮೊಬೈಲ್, ಟಿ.ವಿ. ವೀಕ್ಷಣೆಯ ಗೀಳನ್ನು ತಪ್ಪಿಸಿದಂತಾಗುತ್ತದೆ. ವಿದ್ಯಾರ್ಥಿಗಳಿಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಅರಿವು ಮೂಡಲಿದೆ. ಸಾಮಾನ್ಯ ಜ್ಞಾನ, ಶಬ್ದ ಭಂಡಾರವೂ ಹೆಚ್ಚಲಿದೆ. ಕರ್ನಾಟಕ ಸರ್ಕಾರವೂ ರಾಜ್ಯದ ಎಲ್ಲಾ ಶಾಲೆಗಳಲ್ಲಿ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಬೇಕಿದೆ.

ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

ಚುರುಮುರಿ

ಕುರಿಗಳು ಸಾರ್...

• ಸುಮಂಗಲಾ

'**ಹೊಸ** ವರ್ಷಕ್ಕೆ ಏನು ಸಾಧನೆ ಮಾಡಬೇಕಂತ ಗುರಿ ಹಾಕಿಕೊಂಡೀ?' ಬೆಕ್ಕಣ್ಣ ಕೆದಕಿತು.

'ಸಾಲಗೀಲ ಮಾಡದೆ ನೆಮ್ಮದಿಯಿಂದ ಒಂದು ವರ್ಷ ಕಳೆಯೋ ಕನಸಷ್ಟೆ ನನ್ನದು. ಎಲ್ಲಿಯ ಗುರಿ? ಗುರಿಗಳು ಏನಿದ್ದರೂ ಕುರ್ಚಿ ಕನಸಿನ ನಮ್ಮ ರಾಜಕಾರಣಿಗಳಿಗೆ' ಎಂದೆ.

'ಅದೂ ನಿಜಾನೆ. ಡಿಕೇಶಂಕಲ್ಲು ಮತ್ತು ಸಿದ್ದು ಅಂಕಲ್ಲು ಇಬ್ಬರದ್ದೂ ಒಂದೇ ಗುರಿ... ಸಿಎಂ ಕುರ್ಚಿ. 2026ರಲ್ಲಿ ಸಿದ್ದು ಅಂಕಲ್ಲು ಗುರಿ ಉಳಿಸಿಕೊಳ್ಳುತಾರೋ ಅಥವಾ ಡಿಕೇಶಂಕಲ್ಲು ಗುರಿ ಗೆಲ್ಲುತಾರೋ ಅಂತ ಕಾದು ನೋಡೂಣು' ಎಂದು ಬೆಕ್ಕಣ್ಣ ನಕ್ಕಿತು.

'ಇಬ್ಬರ ಜಗಳ ಮೂರನೆಯವರಿಗೆ ಲಾಭ ಅನ್ನೂ ಹಂಗೆ ಕಮಲ–ದಳಗಳ ಕನಸು, ಗುರಿ ಎರಡೂ ಅಂದರೆ 2026ರ ಕ್ರಾಂತಿ ಇರಬೌದು.'

'ಯಾವ ತಿಂಗಳಲ್ಲಿ ಕ್ರಾಂತಿ ಅನ್ನೂದು ಗುಟ್ಟಾದ ಗುರಿ! ಕಮಲ–ದಳಗಳ ಈ ಕನಸಿಗೆ ರಹಸ್ಯವಾಗಿ ಕೈಜೋಡಿಸೋರು ಅದಾರೆ' ಎಂದು ಬೆಕ್ಕಣ್ಣ ಕಣ್ಣು ಮಿಟುಕಿಸಿತು.

'ಮತ್ತೆ ಮೋದಿಮಾಮಾರ ಗುರಿ ಏನಂತೆ?' ನಾನು ಕುತೂಹಲದಿಂದ ಕೇಳಿದೆ.

'2026ರಲ್ಲಿ ದೇಶದ ಎಲ್ಲ ನಗರಗಳಲ್ಲಿರೋ ಮಹಾತ್ಮ ಗಾಂಧಿ ಹೆಸರಲ್ಲಿರೋ ರಸ್ತೆಗಳು, ವೃತ್ತಗಳ ಹೆಸರನ್ನು ಮೊದಲು ಬ್ಯಾರೆ ಮಾಡದು... ವಿಕಸಿತ ಮಾರ್ಗ, ಏಳಿಗೆ ಪಥ, ಅಭ್ಯುದಯ ವೃತ್ತ, ಹಿಂಗೆ ಸೂಕ್ತವಾದ ಹೆಸರು ಇಡಾದು ಒಂದು ಗುರಿ. ವಿಶ್ವಗುರುವಿನ ಬತ್ತಳಿಕೆಯಲ್ಲಿ ಇನ್ನಾ ಭಾಳ ಗುರಿಗಳು ಅದಾವು' ಬೆಕ್ಕಣ್ಣ ಮೀಸೆ ತಿರುವಿತು.

'ಸದ್ಯ... ಭಾರತದ ಸುಪ್ರಜೆಗಳ ಹೆಸರನ್ನು ಬದಲಿಸೋ ಗುರಿ ಇಟ್ಟುಕೊಳ್ಳದಿದ್ದರೆ ಸಾಕು' ಎಂದು ನಾನು ನಕ್ಕೆ.

'ನೀವು ಶ್ರೀಸಾಮಾನ್ಯರು ಅಂದ್ರ ಕುರಿಗಳೇ! ನಿಮಗೆ ಹೊಸದಾಗಿ ಕುರಿಗಳು ಅಂತ ನಾಮಕರಣ ಮಾಡೂ ಅಗತ್ಯನೇ ಇಲ್ಲ! ನಿಸಾರ್ ಅಹಮದ್ ಕವಿಗಳು ಭಾಳ ಹಿಂದೇನೆ ಕುರಿಗಳು ಸಾರ್ ಕುರಿಗಳು ಅಂತ ಕವನ ಬರೆದಿದ್ದು ನಿಮ್ಮಂತವರ ಕುರಿತೇ!' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿರುವಿತು.

ಸಂಗತ

ನಡೆಯುತ್ತ ನಡೆಯುತ್ತ ಅಂತರಂಗದ ಅರಿವು

ಗ್ರಾಮಭಾರತದೊಂದಿಗೆ ಅಂತರಂಗದ ಸಾಧ್ಯತೆಗಳನ್ನು ಅರಿವಿಗೆ ತರುವ ಉದ್ದೇಶದ ಈ ಪಾದಯಾತ್ರೆ, ಬದುಕಿನ ಸಹಜ ವಾಸ್ತವಗಳನ್ನು ಅರ್ಥ ಮಾಡಿಸುವಂತಿದೆ.

• ಡಾ. ಆರ್. ಬಾಲಸುಬ್ರಹ್ಮಣ್ಯಂ

'**ನಮ್ಮ ನಡೆ,** ಅಂತರಂಗದ ಕಡೆಗೆ' ಹೆಸರಿನ ವಿಶಿಷ್ಟ ಪಾದಯಾತ್ರೆ (ಧಾರವಾಡದಲ್ಲಿ ಡಿ. 27ರಿಂದ 31ರವರೆಗೆ), ವಿವಿಧ ಕ್ಷೇತ್ರಗಳ ತಜ್ಞರು, ಜನಸಾಮಾನ್ಯರು, ವಿದ್ಯಾರ್ಥಿಗಳು ಜೊತೆಯಾಗಿ ನಡೆಸುವ, ನಿತ್ಯ 10 ಕಿ.ಮೀ. ಕ್ರಮಿಸುವ ಪಾದಯಾತ್ರೆ. ಹಳ್ಳಿಗಳಿಗೆ ತೆರಳಿ, ಗ್ರಾಮೀಣರ ಬದುಕು, ಸಾಧನೆ, ಬವಣೆ ಹಾಗೂ ಬೇಕು–ಬೇಡಗಳ ಬಗ್ಗೆ ಚಿಂತನ–ಮಂಥನ ನಡೆಸಲಿದ್ದೇವೆ. ಇದು ಚಿಂತೆ ಮತ್ತು ಚಿಂತನೆಯ ಮಧ್ಯೆ ಸಾಗುವ ಆತ್ಮಾವಲೋಕನದ ಒಂದು ಹೆಜ್ಜೆ.

ನಾವು ಹಳ್ಳಿಗರ ಸಾಂಗತ್ಯದಲ್ಲಿ, ನಿಧಾನಕ್ಕೆ ನಿಸರ್ಗ ನಡಿಗೆ ಮಾಡಿದಾಗ, ಹಂಚಿಕೊಂಡು ಉಂಡಾಗ, ನಿತ್ಯದ ಅವರ ದೈಹಿಕ ಶ್ರಮದ ಕೆಲಸಗಳನ್ನು ಗಮನಿಸಿದಾಗ, ಹಳ್ಳಿಗರ ಮೌಖಿಕ ಕಥಾನಕಗಳನ್ನು, ಅನುಭವಾಮೃತವನ್ನು ಅನುಭವಿಸಿದಾಗ, ಆ ಕೇಳ್ಮೆಗೆ ಸಾತ್ವಿಕತೆ ಸಿದ್ಧಿಸುತ್ತದೆ. ಅಂತರಂಗದ ನಡಿಗೆ, ಹಳ್ಳಿ ಮತ್ತು ಹಳ್ಳಿಗರ ಬದುಕಿನ ರಮ್ಯ ಕಲ್ಪನೆಯ ನಿರೂಪಣೆಯಾಗದೆ, ಕೊರತೆಗಳ ನಡುವೆಯೇ ಪುಟಿದೇಳುವ ಶ್ರಮಜೀವಿಗಳ, ಪರಸ್ಪರ ಅವಲಂಬಿತ ಬದುಕಿನ ಮಾದರಿಗಳನ್ನು ಬೆಳಕಿಗೆ ತರುತ್ತದೆ.

ನಡಿಗೆಯಲ್ಲಿ ಭಾಗಿಯಾಗುವ ನಮ್ಮಲ್ಲಿನ ಅನೇಕರು ನಾಯಕತ್ವದ, ವೃತ್ತಿಪರ ಉದ್ಯೋಗಗಳಲ್ಲಿ ಪಳಗಿದವರು. ಪರಿಸ್ಥಿತಿಗಳನ್ನು ವಿಶ್ಲೇಷಿಸಿ, ಸಮಸ್ಯೆಯನ್ನು ಸಂಶೋಧಿಸಿ, ಅದಕ್ಕೊಂದು ಪರಿಹಾರ ಸೂಚಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವವರು. ಅಂತರಂಗದೆಡೆಗಿನ ನಮ್ಮ ನಡಿಗೆ, ಸಮಸ್ಯೆಗಳನ್ನು ಪರಿಹರಿಸುವ ಮನಃಸ್ಥಿತಿಯಿಂದ, ಅವುಗಳನ್ನು ಹೇಗಿವೆಯೋ ಹಾಗೇ ನೋಡುವ ದೃಷ್ಟಿಯನ್ನು ಕಲಿಸಿಕೊಡುತ್ತದೆ.

ಹಳ್ಳಿಯವರೊಂದಿಗೆ ಜೊತೆಯಾಗಿ ನಡೆದಾಗ, ಒಂದು ಹೊಸ ಸಾಧ್ಯತೆಯ ಅನಾವರಣವಾಗುತ್ತದೆ. ಆಗ, ಅಭಿವೃದ್ಧಿ ಎನ್ನುವುದು ಹೇರಿಕೆಯಂತೆ ಭಾಸವಾಗುವುದಿಲ್ಲ. ಬದಲಾಗಿ, ಒಂದು ಸಹಜ ಸಂವಾದ–ಸಂಭಾಷಣೆಯಂತೆ ಸಹಭಾಗಿತ್ವದಲ್ಲಿ ವಿಕಸಿತಗೊಳ್ಳುತ್ತದೆ. ಇದು ಮೇಲಿಂದ ಕೆಳಕ್ಕೆ ಬಂದು ತಲುಪಿದ ಮಾದರಿಯಂತಿರದೆ, ಪರಸ್ಪರರ ಸಂವಹನದಿಂದ ಉತ್ಪನ್ನವಾದ, ಜೀವದ್ರವ್ಯದ ಅನುಕರಣೀಯ ಪ್ರಯೋಗದಂತಿರಬಹುದು.

ಸಮುದಾಯಗಳು ಸ್ವತಃ ಜ್ಞಾನದ ಭಂಡಾರವಾಗಿರುತ್ತವೆ. ಜ್ಞಾನವು ತಲೆಮಾರುಗಳಿಂದ, ಭೂಮಿ, ಹವಾಮಾನ, ಅಭಾವಗಳು ಮತ್ತು ಸಾಮಾಜಿಕ ಸಂರಚನೆಯ ಬಂಧಗಳನ್ನು ನಿರ್ವಹಿಸುತ್ತಾ, ತಲೆತಲಾಂತರದಿಂದ ಬೆಳೆದು ಬಂದಿರುತ್ತದೆ. ಭಿನ್ನ ಭಿನ್ನ ವಿಚಾರಗಳು, ಜ್ಞಾನದ ಶಾಖೆಗಳು, ಪರಸ್ಪರ ಪೂರಕವಾಗಿ, ಸಮನ್ವಯತೆ ಸಾಧಿಸುತ್ತವೆ ಎಂಬುದನ್ನು ಅಂತರಂಗದ ನಡಿಗೆಯ ಮೂಲಕ ಅನ್ವೇಷಿಸುವ ಹೆಬ್ಬಯಕೆ ನಮ್ಮೆಲ್ಲರದ್ದು.

ಆಂತರಿಕ ನಡಿಗೆಯ ಮೂಲಕ ನಮ್ಮ ದೇಹಾಲಸ್ಯ ಮತ್ತು ಮನಸ್ಸಿನ ಉದ್ವೇಗವನ್ನು ಶಮನಗೊಳಿಸುತ್ತದೆ. ಚಿತ್ತ ಚಾಂಚಲ್ಯವನ್ನು ತೊಲಗಿಸಿ, ಮನಸ್ಸನ್ನು ಲಯಬದ್ಧಗೊಳಿಸಿ, ಏಕಾಗ್ರತೆ ಸಾಧಿಸಲು, ಶ್ರುತಿಬದ್ಧಗೊಳಿಸುತ್ತದೆ. ಮನಸ್ಸು ಸ್ಥಿರವಾದಾಗ, ನಾವು ಪ್ರತಿಕ್ರಿಯಾತ್ಮಕವಾಗಿ ವರ್ತಿಸದೆ, ಹೆಚ್ಚು ಗ್ರಹಿಸುವ ಮನಃಸ್ಥಿತಿ ಉಳ್ಳವರಾಗುತ್ತೇವೆ. ಇದು ನಮ್ಮ ನಂಬಿಕೆಯ ತಳಹದಿಯನ್ನು ಅಲ್ಲಾಡಿಸುವ ಮತ್ತು ಇರುಸುಮುರುಸು ಉಂಟು ಮಾಡುವ, ಗ್ರಾಮೀಣ ಪರಿಸ್ಥಿತಿಗಳನ್ನು ಎದುರಿಸಿದಾಗ, ಪ್ರಸಂಗಾವಧಾನ ಮೆರೆಯಲು ಸಹಕಾರಿ.

ನನ್ನ ಅನುಭವದಲ್ಲಿ, ದಿನಗಳು ಕಳೆದಂತೆ, ಈ ನಡಿಗೆಯಲ್ಲಿ ಭಾಗವಹಿಸಿದವರ ಗ್ರಹಿಕೆ, ಸಹಜವಾಗಿ ಹೆಚ್ಚುತ್ತಾ ಹೋಗಿದೆ. ಹೇರಿಕೆಯ ಆತ್ಮಾವಲೋಕನವಲ್ಲದೆ, ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಲು ಪ್ರೇರೇಪಿಸಿದೆ. 'ಕೊಡುವಿಕೆ' ಆಂತರಿಕ ನಡಿಗೆಯ ಇನ್ನೊಂದು ಮಹತ್ವದ ಕಲಿಕೆ. ವ್ಯಾವಹಾರಿಕ ಬಂಧಗಳಾಚೆ, ಮನುಷ್ಯ ಸಂಬಂಧಗಳು ಮುಖ್ಯ. ಹೀಗಾಗಿ, ಮನುಷ್ಯ ಸಂಬಂಧಗಳ ಅನುರಣನದ ಆಲಿಸುವಿಕೆಗೆ, ಹೆಚ್ಚಿನ ಸಮಯ ನಡಿಗೆಯಲ್ಲಿ ಮೀಸಲಿದೆ.

ದೇಹ ದಣಿಯುತ್ತದೆ. ವೇಗ ನಿಧಾನಗೊಳ್ಳುತ್ತದೆ. ನಮಗೆ ನಮ್ಮಯ ಉಸಿರು, ನಿಲುವು ಮತ್ತು ನಮ್ಮೊಳಗಿನ ಲಯದ ಅರಿವಾಗುತ್ತದೆ. ಕ್ರಮಿಸುತ್ತಿರುವ ಹಾದಿ 'ಸಮಯ'ವನ್ನು ನೀಡುತ್ತದೆ; ಆಧುನಿಕ ಜೀವನ ನೀಡಲಾಗದ ಅಮೂಲ್ಯ ಸಮಯವದು. ಆ ಸಮಯದಲ್ಲಿ ಮನಸ್ಸು ಗಡಿಬಿಡಿ, ತುರ್ತಿನ ಮೇಲಿನ ತನ್ನ ಹಿಡಿತವನ್ನು ಸಡಿಲಗೊಳಿಸುತ್ತದೆ. ಮೌನ ಕಸಿವಿಸಿ ಉಂಟು ಮಾಡದೆ ಹಿತಕಾರಿ ಎನಿಸುತ್ತದೆ. ಹೀಗೆ, ನಮ್ಮ ಆಂತರಿಕ ನಡಿಗೆ, ಹೊಸ ವಿಷಯಗಳಿಗೆ ತೆರೆದುಕೊಳ್ಳುವ ಮೂಲಕ, ಅನುಭಾವದ ಮೂಲಕ ಸಾರ್ಥಕವಾಗುತ್ತದೆ.

'ಅಂತರಂಗದ ನಡಿಗೆ' ಪರಿಹಾರವನ್ನು ಕಂಡುಕೊಳ್ಳುವ ಗುರಿ ಹೊಂದಿಲ್ಲ. ಬದಲಿಗೆ, ಜನರಲ್ಲಿ ವಿವೇಚನೆಯನ್ನು ಉದ್ದೀಪಿಸುವ ಉದ್ದೇಶ ಹೊಂದಿದೆ. ವೇಗ, ಮಾನದಂಡ ಮತ್ತು ನಿರ್ದೇಶನ ಒಳಗೊಂಡು ನಡೆಯುವ ಈ ಜಗತ್ತಿನಲ್ಲಿ, ಈ ತರಹದ ನಡಿಗೆಯನ್ನು ಆಯ್ಕೆ ಮಾಡಿಕೊಂಡು, ಸಮಸ್ಯೆಗಳಿಗೆ ಕಿವಿಯಾಗುತ್ತಾ, ಗ್ರಹಿಕೆಯನ್ನು ಸೂಕ್ಷ್ಮಗೊಳಿಸುತ್ತ ಸಾಗುವುದೇ, ಒಂದು ಶಾಂತ ಪ್ರತಿರೋಧದ ಮಾರ್ಗವೂ ಆಗಿದೆ.

ನಾವು ಕಂಡುಕೊಂಡ, ನಮ್ಮೊಳಗಿನ ಈ ಸ್ಪಷ್ಟತೆಯಿಂದ ಅರ್ಥವತ್ತಾದ ಕ್ರಿಯೆಗಳು ಹೊರಹೊಮ್ಮಲಿವೆ ಎಂಬ ನಂಬಿಕೆಯೊಂದಿಗೆ, ತಾಳಿಕೆ ಮತ್ತು ಬಾಳಿಕೆಯ ಅಭಿವೃದ್ಧಿಗಿಂತ, ಸಂಬಂಧಗಳನ್ನು ಬಾಳಿಸುವ ಮೂಲಕ, ಅಭಿವೃದ್ಧಿ ಸಾಧನೆ ಗುಣಮಟ್ಟದ್ದು ಎಂಬ ಭಾವವನ್ನು ಸ್ವಭಾವವಾಗಿಸುವ ಪುಟ್ಟ ಪ್ರಯತ್ನವೇ ಈ ಆಂತರಿಕ ನಡಿಗೆ.

ಗೌಜು ಗದ್ದಲಗಳಿಂದ ದೂರವಿರಲು ಅವಕಾಶವೊಂದನ್ನು ನಮಗಾಗಿ ಸೃಷ್ಟಿಸುವ ಇರಾದೆ ಮತ್ತು ಯಾವುದೇ ಕಾರ್ಯಸೂಚಿಗಳಿಲ್ಲದೆ, ಗ್ರಾಮ್ಯ ಜೀವನದ ಸೊಗಡನ್ನು ಎದುರುಗೊಳ್ಳುವ ಮಹದಾಸೆ ನಮ್ಮದಾಗಿದೆ. ಇಂತಹ ನಡಿಗೆಯಿಂದ, ನಾವು ಪಡೆದಿದ್ದು ಏನು ಎನ್ನುವುದು ತಕ್ಷಣಕ್ಕೆ ತಿಳಿಯದೆ ಹೋದರೂ, ನಿಧಾನಕ್ಕೆ ಅದು, ನಮ್ಮ ಮನಸ್ಸಿನಾಳದಲ್ಲಿ ಬೀರಿದ ಪರಿಣಾಮವನ್ನು ಅಳೆಯಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮನ ಕಲಕಿದ ದುರ್ಘಟನೆಗಳು

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಭಯೋತ್ಪಾದನಾ ದಾಳಿ, ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನ ದುರಂತ, ಹಲವು ಕಾಲ್ತುಳಿತ ಪ್ರಕರಣಗಳು... ಸ್ಮಶಾನದಂತಾದ ಕರೂರು ರಾಜಕೀಯ ರ್‍ಯಾಲಿ, ಉರಿದ ಬಸ್‌ಗಳು... ಸಜೀವ ಸಮಾಧಿ ಮಾಡಿದ ಗುಡ್ಡಗಳು.. ಯಮ ಸ್ವರೂಪಿಯಾದ ಹಿಮ ಸ್ಫೋಟಗಳು.. 2025ರ ನೆನಪನ್ನು ಯಾವತ್ತೂ ಕಾಡುವ ಒಂದಷ್ಟು ಘೋರ ದುರಂತಗಳ ವಿವರ ಇಲ್ಲಿದೆ

• ಜೋಮನ್ ವರ್ಗೀಸ್, ಶಿವಕುಮಾರ್

ಪಹಲ್ಗಾಮ್ ಭಯೋತ್ಪಾದನಾ ದಾಳಿ
ಭಾರತ ಭೂಶಿರ ಕಾಶ್ಮೀರದ ಪಹಲ್ಗಾಮ್‌ನ ಸುಂದರ ಬೈಸರನ್ ಕಣಿವೆಯಲ್ಲಿ ಏಪ್ರಿಲ್ 22ರಂದು ಪ್ರಕೃತಿಯ ರಮಣೀಯ ದೃಶ್ಯ ವೈಭವವನ್ನು ಕಣ್ತುಂಬಿಕೊಳ್ಳುತ್ತಿದ್ದ ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನದ ಮೂವರು ಭಯೋತ್ಪಾದಕರು ನಡೆಸಿದ ಗುಂಡಿನ ದಾಳಿ ಈ ವರ್ಷ ನಡೆದ, ದೇಶದ ಜನರು ಮರೆಯಲು ಸಾಧ್ಯವಾಗದ ಪ್ರಮುಖ ಕರಾಳ ಘಟನೆ.

ಬಂದೂಕುಧಾರಿ ಭಯೋತ್ಪಾದಕರು, ಪ್ರವಾಸಿಗರ ಧರ್ಮ ಯಾವುದೆಂದು ಕೇಳಿ ತಿಳಿದು, ಪುರುಷರನ್ನು ಮಾತ್ರ ಗುರಿಯಾಗಿಸಿಕೊಂಡು ಮನಸೋಇಚ್ಛೆ ಗುಂಡು ಹಾರಿಸಿ 25 ಪ್ರವಾಸಿಗರನ್ನು ಹತ್ಯೆ ಮಾಡಿದ್ದರು. ದಾಳಿಯನ್ನು ತಡೆಯಲು ಯತ್ನಿಸಿದ ಸ್ಥಳೀಯ ವ್ಯಕ್ತಿಯೊಬ್ಬರನ್ನೂ ಹಂತಕರು ಬಲಿ ಪಡೆದಿದ್ದರು. ಈ ಪ್ರಕರಣದಲ್ಲಿ ಉಗ್ರರ ಪೈಶಾಚಿಕ ಕೃತ್ಯಕ್ಕೆ ಬಲಿಯಾದವರು ಒಟ್ಟು 26 ಮಂದಿ. ಇದರಲ್ಲಿ ಕರ್ನಾಟಕದ ಶಿವಮೊಗ್ಗದ ಮಂಜುನಾಥ ರಾವ್ ಎಂಬವರೂ ಇದ್ದರು. 2008ರ ನವೆಂಬರ್ 26ರಂದು ನಡೆದಿದ್ದ ಮುಂಬೈ ದಾಳಿಯ ನಂತರ ಸಾರ್ವಜನಿಕರನ್ನು ಗುರಿಯಾಗಿಸಿಕೊಂಡು ಭಯೋತ್ಪಾದಕರು ನಡೆಸಿದ ಬಹುದೊಡ್ಡ ದಾಳಿ ಇದು.

ದೆಹಲಿಯ ಕಾರು ಸ್ಫೋಟ: ನ.10ರಂದು ರಾಜಧಾನಿ ದೆಹಲಿಯ ಐತಿಹಾಸಿಕ ಕೆಂಪುಕೋಟೆ ಸಮೀಪವೇ ಸಂಭವಿಸಿದ ಕಾರು ಸ್ಫೋಟ ಈ ವರ್ಷದ ನಡೆದ ಇನ್ನೊಂದು ಭಯೋತ್ಪಾದನಾ ಕೃತ್ಯ. ಇದರಲ್ಲಿ ಸ್ಥಳದಲ್ಲೇ 10 ಮಂದಿ ಮೃತಪಟ್ಟರು. ನಂತರದ ದಿನದಲ್ಲಿ ಈ ಸಂಖ್ಯೆ 15ಕ್ಕೆ ಏರಿತು. ವೈದ್ಯರನ್ನೊಳಗೊಂಡ ಭಯೋತ್ಪಾದಕರ ಜಾಲವು ಈ ಕೃತ್ಯ ಎಸಗಿದೆ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ

ಇತರ ದುರ್ಘಟನೆಗಳು
ಜ.6: ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯಲ್ಲಿ ಗಣಿ ಪ್ರದೇಶಕ್ಕೆ ಕೆಸರು ಮಿಶ್ರಿತ ನೀರು ನುಗ್ಗಿ 9 ಸಿಬ್ಬಂದಿ ಮೃತಪಟ್ಟರು
ಜ.8: ಆಂಧ್ರಪ್ರದೇಶದ ತಿರುಪತಿಯಲ್ಲಿ ವಿಶೇಷ ದರ್ಶನ ಟಿಕೆಟ್ ಪಡೆಯುವಾಗ ಕಾಲ್ತುಳಿತ ಉಂಟಾಗಿ 6 ಮಂದಿ ಮೃತಪಟ್ಟರು
ಜ.29: ಪ್ರಯಾಗರಾಜ್ ಮಹಾ ಕುಂಭಮೇಳದಲ್ಲಿ ಮೌನಿ ಅಮಾವಾಸ್ಯೆ ದಿನ ಕಾಲ್ತುಳಿತ ಸಂಭವಿಸಿ 30 ಜನರ ಕೊನೆಯುಸಿರೆಳೆದರು
ಫೆ.15: ದೆಹಲಿ ರೈಲು ನಿಲ್ದಾಣದಲ್ಲಿ ಕಾಲ್ತುಳಿತಕ್ಕೆ 18 ಜನ ಬಲಿಯಾದರು
ಏ. 1: ಗುಜರಾತ್‌ನ ದೀಸಾ ಬಳಿ ಪಟಾಕಿ ತಯಾರಿಸುವ ಸ್ಫೋಟಕಗಳನ್ನು ಇರಿಸಿದ್ದ ಗೋಡೌನ್‌ನಲ್ಲಿ ಅಗ್ನಿ ಆಕಸ್ಮಿಕಕ್ಕೆ 21 ಮಂದಿ ಬಲಿಯಾದರು
ಏ.10: ಮಧ್ಯಪ್ರದೇಶದ ಗ್ವಾಲಿಯರ್‌ನ ಭಾರ್ವಿ ಬಜಾರ್‌ನಲ್ಲಿ ಬೆಂಕಿ ಕಾಣಿಸಿಕೊಂಡು 10 ಮಂದಿ ಸಾವಿಗೀಡಾದರು
ಮೇ3: ಗೋವಾದ ಶಿರ್ಗಾವೊದಲ್ಲಿ ಶ್ರೀ ಲೈರಾಯಿ ದೇವಿ ದೇವಾಲಯದ ಜಾತ್ರೆಯಲ್ಲಿ ಕಾಲ್ತುಳಿತ ಸಂಭವಿಸಿ ಏಳು ಭಕ್ತರು ಕೊನೆಯುಸಿರೆಳೆದರು
ಮೇ18: ಹೈದರಾಬಾದ್‌ನಲ್ಲಿ ಮೂರು ಅಂತಸ್ತಿನ ಕಟ್ಟಡಕ್ಕೆ ಬೆಂಕಿ ಒಂದೇ ಕುಟುಂಬದ 17 ಮಂದಿ ಸಜೀವ ದಹನವಾದರು
ಜೂನ್ 30: ಸಂಗಾರೆಡ್ಡಿ ಜಿಲ್ಲೆಯಲ್ಲಿ ಸಿಗಾಚಿ ಇಂಡಸ್ಟ್ರೀಸ್ ರಸಾಯನಿಕ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿ 54 ಕಾರ್ಮಿಕರು ಮೃತಪಟ್ಟರು
ಜುಲೈ 9: ಗುಜರಾತ್‌ನ ವಡೋದರಾ ಜಿಲ್ಲೆಯಲ್ಲಿ ಮಾಹಿ ನದಿ ಮೇಲೆ ನಿರ್ಮಿಸಿದ್ದ ಕಬ್ಬಿಣದ ಸೇತುವೆ ಕುಸಿದು 25 ಮಂದಿ ಸಾವು
ಜುಲೈ 25: ಉತ್ತರಾಖಂಡದ ಹರಿದ್ವಾರದ ಮಾನಸ ದೇವಿ ದೇವಾಲಯಕ್ಕೆ ಹೋಗುವ ಪಾದಚಾರಿ ಮಾರ್ಗದಲ್ಲಿ ಉಂಟಾದ ಕಾಲ್ತುಳಿತದಿಂದಾಗಿ ಎಂಟು ಭಕ್ತರು ಸಾವಿಗೀಡಾಗಿದರು

ಏರ್ ಇಂಡಿಯಾ ವಿಮಾನ ಪತನ

ಜೂನ್ 12ರಂದು ದೇಶದ ವಿಮಾನಯಾನ ಇತಿಹಾಸದಲ್ಲೇ ಅತ್ಯಂತ ಘೋರ ದುರಂತವೊಂದು ನಡೆಯಿತು. ಅಂದು ಮಧ್ಯಾಹ್ನ 1.30ಕ್ಕೆ ಗುಜರಾತ್‌ನ ಅಹಮದಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್‌ಗೆ ತೆರಳುತ್ತಿದ್ದ ಏರ್ ಇಂಡಿಯಾದ ಬೋಯಿಂಗ್ 787 ಡ್ರೀಮ್ ಲೈನರ್ ವಿಮಾನ ಟೇಕ್ ಆಫ್ ಆದ ಕೆಲವೇ ಸೆಕೆಂಡುಗಳಲ್ಲಿ, ರನ್ ವೇಯಿಂದ ಕೂಗಳತೆ ದೂರದಲ್ಲಿ ಪತನವಾಯಿತು. ನೂಕು ಬಲದ ಕೊರತೆ ಅನುಭವಿಸಿದ ವಿಮಾನವು ವೈದ್ಯಕೀಯ ಕಾಲೇಜು ಮತ್ತು ಹಾಸ್ಟೆಲ್ ಕಟ್ಟಡಗಳಿಗೆ ಅಪ್ಪಳಿಸಿತು. ಇಬ್ಬರು ಪೈಲಟ್ ಸೇರಿ 12 ಮಂದಿ ಸಿಬ್ಬಂದಿ ಮತ್ತು 230 ಪ್ರಯಾಣಿಕರು ಏನು ನಡೆಯುತ್ತಿದೆ ಎಂದು ಅರಿಯುವಷ್ಟರಲ್ಲಿ ಸುಟ್ಟು ಕರಕಲಾದರು. ವಿಶ್ವಾಸ್ ಕುಮಾರ್ ರಮೇಶ್ ಎಂಬ ಒಬ್ಬ ಪ್ರಯಾಣಿಕ ಮಾತ್ರ ಪವಾಡ ಸದೃಶ ರೀತಿಯಲ್ಲಿ ಬದುಕುಳಿದರು. ವಿಮಾನವು ಬಿದ್ದ ಹಾಸ್ಟೆಲ್ ಕಟ್ಟಡದಲ್ಲಿದ್ದ ವೈದ್ಯ ವಿದ್ಯಾರ್ಥಿಗಳು ಸೇರಿ 19 ಮಂದಿ ಸಜೀವ ದಹನವಾದರು.

ಜಗತ್ತಿನಲ್ಲಿ...
ಜ.7: ಚೀನಾ ದಕ್ಷಿಣ ಭಾಗದ ಟಿಬೆಟ್ ಸ್ವಾಯತ್ತ ಪ್ರಾಂತ್ಯದಲ್ಲಿ ರಿಕ್ಟರ್ ಮಾಪಕದಲ್ಲಿ 7.1ರಷ್ಟು ತೀವ್ರತೆಯ ಭೂಕಂಪ ಸಂಭವಿಸಿತು. ಚೀನಾದಲ್ಲಿ 126 ಜನರು ಮೃತಪಟ್ಟರೆ, ಟಿಬೆಟ್ ಮೂಲಗಳು ಅಂದಾಜು 400 ಜನರ ಸಾವು ಆಗಿದೆ ಎಂದು ತಿಳಿಸಿದವು
ಮಾ.28: ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ 5,456 ಮಂದಿ ಮೃತಪಟ್ಟರು.
ಆ.31: ಅಫ್ಗಾನಿಸ್ತಾನದ ಕುನಾರ್ ಪ್ರಾಂತ್ಯದಲ್ಲಿ ಭೂಕಂಪ ಸಂಭವಿಸಿ 2,100ಕ್ಕೂ ಹೆಚ್ಚು ಜನರು ಮೃತಪಟ್ಟರು

ಜುಲೈ 25: ರಾಜಸ್ಥಾನದ ಪಿಪ್ಲೋಡಿಯಲ್ಲಿ ಶಾಲೆಯೊಂದರ ಚಾವಣಿ ಕುಸಿದು ಬಿದ್ದು 7 ವಿದ್ಯಾರ್ಥಿಗಳು ಸಾವಿಗೀಡಾದರು
ಆಗಸ್ಟ್ 5: ಉತ್ತರಾಖಂಡದ ಉತ್ತರಕಾಶಿಯ ಧರಾಲಿ ಮತ್ತು ಹರ್ಸಿಲ್ ಬಳಿ ಉಂಟಾದ ಮೇಘಸ್ಫೋಟದಲ್ಲಿ 50ಕ್ಕೂ ಹೆಚ್ಚು ಜನರು ಮೃತಪಟ್ಟರು
ಆಗಸ್ಟ್ 14: ಜಮ್ಮು-ಕಾಶ್ಮೀರದ ಕಿಶ್ತ್‌ವಾರದಲ್ಲಿ ಮೇಘಸ್ಫೋಟ ಉಂಟಾಗಿ 68 ಜನರು ಸಾವಿಗೀಡಾದರು
ಸೆ.27: ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸಂಸ್ಥಾಪಕ, ನಟ ವಿಜಯ್ ಅವರು ಕರೂರಿನಲ್ಲಿ ಹಮ್ಮಿಕೊಂಡಿದ್ದ ರಾಜಕೀಯ ರ್‍ಯಾಲಿ ವೇಳೆ ನೂಕುನುಗ್ಗಲು ಉಂಟಾಗಿ ಕಾಲ್ತುಳಿತದಲ್ಲಿ 41 ಮಂದಿ ಜೀವತೆತ್ತರು
ಅ.14: ರಾಜಸ್ಥಾನದ ಜೈಸಲ್ಮೇರ್ ಬಳಿ ಹವಾನಿಯಂತ್ರಿತ ಖಾಸಗಿ ಸ್ಲೀಪರ್ ಬಸ್‌ಗೆ ಬೆಂಕಿ ಹತ್ತಿಕೊಂಡು 25 ಪ್ರಯಾಣಿಕರು ಸುಟ್ಟು ಕರಕಲಾದರು
ಅ.24: ಆಂಧ್ರದ ಕರ್ನೂಲು ಜಿಲ್ಲೆಯ ಚಿನ್ನತೇಕೂರು ಬಳಿ ಮುಂಜಾನೆಯೇ ಬೆಂಗಳೂರಿನತ್ತ ಬರುತ್ತಿದ್ದ ಖಾಸಗಿ ಬಸ್ ರಸ್ತೆಯಲ್ಲೇ ಹೊತ್ತಿ ಉರಿದು 19 ಪ್ರಯಾಣಿಕರು ಸಾವಿಗೀಡಾದರು
ನ.1: ಆಂಧ್ರದ ಶ್ರೀಕಾಕುಳಂ ಜಿಲ್ಲೆಯ ಕಾಸಿಬುಗ್ಗ ವೆಂಕಟೇಶ್ವರ ಸ್ವಾಮಿ ದೇಗುಲದಲ್ಲಿ ಸಂಭವಿಸಿದ ಅವಘಡದಲ್ಲಿ 9 ಮಂದಿ ಮೃತಪಟ್ಟರು
ನ.4: ಛತ್ತೀಸಗಢದ ಬಿಲಾಸ್ ಪುರದಲ್ಲಿ ಸರಕು ಸಾಗಣೆ ರೈಲು ಮತ್ತು ಪ್ರಯಾಣಿಕರ ರೈಲಿನ ನಡುವೆ ಡಿಕ್ಕಿ ಸಂಭವಿಸಿ 11 ಮಂದಿ ಅಸು ನೀಗಿದರು
ನ. 14: ಜಮ್ಮು-ಕಾಶ್ಮೀರದ ನೌಗಾಮ್ ಪೊಲೀಸ್ ಠಾಣೆಯಲ್ಲಿ ಸ್ಫೋಟಕದ ಮಾದರಿ ಸ್ಫೋಟಗೊಂಡು 9 ಪೊಲೀಸರು ಸಾವಿಗೀಡಾದರು
ಡಿ.6: ಗೋವಾದ ಅರೊಪೊರಾ ರೊಮಿಯೋ ಲೇನ್ ನೈಟ್ ಕ್ಲಬ್ ಬ್ರಿಚ್‌ನಲ್ಲಿ ಬೆಂಕಿ ಕಾಣಿಸಿಕೊಂಡು 25 ಮಂದಿ ಸಜೀವ ದಹನವಾದರು
ಚಂಡಮಾರುತ: ಅಕ್ಟೋಬರ್‌ನಲ್ಲಿ ಪೂರ್ವ ಕರಾವಳಿಗೆ ಮೋಂತಾ ಚಂಡಮಾರುತ ಅಪ್ಪಳಿಸಿ ಆಂಧ್ರ, ತೆಲಂಗಾಣ, ತಮಿಳುನಾಡು, ಒಡಿಶಾಗಳಲ್ಲಿ ಕನಿಷ್ಠ 10 ಮಂದಿ ಮೃತಪಟ್ಟರು

ಸದ್ದು ಮಾಡಿದ ವಿವಾದಗಳಿವು

2025ರಲ್ಲಿ ಹಲವು ವಿವಾದಗಳು ದೇಶದಲ್ಲಿ ಭಾರಿ ಸದ್ದು ಮಾಡಿದವು. ರಾಜಕೀಯ ವಲಯದಲ್ಲಿ, ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳಲ್ಲಿ ಪರ ವಿರೋಧ ಚರ್ಚೆಯನ್ನು ಹುಟ್ಟುಹಾಕಿದವು

• ವಿದ್ಯಾ ಹಂಚಿನಮನಿ, ಮಹಮ್ಮದ್ ನಝೀರ್ ಹುಸೈನ್


ರಣವೀರ್ ಸಿಂಗ್

ಅಲಹಾಬಾದಿಯಾ ಅಶ್ಲೀಲ ಹೇಳಿಕೆ: 'ಇಂಡಿಯಾಸ್ ಗಾಟ್ ಟ್ಯಾಲೆಂಟ್' ಕಾರ್ಯಕ್ರಮದಲ್ಲಿ ಪಾಡ್‌ಕಾಸ್ಟರ್ ರಣವೀರ್ ಸಿಂಗ್ ಅಲಹಾಬಾದಿಯಾ ಅವರು ಅಶ್ಲೀಲ ಮಾತುಗಳನ್ನಾಡುವ ಮೂಲಕ ದೇಶದಾದ್ಯಂತ ಭಾರಿ ಟೀಕೆಗೆ ಗುರಿಯಾದರು. ಇವರ ವಿರುದ್ಧ ಹಲವೆಡೆ ಎಫ್‌ಐಆರ್‌ಗಳು ದಾಖಲಾದವು

ವಂದೇ ಮಾತರಂ ವಿವಾದ: 150 ವರ್ಷಗಳು ತುಂಬಿರುವ 'ವಂದೇ ಮಾತರಂ' ಹಾಡಿಗೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ನಡೆದ ಚರ್ಚೆ, ಸದನದ ಹೊರಗಡೆಯೂ ಬಿರುಸಿನ ವಾದ ಪ್ರತಿವಾದಕ್ಕೆ ಕಾರಣವಾಯಿತು

ಗೋಡ್ಸೆ ಹೊಗಳಿದ ಪ್ರಾಧ್ಯಾಪಕಿಗೆ ಡೀನ್ ಹುದ್ದೆ: 'ಮಹಾತ್ಮ ಗಾಂಧಿಯವರನ್ನು ಹತ್ಯೆಗೈದು ಗೋಡ್ಸೆಯವರು ದೇಶವನ್ನು ರಕ್ಷಿಸಿದರು. ಇದು ಹೆಮ್ಮೆ ವಿಚಾರ' ಎಂಬರ್ಥದ ಪ್ರತಿಕ್ರಿಯೆ ನೀಡಿದ್ದ ಕೇರಳದ ಪ್ರೊಫೆಸರ್ ಶೈಜಾ ಎ. ಅವರನ್ನು ಕೇರಳದ ಕೋಯಿಕ್ಕೋಡ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಡೀನ್ ಹುದ್ದೆಗೆ ನೇಮಕ ಮಾಡಲಾಯಿತು. ಕೇಂದ್ರ ಸರ್ಕಾರದ ಈ ಕ್ರಮವನ್ನು ಎಡಪಕ್ಷಗಳು, ಕಾಂಗ್ರೆಸ್ ವಿರೋಧಿಸಿದವು

ವಾರಕ್ಕೆ 90 ಗಂಟೆ ಕೆಲಸ ಮಾಡಬೇಕಾ?: ಜನವರಿಯಲ್ಲಿ ಇನ್ಫೊಸಿಸ್ ಸಹ-ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು, ಯುವಕರು ದೇಶದ ಅಭಿವೃದ್ಧಿಗಾಗಿ ವಾರಕ್ಕೆ 70ರಿಂದ 72 ಗಂಟೆ ಕೆಲಸ ಮಾಡಬೇಕು ಎಂಬ ತಮ್ಮ ಹಳೆಯ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದರು. ಇದರ ಬೆನ್ನಲ್ಲೇ, ಎಲ್ ಆ್ಯಂಡ್ ಟಿ ಕಂಪನಿ ಮುಖ್ಯಸ್ಥ ಎಸ್.ಎನ್. ಸುಬ್ರಹ್ಮಣ್ಯನ್ ಅವರು 'ಯುವಕರು ವಾರಕ್ಕೆ 90 ಗಂಟೆ ಕೆಲಸ ಮಾಡಬೇಕು ಮತ್ತು ಭಾನುವಾರವೂ ಕಚೇರಿಗೆ ಬರಬೇಕು, ಮನೆಯಲ್ಲಿ ಸುಮ್ಮನೆ ಕುಳಿತು ಹೆಂಡತಿಯ ಮುಖ ನೋಡುತ್ತಾ ಏನು ಮಾಡುತ್ತೀರಿ?' ಎಂದು ನೀಡಿದ್ದ ಹೇಳಿಕೆ ವ್ಯಾಪಕ ಟೀಕೆಗೆ ಗುರಿಯಾಯಿತು


ಎನ್.ಆರ್. ರವಿ

ರಾಜ್ಯಪಾಲ–ಡಿಎಂಕೆ ಜಟಾಪಟಿ: ರಾಜ್ಯಪಾಲ ಎನ್.ಆರ್. ರವಿ ಮತ್ತು ತಮಿಳುನಾಡಿನ ಡಿಎಂಕೆ ಸರ್ಕಾರ ನಡುವೆ ಸಂಘರ್ಷ ರಾಷ್ಟ್ರದ ಗಮನ ಸೆಳೆಯಿತು. ಜನವರಿಯಲ್ಲಿ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ತಾವು ಭಾಷಣ ಓದುವ ಮೊದಲು ರಾಷ್ಟ್ರಗೀತೆಯನ್ನು ನುಡಿಸಲಿಲ್ಲ ಎಂಬ ಕಾರಣಕ್ಕೆ ರವಿ ಅವರು ಸದನದಿಂದ ಹೊರನಡೆದರು. ಏಪ್ರಿಲ್‌ನಲ್ಲಿ ಚೆನ್ನೈನ ಕಾರ್ಯಕ್ರಮವೊಂದರಲ್ಲಿ ವಿದ್ಯಾರ್ಥಿಗಳಿಗೆ 'ಜೈ ಶ್ರೀ ರಾಮ್' ಎಂದು ಘೋಷಣೆ ಕೂಗುವಂತೆ ಹೇಳಿದ್ದು ಮತ್ತೊಂದು ವಿವಾದಕ್ಕೆ ಕಾರಣವಾಯಿತು.

ವಿಜಯ್ ಶಾ ಮಾತು: 'ಪಾಕಿಸ್ತಾನದಲ್ಲಿನ ಭಯೋತ್ಪಾದಕರಿಗೆ ಅವರ ಸಹೋದರಿಯಿಂದಲೇ ಪಾಠ ಕಲಿಸಲಾಗಿದೆ' ಎಂದು ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಉಲ್ಲೇಖಿಸಿ ಹೇಳಿಕೆ ನೀಡುವ ಮೂಲಕ ಮಧ್ಯಪ್ರದೇಶದ ಬುಡಕಟ್ಟು ವ್ಯವಹಾರಗಳ ಸಚಿವ ವಿಜಯ್ ಶಾ ವಿವಾದವನ್ನು ಮೈಮೇಲೆ ಎಳೆದುಕೊಂಡರು

ಅಬೂ ಆಸಿಂ ಆಜ್ಮಿ

- 'ಮೊಘಲ್ ದೊರೆ ಔರಂಗಜೇಬ್ ಕ್ರೂರ ಮತ್ತು ಹಿಂದೂ ವಿರೋಧಿಯಾಗಿರಲಿಲ್ಲ. ಆತನ ಆಳ್ವಿಕೆ ಅವಧಿಯಲ್ಲಿ ಭಾರತ ಸಮೃದ್ಧವಾಗಿತ್ತು. ಇತಿಹಾಸವನ್ನು ತಿರುಚಲಾಗಿದೆ' ಎಂದು ಸಮಾಜವಾದಿ ಪಕ್ಷದ ಶಾಸಕ ಅಬೂ ಆಸಿಂ ಆಜ್ಮಿ ಅವರು ನೀಡಿದ್ದ ಹೇಳಿಕೆ ವಿವಾದ ಸೃಷ್ಟಿಸಿತು
- 'ರಾಹುಲ್ ಗಾಂಧಿ ಅವರ ನಾಲಿಗೆ ಕತ್ತರಿಸಿದವರಿಗೆ ₹11 ಲಕ್ಷ ಇನಾಮು ನೀಡಲಾಗುವುದು' ಹೀಗೆ ಘೋಷಣೆ ಮಾಡಿ ವಿವಾದವನ್ನು ಮೈಮೇಲೆಳೆದುಕೊಂಡಿದ್ದು ಶಿವಸೇನಾ (ಶಿಂದೆ ಬಣ) ಶಾಸಕ ಸಂಜಯ್ ಗಾಯಕ್ವಾಡ್
- ಡಿಸೆಂಬರ್ 15ರಂದು ಬಿಹಾರದ ಪಾಟ್ನಾದಲ್ಲಿ ನಡೆದ ಸರ್ಕಾರಿ ನೇಮಕಾತಿ ಪತ್ರ ವಿತರಣಾ ಸಮಾರಂಭದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು, ವೇದಿಕೆಯ ಮೇಲೆ ಮುಸ್ಲಿಂ ವೈದ್ಯೆಯೊಬ್ಬರ ನಖಾಬ್ (ಮುಖಗವಸು) ಎಳೆದು ಭಾರಿ ವಿವಾದ ಸೃಷ್ಟಿಸಿದರು
- ನಕಲಿ ಪ್ರಮಾಣಪತ್ರಗಳನ್ನು ಸಲ್ಲಿಸಿ ವಂಚನೆ ಎಸಗಿದ ಪ್ರಕರಣದಲ್ಲಿ ಮಾಜಿ ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರಿಗೆ ಮೇ ತಿಂಗಳಲ್ಲಿ ಸುಪ್ರೀಂ ಕೋರ್ಟ್ ನಿರೀಕ್ಷಣಾ ಜಾಮೀನು ನೀಡಿ, ಬಂಧನದಿಂದ ರಕ್ಷಣೆ ನೀಡಿತು

ಪೂಜಾ ಖೇಡ್ಕರ್

- ಮಾರ್ಚ್‌ನಲ್ಲಿ ಹೋಳಿ ಹಬ್ಬದ ಆಚರಣೆ ಮತ್ತು ರಂಜಾನ್ ಮಾಸದಲ್ಲಿ ಶುಕ್ರವಾರದ ನಮಾಜ್ ಸಮಯವು ಏಕಕಾಲಕ್ಕೆ ಬಂದಿದ್ದರಿಂದ, ಸಂಘರ್ಷ ತಪ್ಪಿಸಲು ನಮಾಜ್ ಸಮಯವನ್ನು ಮುಂದೂಡುವಂತೆ ಉತ್ತರ ಪ್ರದೇಶದ ಆಡಳಿತವು ನೀಡಿದ ಸೂಚನೆ ಕೂಡ ವಿವಾದವಾಯಿತು
- ಯೋಗ ಗುರು ರಾಮದೇವ್ ಅವರು ಪತಂಜಲಿಯ ಗುಲಾಬ್ ಶರಬತ್ತಿನ ಬಗ್ಗೆ ಪ್ರಚಾರ ಮಾಡುವಾಗ, ಹಮ್‌ದರ್ದ್ ಸಂಸ್ಥೆಯ ರೂಹ್ ಅಫ್ಜಾ ಪಾನೀಯದ ಲಾಭವು ಮಸೀದಿ ಮತ್ತು ಮದರಸಾಗಳ ನಿರ್ಮಾಣಕ್ಕೆ ಬಳಕೆಯಾಗುತ್ತಿದೆ ಎಂದು ಹೇಳಿಕೆ ನೀಡಿದ್ದರು

ಬಾಹ್ಯಾಕಾಶ: ಇಸ್ರೊಗೆ ವರ್ಷಪೂರ್ತಿ ಸಾಧನೆಯ ಫಸಲು

ಇಸ್ರೊ ಪಾಲಿಗೆ 2025, ಸಾಧನೆಗಳ ಸಂಭ್ರಮ, ಮೈಲಿಗಲ್ಲುಗಳನ್ನು ಸಾಧಿಸಿದ ವರ್ಷ. ಎರಡು ಎಸ್‌ಪಿಇಎಕ್ಸ್ ಉಪಗ್ರಹಗಳ ಯಶಸ್ವಿ ಡಾಕಿಂಗ್, 100ನೇ ಉಪಗ್ರಹ ಉಡಾವಣೆ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಶತಕದ ಸಾಧನೆ ಮತ್ತು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಭಾರತೀಯನ ಮೊದಲ ಹೆಜ್ಜೆ, ಇಂಥ ಹಲವು ಫಸಲು ಈ ವರ್ಷ ಇಸ್ರೊದ ಸಾಧನೆಯ ಬುಟ್ಟಿಗೆ ಸೇರಿವೆ

• ಗಾಣಧಾಳು ಶ್ರೀಕಂಠ

'ಜೋಡಣೆ–ಬೇರ್ಪಡಿಸುವಿಕೆ': ವರ್ಷಾರಂಭದಲ್ಲಿ (ಜನವರಿ 16) ಇಸ್ರೊ, ತನ್ನದೇ ಆದ ಡಾಕಿಂಗ್ ವ್ಯವಸ್ಥೆಯನ್ನು ಬಳಸಿಕೊಂಡು ಕಕ್ಷೆಯಲ್ಲಿ ಉಪಗ್ರಹ ಡಾಕಿಂಗ್ (ಸ್ಪೇಡೆಕ್ಸ್– ಎಸ್‌ಪಿ ಎಡಿಇಎಕ್ಸ್) ಪ್ರಯೋಗವನ್ನು ಯಶಸ್ವಿಯಾಗಿ ನೆರವೇರಿಸಿತು. ಇದರಲ್ಲಿ ಬಾಹ್ಯಾಕಾಶದಲ್ಲಿ ನಿರ್ದಿಷ್ಟ ಕಕ್ಷೆಯಲ್ಲಿ ತಿರುಗುವ ಒಂದು ಉಪಗ್ರಹವು ಮತ್ತೊಂದು ಉಪಗ್ರಹವನ್ನು ಶೋಧಿಸಿ ಅದಕ್ಕೆ ತಾನೇ ಜೋಡಿಸಿಕೊಳ್ಳುವ ವ್ಯವಸ್ಥೆ ಇದು. ಈ ಪ್ರಯೋಗದ ಮೂಲಕ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಅಮೆರಿಕ, ರಷ್ಯಾ, ಚೀನಾ ರಾಷ್ಟ್ರಗಳ ಗುಂಪಿಗೆ ಭಾರತ ಸೇರಿತು. ಇದೇ ರೀತಿ ಮಾ.13ರಂದು ಉಪಗ್ರಹಗಳನ್ನು ಬೇರ್ಪಡಿಸುವಲ್ಲಿಯೂ (ಅನ್‌ಡಾಕಿಂಗ್) ಯಶ ಕಂಡಿತು

ಉಡಾವಣೆ 100: ಇಸ್ರೊ ಸಾಧನೆಗಳಿಗೆ 'ಚಿಮ್ಮುಹಲಗೆ' ಯಾಗಿರುವ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ, ಪ್ರತಿ ವರ್ಷ ಹಲವು ಉಪಗ್ರಹಗಳ ಉಡಾವಣೆಗೆ ಸಾಕ್ಷಿಯಾಗುತ್ತದೆ. ಆದರೆ, ಈ ವರ್ಷದ ಜನವರಿ 29 ವಿಶೇಷ ದಿನ. ಅಂದು ಈ ಕೇಂದ್ರದಿಂದ 100ನೇ ರಾಕೆಟ್ ಉಡಾವಣೆಯಾಯಿತು. ಜಿಎಸ್‌ಎಲ್‌ವಿ-ಎಫ್15 ರಾಕೆಟ್, ಎನ್‌ವಿಎಸ್-02 ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿತು.

'ನಿಸಾರ್' ವಿಶೇಷ: ಭೂ ವೀಕ್ಷಣೆ ಉದ್ದೇಶದಿಂದ ಇಸ್ರೊ ಹಾಗೂ ಅಮೆರಿಕದ ನಾಸಾ ಜಂಟಿಯಾಗಿ ಅಭಿವೃದ್ಧಿಪಡಿಸಿರುವ 'ನಿಸಾರ್' ('ನಾಸಾ–ಇಸ್ರೊ ಸಿಂಥೆಟಿಕ್ ಅಪಾರ್ಚರ್ ರೇಡಾರ್') ಉಪಗ್ರಹ ಉಡಾವಣೆ ಈ ಬಾರಿಯ ಮತ್ತೊಂದು ವಿಶೇಷ. ಜುಲೈ 30ರಂದು ಈ ಉಪಗ್ರಹ ಹೊತ್ತ ಜಿಎಸ್‌ಎಲ್‌ವಿ–ಎಫ್16 ರಾಕೆಟ್ ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿನ ಉಡ್ಡಯನ ನೆಲೆಯಿಂದ ಆಗಸಕ್ಕೆ ಚಿಮ್ಮಿತು. ಭೂ ವೀಕ್ಷಣೆ ಉದ್ದೇಶದಿಂದ ಉಪಗ್ರಹ ನಿರ್ಮಾಣ ಹಾಗೂ ಉಡಾವಣೆಗಾಗಿ ರೂಪಿಸಲಾಗಿರುವ ಬಾಹ್ಯಾಕಾಶ ಕಾರ್ಯಕ್ರಮವೇ 'ನಿಸಾರ್'

ಪ್ಯಾರಾಚೂಟ್ ವ್ಯವಸ್ಥೆ: ಗಗನಯಾನ ಯೋಜನೆಗಳಲ್ಲಿ ಬಳಸಲಾಗುವ ಬಾಹ್ಯಾಕಾಶ ಕೋಶವು ಭೂಮಿಗೆ ಮರಳುವಾಗ ಅದು ಯಶಸ್ವಿಯಾಗಿ ಭೂಸ್ಪರ್ಶಿಸುವಂತೆ ಮಾಡಲು ಪ್ಯಾರಾಚ್ಯೂಟ್ ಆಧಾರಿತವಾಗಿ ಇಳಿಯುವ ವ್ಯವಸ್ಥೆಯ ಪರೀಕ್ಷೆಯನ್ನು ಇಸ್ರೊ ಆಗಸ್ಟ್‌ನಲ್ಲಿ ಯಶಸ್ವಿಯಾಗಿ ನಡೆಸಿತು

ಸಂವಹನ ಉಪಗ್ರಹ–ಬಾಹುಬಲಿ: ಇಸ್ರೊ, ಹೊಸ ತಲೆಮಾರಿನ, ಸ್ವದೇಶಿ ನಿರ್ಮಿತ 'ಬಾಹುಬಲಿ' ರಾಕೆಟ್ ಮೂಲಕ ಅತ್ಯಂತ ಭಾರವಾದ ಉಪಗ್ರಹವನ್ನು ಕಕ್ಷೆಗೆ ಸೇರಿಸುವ ಮೂಲಕ ಐತಿಹಾಸಿಕ ಸಾಧನೆ ಮಾಡಿದ್ದು ಇಸ್ರೊದ ಈ ವರ್ಷದ ಮತ್ತೊಂದು ಮೈಲಿಗಲ್ಲು. ಶ್ರೀಹರಿಕೋಟಾದ ಬಾಹ್ಯಾಕಾಶ ಕೇಂದ್ರದಿಂದ ನವೆಂಬರ್ 2ರಂದು 4,410 ಕೆ.ಜಿ ತೂಕದ ಸಂವಹನ ಉಪಗ್ರಹವನ್ನು (ಸಿಎಂಎಸ್–03) ಹೊತ್ತು ನಭಕ್ಕೆ ಚಿಮ್ಮಿದ ಲಾಂಚ್ ವೆಹಿಕಲ್ ಮಾರ್ಕ್–3 (ಎಲ್‌ವಿಎಂ3-ಎಂ5) 'ಬಾಹುಬಲಿ'ಯು ಆತ್ಮನಿರ್ಭರ ಭಾರತದ ಅಭಿಮಾನದ ಕ್ಷಣಗಳಿಗೆ ಸಾಕ್ಷಿಯಾಯಿತು

ಐಎಸ್‌ಎಸ್‌ನಲ್ಲಿ...
'ಆಕ್ಸಿಯಂ-4' ಅಂತರಿಕ್ಷ ಕಾರ್ಯಕ್ರಮದ ಭಾಗವಾಗಿ ಜೂನ್ 25ರಂದು, ಭಾರತದ ಗಗನಯಾನಿ ಶುಭಾಂಶು ಶುಕ್ಲಾ, ಹಂಗರಿ, ಪೋಲೆಂಡ್‌ನ ಗಗನಯಾತ್ರಿಗಳೊಂದಿಗೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದರು. 18 ದಿನಗಳ ಈ 'ಗಗನ ಯಾತ್ರೆ'ಯಲ್ಲಿ ಸಹ ವಿಜ್ಞಾನಿಗಳ ಜೊತೆಗೂಡಿ ಐಎಸ್‌ಎಸ್‌ನಲ್ಲಿ 60ಕ್ಕೂ ಹೆಚ್ಚು ಪ್ರಯೋಗಗಳನ್ನು ನಡೆಸಿದರು. ಭಾರತೀಯರೊಬ್ಬರು ಐಎಸ್‌ಎಸ್‌ಗೆ ಹೋಗಿದ್ದು ಇದೇ ಮೊದಲು.

ಪ್ರೊಪಲ್ಷನ್ - ಕ್ರಯೋಜೆನಿಕ್ ಅಭಿವೃದ್ಧಿ: ಭಾರತವು 2025ರಲ್ಲಿ ಪ್ರೊಪಲ್ಷನ್ ಮತ್ತು ಕ್ರಯೋಜೆನಿಕ್ ಹಂತದ ಎಂಜಿನ್ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿತು. ಜುಲೈ 3ರಂದು ಮಹೇಂದ್ರಗಿರಿಯಲ್ಲಿರುವ ಪ್ರೊಪಲ್ಷನ್ ಕಾಂಪ್ಲೆಕ್ಸ್‌ನಲ್ಲಿ ಮಾನವಸಹಿತ ಬಾಹ್ಯಾಕಾಶ ಕಾರ್ಯಕ್ರಮ 'ಗಗನಯಾನ'ದ 'ಸರ್ವಿಸ್ ಮಾಡ್ಯೂಲ್ ಪ್ರೊಪಲ್ಷನ್ ಸಿಸ್ಟಮ್' (ಎಸ್‌ಎಂಪಿಎಸ್) ಮತ್ತೆ ಎರಡು 'ಹಾಟ್ ಟೆಸ್ಟ್'ಗಳನ್ನು ಯಶಸ್ವಿಯಾಗಿ ನಡೆಸಲಾಯಿತು

ಸಂಭ್ರಮದ ವರ್ಷಾಂತ್ಯ: ವರ್ಷಾಂತ್ಯವೂ ಇಸ್ರೊ ಪಾಲಿಗೆ ಸಾಧನೆ ಸಂಭ್ರಮ. ಡಿಸೆಂಬರ್ 24ರಂದು ಸ್ವದೇಶಿ ನಿರ್ಮಿತ 'ಬಾಹುಬಲಿ' ರಾಕೆಟ್ ಮೂಲಕ ಹೊಸ ತಲೆಮಾರಿನ ಅಮೆರಿಕದ ಸಂವಹನ ಉಪಗ್ರಹವನ್ನು ಯಶಸ್ವಿಯಾಗಿ ನಿಗದಿತ ಕಕ್ಷೆಗೆ ಸೇರಿಸಲಾಯಿತು. 6,100 ಕೆ.ಜಿ ತೂಕದ ಬ್ಲೂಬರ್ಡ್ ಬ್ಲಾಕ್-2 ಉಪಗ್ರಹವನ್ನು ಹೊತ್ತ ಎಲ್‌ವಿಎಂ3-ಎಂ6 ರಾಕೆಟ್, ನಭಕ್ಕೆ ಚಿಮ್ಮಿತು. ಭಾರತದ ಮಣ್ಣಿನಿಂದ ಉಡಾವಣೆಯಾದ ಅತ್ಯಂತ ಭಾರವಾದ ಉಪಗ್ರಹ ಇದು

ರಕ್ಷಣಾ ಕ್ಷೇತ್ರ

ಶತ್ರುಗಳ ಅತ್ಯಾಧುನಿಕ 'ಶಸ್ತ್ರಾಸ್ತ್ರ'ಗಳನ್ನು ಹೊಡೆದುರುಳಿಸುವ ಸ್ವದೇಶಿ ನಿರ್ಮಿತ ಆಕಾಶ್ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಿದ್ದು, ಕಡಿಮೆ ಎತ್ತರದಲ್ಲಿರುವ ಗುರಿಯನ್ನು ಧ್ವಂಸ ಮಾಡುವ ವಿಎಸ್‌ಎಚ್‌ಒಆರ್‌ಎಡಿಎಸ್, ಲೇಸರ್ ಕಿರಣಗಳ ಮೂಲಕ ಶತ್ರುಗಳ ವಿಮಾನ, ಡ್ರೋನ್, ಕ್ಷಿಪಣಿಗಳನ್ನು ನಿರ್ನಾಮ ಮಾಡುವ ಡಿಇಡಬ್ಲ್ಯು... ಇವು 2025ರ ಭಾರತೀಯ ರಕ್ಷಣಾ ಕ್ಷೇತ್ರದಲ್ಲಿ ಹೆಚ್ಚು ಸದ್ದು ಮಾಡಿದ ರಕ್ಷಣಾ ಸಾಧನೆಗಳು

- ಈ ವರ್ಷದ ಫೆಬ್ರುವರಿ 1ರಂದು ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಅತ್ಯಂತ ಕಡಿಮೆ ಎತ್ತರದಲ್ಲಿರುವ ವಾಯು ರಕ್ಷಣಾ ವ್ಯವಸ್ಥೆಯ (ವಿಎಸ್‌ಎಚ್‌ಒಆರ್ ಎಡಿಎಸ್) ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಇದರ ಮೂಲಕ 600 ಮೀಟರ್‌ನಿಂದ 6 ಕಿ.ಮೀ ದೂರದಲ್ಲಿರುವ ಗುರಿಯನ್ನು ನಾಶಪಡಿಸಬಹುದು
- ಲೇಸರ್ ಕಿರಣಗಳ ಮೂಲಕ ಶತ್ರುಗಳ ವಿಮಾನ, ಡ್ರೋನ್, ಕ್ಷಿಪಣಿಯನ್ನು ನಾಶ ಮಾಡುವ ಅಸ್ತ್ರ ಲೇಸರ್ ಬೇಸ್ಡ್ ಡೈರೆಕ್ಟೆಡ್ ಎನರ್ಜಿ ವೆಪನ್. ಡಿಆರ್‌ಡಿಒ ಏಪ್ರಿಲ್ 13ರಂದು ಈ ಸಾಧನದ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿತು. ಗರಿಷ್ಠ 3.5 ಕಿ.ಮೀ ದೂರ ದಲ್ಲಿರುವ ಗುರಿಗಳನ್ನು ಧ್ವಂಸ ಮಾಡಬಲ್ಲ ಸಾಮರ್ಥ್ಯ ಇದರದ್ದು

- ಜುಲೈ 28, 29ರಂದು ಒಡಿಶಾದ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಿಂದ 'ಪ್ರಳಯ' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ನಡೆಸಲಾಯಿತು
- ಡ್ರೋನ್ ದಾಳಿ ಮೂಲಕ ನಡೆಸಬಹುದಾದ ನಿಖರ ನಿರ್ದೇಶಿತ ಕ್ಷಿಪಣಿ (ಯುಎಲ್‌ಪಿಜಿಎಂ–ವಿ3) ಪ್ರಯೋಗ ಜುಲೈ 25ರಂದು ಯಶಸ್ವಿಯಾಯಿತು
- ಡಿಆರ್‌ಡಿಒ ವಿನ್ಯಾಸಗೊಳಿಸಿದ ದೇಶೀಯ ತಂತ್ರಜ್ಞಾನದಲ್ಲಿ ವಿನ್ಯಾಸಗೊಳಿಸಿದ 'ಎಂಕೆ–II' ಯಂತ್ರವನ್ನು ಆಗಸ್ಟ್ 11ರಂದು ಸೇನೆಗೆ ಸೇರ್ಪಡೆಗೊಳಿಸಲಾಯಿತು. ಸ್ಫೋಟಕ ಅಡಗಿಸಿಟ್ಟ ಪ್ರದೇಶಗಳ ಯಾಂತ್ರಿಕ ಗುರುತು ಮಾಡುವ ಈ ಸಾಧನ ಸೇನಾ ಕಾರ್ಯಾಚರಣೆಗಳ ಕಾರ್ಯಕ್ಷಮತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ
- ಯುದ್ಧ ವಿಮಾನ ಚಾಲನೆಯಲ್ಲಿರುವಾಗ ಆಮ್ಲಜನಕ ಉತ್ಪತ್ತಿ ಮಾಡಿ, ಪೈಲಟ್‌ಗಳಿಗೆ ಪೂರೈಸುವ ಸಾಧನವೊಂದನ್ನು ಡಿಆರ್‌ಡಿಒ ಅಭಿವೃದ್ಧಿಪಡಿಸಿತು. ಭೂಮಟ್ಟದಿಂದ ಅತಿ ಅತ್ತರದಲ್ಲಿ ಹಾರಾಡುವ ತೇಜಸ್‌ನಂತಹ ಲಘು ಯುದ್ಧ ವಿಮಾನದ ಪೈಲಟ್‌ಗಳಿಗೆ ಜೀವ ರಕ್ಷಕ ಆಮ್ಲಜನಕ ವ್ಯವಸ್ಥೆಯನ್ನು ಪೂರೈಸುವ ಸಾಧನ ಇದು

ಕ್ಷಮೆ, ಸಾಂತ್ವನಗಳೆಂಬ ಪ್ರಾಣವಾಯು

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಸಾಕ್ರೆಟೀಸನಿಗೆ ವಿಷ ಕುಡಿಸಲಾಯಿತು. ಏಸುಕ್ರಿಸ್ತನನ್ನು ಶಿಲುಬೆಗೇರಿಸಿದರು. ಜಾನ್ ಎಫ್. ಕೆನಡಿ ಮತ್ತು ಮಹಾತ್ಮ ಗಾಂಧಿಯವರನ್ನು ಗುಂಡಿಟ್ಟು ಕೊಂದರು. ಮನುಷ್ಯರಾದ ನಮಗೆ ಸದ್ಯಕ್ಕೆ ಇರುವ ಒಂದೇ ಒಂದು ಭೂಮಿಯಲ್ಲಿ ಎಷ್ಟೊಂದು ರಕ್ತ ಹರಿದಿದೆ. ಯಾಕೆ ಹೀಗೆ? ಮನುಷ್ಯ ನಿರ್ಮಿತ ಯುದ್ಧಗಳಲ್ಲಿ ಹರಿದ ರಕ್ತ ಯಾವ ಮಹಾತ್ಮರನ್ನೂ ರೂಪಿಸಿದಂತಿಲ್ಲ. ಆದರೆ ಆ ರಕ್ತದ ಕೆಂಪು ಸೃಷ್ಟಿಸಿದ ವಿಷಾದವೇ ಹಿಂಸೆಯನ್ನು ವಿರೋಧಿಸುವ ಸಾರ್ವಕಾಲಿಕ ತತ್ವವಾಗಿ ರೂಪಗೊಂಡದ್ದು ಮಾತ್ರ ಸುಳ್ಳಲ್ಲ. ಬಹುಶಃ ಇಂಥ ತಾತ್ವಿಕತೆಯೇ ಸಾಮಾನ್ಯ ಜನಜೀವನದ ಭರವಸೆಗೂ ಮಹಾತ್ಮರ ಅಕಾಲಿಕ ನಿಧನಕ್ಕೂ ಕಾರಣವಾಗಿದೆ. ವಿಚಿತ್ರವೆಂದರೆ ಮಹಾದಾರ್ಶನಿಕರ ಮರಣಾನಂತರದ ನಿರ್ವಾತವನ್ನು ತುಂಬಿಕೊಳ್ಳುವ ಕೆಲಸ ಮತ್ತು ಅದನ್ನು ಹತ್ತಿಕ್ಕುವ ಪ್ರಯತ್ನಗಳು ಜೊತೆಜೊತೆಗೆ ನಡೆಯುತ್ತಿವೆ. ಇಷ್ಟಾದರೂ ಅಹಿಂಸೆಯನ್ನು ಮನುಷ್ಯ ತನ್ನ ಮೌಲ್ಯಪ್ರಜ್ಞೆಯ ಮಹತ್ವದ ಭಾಗವಾಗಿ ಒಳಗೊಂಡಂತಿಲ್ಲ. ಈ ಮಾತನ್ನು ಸಮರ್ಥಿಸುವಂತೆ ವರ್ಷಗಳಿಂದ ನಡೆಯುತ್ತಿರುವ ಯುದ್ಧಗಳ ಪರಿಣಾಮ ನಮ್ಮೆಲ್ಲರ ಕಣ್ಮುಂದಿದೆ.

ಸತ್ಯವೇ ನಮ್ಮ ತಾಯಿ ತಂದೆ... ಸತ್ಯವೇ ಬಂಧು ಬಳಗ... ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು... ಎಂದು ನುಡಿದು ಹಾಗೆಯೇ ನಡೆದುಕೊಂಡ ಪುಣ್ಯಕೋಟಿಯ ಕಥೆಯನ್ನು ಹಸುವಿನ ಸಹಜ ಗುಣಶೀಲದ ವ್ಯಾಖ್ಯಾನ ಮಾಡಿ ಮುಗಿಸಿಬಿಡುವ ರೂಢಿ ನಮ್ಮದು. ಸತ್ಯವನ್ನು ಆತ್ಯಂತಿಕ ಮೌಲ್ಯವೆಂದು ನಂಬಿದ್ದ ಗಾಂಧಿ ಕೂಡ ಮೊದಮೊದಲು 'ದೇವರು ಸತ್ಯ' ಎಂದುಕೊಂಡೇ ಬದುಕಿದವರು. ಅವರಲ್ಲಿ 'ಸತ್ಯವೇ ದೇವರು' ಎಂದಾದ ಮೌಲ್ಯಪಲ್ಲಟವು ಅಹಿಂಸೆಯನ್ನು ಸತ್ಯದ ತೆಕ್ಕೆಗೇ ತಂದು ನಿಲ್ಲಿಸಿತು. ಅಹಿಂಸೆಯು ಸತ್ಯದ ಹೊಳಪನ್ನೂ ಬಲವನ್ನೂ ಹೆಚ್ಚಿಸುತ್ತದೆ. ಅಹಿಂಸೆಯಿಲ್ಲದ ಸತ್ಯಕ್ಕೆ ಅಸ್ತಿತ್ವವೇ ಇಲ್ಲ.

ಕರುವಿಗೆ ಹಾಲುಣಿಸಿ ಬರುವುದಾಗಿ ಹೇಳಿದ ಪುಣ್ಯಕೋಟಿಯ ಮಾತನ್ನು ನಂಬಿ ಕಳಿಸಿಕೊಡುವ ಹುಲಿ ಹಸಿವನ್ನು ಮಾತ್ರವಲ್ಲ, ಹಿಂಸೆಯನ್ನೂ ಮುಂದೂಡುತ್ತದೆ. ಹಸು ಹಿಂತಿರುಗಿ ಬಂದಾಗ ಅದರ ಸತ್ಯಸಂಧತೆಗೆ ಬೆರಗಾಗುತ್ತದೆ. ಪಾಪಪ್ರಜ್ಞೆ ಪಶ್ಚಾತ್ತಾಪವಾಗಿ ಮಾರ್ಪಟ್ಟು ಸಾಯುವ ಹುಲಿಯು ಕೊಂದು ತಿನ್ನುವ ತನ್ನ ದೇಹ ಧರ್ಮವನ್ನು ಮೀರಿ ಅಹಿಂಸೆಯ ಲೋಕಧರ್ಮದ ಅಗತ್ಯವನ್ನು ದೃಢಪಡಿಸುತ್ತದೆ. ಅಹಿಂಸೆಗಾಗಿ ಜೀವ ಬಿಟ್ಟ ವ್ಯಾಘ್ರ ಸತ್ಯಧರ್ಮದಿಂದ ನಡೆದುಕೊಂಡ ಹಸುವಿಗಿಂತ ಗುಲಗಂಜಿ ತೂಕದಷ್ಟಾದರೂ ಹೆಚ್ಚು ತೂಗುತ್ತದೆ. ಜೀವವೊಂದರ ಅಸ್ತಿತ್ವಕ್ಕಾಗಿ, ಅದರ ಬದುಕುವ ಹಕ್ಕಿಗಾಗಿ ತನ್ನ ಜೀವನಧರ್ಮವನ್ನು ಮೀರುವ ಹುಲಿಯ ಮನೋಧರ್ಮ ನಮ್ಮ ಬದುಕಿನ ತಾತ್ವಿಕ ಆಕರ್ಷಣೆಯಾಗಬೇಕಿತ್ತು. ಹಿಂಸಾಮೋಹಿಗಳ ಯುದ್ಧದಾಹದ ಮನಃಸ್ಥಿತಿಯಲ್ಲಿ ವಾಟ್ಸ್ಆ್ಯಪ್ ವೀರರು ಮಾತ್ರ ಹುಟ್ಟುತ್ತಾರೆ.

ಭೂಮಿಗೆ ಬಿದ್ದ ಮಾನವ ರಕ್ತ ಕಾಲಕಾಲಕ್ಕೂ ಮನುಷ್ಯನ ವಿರುದ್ಧದ ಪ್ರತೀಕಾರವನ್ನೇ ಸಾಧಿಸಿದೆ. ಚರಿತ್ರೆಯ ವಿಕಾರಗಳಿಂದ ಪಾಠ ಕಲಿಯದ ಮನುಷ್ಯ ಮತ್ತೆ ಹಿಂಸೆಯ ಕುಲುಮೆಕಾವಿನಲ್ಲಿ ಬೆಚ್ಚಗಿರಬಹುದು ಎಂದು ಭಾವಿಸಿದರೆ ಅದು ಎಂದೂ ಸರಿಪಡಿಸಲಾಗದ ಅನಾಹುತಕ್ಕೆ ದಾರಿಯಾದೀತು.

ಮನುಷ್ಯ ಚರಿತ್ರೆಯ ಒಟ್ಟು ಹಿಂಸೆಗೆ ಸಮಾನವಾದ ನೋವನ್ನು ಅನುಭವಿಸಿದ ಏಸುಕ್ರಿಸ್ತನ ಕ್ಷಮೆ ನಮಗೆ ಜೀವನವನ್ನು ಕರುಣಿಸಬಲ್ಲುದು. ಕ್ಷಮೆಯೇ ವಿವೇಕ. ಹಿಂಸೆಯೇ ವಿಕಾರ. ಜಗತ್ತಿನ ಎಲ್ಲ ಹಿಂಸೆಯ ಪ್ರತೀಕವಾದ ರಕ್ತಸಿಕ್ತ ಶಿಲುಬೆ ಹೊತ್ತು ನಡೆದು ಮೂರು ಸಲ ಬಿದ್ದಾಗಲೂ ಅವನ ಅಂತರ್ಗತ ಕ್ಷಮೆಯ ಒರತೆ ಬತ್ತಲಿಲ್ಲ. ಅವನ ದೇಹದಿಂದ ಜಿನುಗುತ್ತಿದ್ದ ಪ್ರತಿ ಹನಿ ರಕ್ತವನ್ನು ಒರೆಸಿ ಆರೈಕೆ ಮಾಡುವ ಸಾಂತ್ವನದ ಕೈಗಳು ಸೋಲಲಿಲ್ಲ. ಮಾನವೀಯತೆಯ ಬೇರಿಗೆ ಕ್ಷಮೆ ಸಾಂತ್ವನಗಳೇ ಪ್ರಾಣವಾಯು. ಕ್ಷಮೆಯ ವಿವೇಕಗುಣದಿಂದ ಹಿಂಸೆಯ ವಿಕಾರವನ್ನು ಕರಗಿಸಿಕೊಳ್ಳಬೇಕಾದದ್ದು ಎಲ್ಲರ ಜವಾಬ್ದಾರಿ. ❖

ಪದಬಂಧ 6268

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ನಲ್ವತ್ತೆಂಟನೆಯ ಸಂವತ್ಸರ ಸಂತೋಷವನ್ನೂ ತಂದಿದೆ (3)
5.ಹಸನ್ಮುಖ ವದನವಿದು (4)
6.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8.ಜರಿಯದಿರಿ! ಇದು ಮುಸಲ್ಮಾನರ ಕಾಲಗಣನೆ! (3)
11.ಕುದುರೆಯನ್ನೇರುವ ಬಳೆ (3)
13.ಮಣಿ ಧರಿಸಿರುವ ಸೂರ್ಯ! (4)
17.ದೇಶದಿಂದ ಹೊರಗೆ ಹಾಕುವುದು (4)
18.ಕೆಟ್ಟ ಹಂಚಿಕೆಯಿಲ್ಲಿ ಉಲ್ಟಾ ಆಗಿದೆ (3)

ಮೇಲಿಂದ ಕೆಳಕ್ಕೆ
1.ದೇವೋಭವ ಎನಿಸಿಕೊಳ್ಳುವ ಗುರು (3)
2.ಈತ ದನಗಳನ್ನು ಕಾಯುವವನು (4)
3.ಗರ ಬಡಿದಿರುವ ಷಹರು (3)
4.ಕಾವ್ಯದ ನವರಸಗಳಲ್ಲಿ ಇದು ಜಿಗುಪ್ಸೆಯನ್ನುಂಟು ಮಾಡಿದೆ (3)
7.ವರ್ಣದಿಂದಲೇ ವಿಸ್ತಾರವಾದ ನಿರೂಪಣೆ (3)
9.ಪೇರಿ ಕಿತ್ತಾಗಲೇ ಮಾಡಿರುವ ದುರಸ್ತಿ (3)
10.ವಿಷಯದ ಕ್ರಮಬದ್ಧವಾದ ನಿರೂಪಣೆ (3)
12.ಹೇಳಿದುದನ್ನೇ ಮತ್ತೆ ಹೇಳುವುದು (4)
14.ಮುಸಲ್ಮಾನ ದೊರೆ (3)
15.ಗೋ ಜಾತಿಯ ಪ್ರಾಣಿಗಳ ತ್ಯಾಜ್ಯ ಉತ್ಪನ್ನ ಉಲ್ಟಾ ಆಗಿದೆ (3)
16.ತಪರಾಕಿ ನೀಡಿದವನಿಗೆ ಈ ಹೊಗಳಿಕೆ! (3)

6267ನೇ ಪದಬಂಧದ ಉತ್ತರ
ಎಡದಿಂದ ಬಲಕ್ಕೆ:
1.ಪ್ರಭವ 5.ಶ್ರೀನಿವಾಸ 6.ಮಗ 9.ಅಂಬಿಕಾತನಯದತ್ತ 12.ಗದುಗಿನನಾರಣಪ್ಪ 15.ಲೆಬ 17.ವಿನಾಯಕ 20.ಸಲ್ಲಾಪ
ಮೇಲಿಂದ ಕೆಳಕ್ಕೆ:
1.ಪ್ರಣಾಮ 2.ವಜ್ರ 3.ಧ್ವನಿ 4.ಸಂಸ 5.ಶ್ರೀಮಂತ 7.ಗಅಂ 8.ಹುತ್ತ 10.ಕಾನನ 11.ನಶ್ವರ 12.ಗಡಿ 13.ನಾವಿಕ 14.ಪ್ಪಳೆ 16.ಬಳಪ 17.ವಿಧ 18.ಯಿತ 19.ಮೋಸ

ಸುಡೊಕು 6652

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4				1		2	6
8		7		3				9
		5			9		8	
	6			4		3		8
	7	4	1	8	3			
3						5		1
	8		3		4			5
		1		9		8		4
4			5			2		

6651 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

29 ಡಿಸೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ನವಮಿ ಗಂ 10-13 ನಕ್ಷತ್ರ: ರೇವತಿ ಗಂ 7-41 ನಂತರ ಅಶ್ವಿನಿ ಗಂ 30-05 ಯೋಗ: ಪರಿಘ ಗಂ. 7-36 ನಂತರ ಶಿವ ಗಂ 28-31 ಕರಣ: ಕೌಲವ ಗಂ. 10-13 ಧನು ಮಾಸದ 14 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 1 ನೇ ಪಾದ.
ರಾಹುಕಾಲ : ಬೆಳಿಗ್ಗೆ 07-30 - 09-00 , ಸೂರ್ಯೋದಯ : 06-56 ಸೂರ್ಯಾಸ್ತ : 06-09, ಮುಸ್ಲಿಂ ದಿನಾಂಕ : 08 ರಜಬ್, ಅದೃಷ್ಟ ಸಂಖ್ಯೆ : 10, 6

ಮೇಷ: ಪ್ರಸ್ತುತ ರಾಜಕೀಯ ವಿದ್ಯಮಾನಗಳಿಂದ ಲಾಭವಾಗಲಿದೆ. ಹಿತ-ಶತ್ರುಗಳ ಬಗ್ಗೆ ಎಚ್ಚರ ವಹಿಸಿ. ಕೆಲಸಗಳು ಕಷ್ಟವಾದರೂ ಸ್ವತಃ ನೀವೇ ಸೋಲನ್ನು ಘೋಷಿಸಿಕೊಳ್ಳಬೇಡಿ. ಪೊಲೀಸ್ ಅಧಿಕಾರಿಗಳಿಗೆ ವರ್ಗಾವಣೆ ಆಗಬಹುದು.

ವೃಷಭ: ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಮಾಡಿದ ತಪ್ಪಿನಿಂದ ನಷ್ಟ ಅನುಭವಿಸಬೇಕಾಗುವುದು. ಬರಬೇಕಾಗಿದ್ದ ಹಣಕ್ಕೆ ತುಸು ಅಡಚಣೆಗಳನ್ನು ನಿವಾರಿಸಿಕೊಳ್ಳಬೇಕಾಗುವುದು.

ಮಿಥುನ: ಕೋರ್ಟು ಕಚೇರಿಯ ಕೆಲಸ ಕಾರ್ಯಗಳು ಪರದಾಟವಿಲ್ಲದೆ ಅನುಕೂಲಕ್ಕೆ ತಕ್ಕಂತೆ ನಡೆಯುತ್ತವೆ. ಸಹೋದರನ ಬಹಳ ದಿನದ ನಂತರದ ಆಗಮನ ಸಂತೋಷಕ್ಕೆ ಕಾರಣವಾಗುತ್ತದೆ.

ಕರ್ಕಾಟಕ: ವೃತ್ತಿಯಲ್ಲಿನ ಸಣ್ಣ-ಪುಟ್ಟ ಬದಲಾವಣೆ ಧನಲಾಭ ತಂದು ಕೊಡುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಹಾಗೂ ಅನುಭವಸ್ಥರ ಸಲಹೆ ಲಭ್ಯವಾಗಲಿದೆ. ವೃತ್ತಿಯಲ್ಲಿ ಅಭಿವೃದ್ಧಿ ಸಮಾಧಾನವನ್ನು ನೀಡಲಿದೆ.

ಸಿಂಹ: ದಿನಸಿ ವ್ಯಾಪಾರಿಗಳು ವ್ಯಾಪಾರವನ್ನು ವಿಸ್ತರಣೆ ಮಾಡುವುದಕ್ಕಿಂತ ಗುಣಮಟ್ಟ ಕಾಪಾಡುವ ಬಗ್ಗೆ ಗಮನಹರಿಸಿ. ಹಿಂದಿನಿಂದ ಬಂದಂಥ ಆಸ್ತಿಯ ಸಮಸ್ಯೆಗಳು ಮಾತುಕತೆಯ ಮೂಲಕ ಇತ್ಯರ್ಥವಾಗುವುದು.

ಕನ್ಯಾ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗಲಿವೆ. ಕಂಪನಿಯ ವಿದೇಶದಲ್ಲಿನ ಹುದ್ದೆಗಾಗಿ ಅರ್ಜಿ ಸಲ್ಲಿಸಬಹುದು. ಶತ್ರುಗಳ ವಿರುದ್ಧ ಜಯ ಸಾಧಿಸಬಹುದು.

ತುಲಾ: ನಿಮ್ಮೊಡನೆ ಹರಿದು ಬರುವಂಥ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕಾರ ಮಾಡಿ. ಬಹಳ ದಿನಗಳ ನಂತರ ಮನಸ್ಸಿಗೆ ಹಿತ ಅನುಭವ ಸಿಗಲಿದೆ. ಉದ್ಯೋಗದಲ್ಲಿ ಬದಲಾವಣೆಗೆ ಪೂರಕವಾದ ಸನ್ನಿವೇಶ ಕಂಡುಬರುತ್ತದೆ.

ವೃಶ್ಚಿಕ: ನಿರೀಕ್ಷಿಸುತ್ತಿದ್ದಂಥ ವ್ಯವಹಾರಗಳಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಮನೆಯವರೊಂದಿಗೆ ತೀರ್ಥಯಾತ್ರೆಗೆ ತೆರಳುವ ಬಗ್ಗೆ ಚರ್ಚೆ ನಡೆಸುವಿರಿ.

ಧನು: ಷೇರುಗಳ ಮೇಲೆ ಹೆಚ್ಚಿನ ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು. ತೈಲ ಲೇಪನ, ಅಭ್ಯಂಗದಂಥ ವಿಧಿಯ ಆಚರಣೆಯಿಂದ ಆರೋಗ್ಯ ಉತ್ತಮಗೊಳ್ಳುವುದು.

ಮಕರ: ಇನ್ನೊಬ್ಬರ ಭಾವನೆಗಳಿಗೆ ಧಕ್ಕೆ ತರುವ ಬದಲು, ಬೆಲೆಕೊಡುವ ಮನಸ್ಥಿತಿ ಬೆಳೆಸಿಕೊಳ್ಳಿರಿ. ದುಡುಕು ಬುದ್ಧಿ ಕಡಿಮೆಯಾಗುವಂಥ ಲಕ್ಷಣಗಳಿವೆ. ನ್ಯಾಯಾಂಗ ಇಲಾಖೆಯವರಿಗೆ ಸೌಲಭ್ಯ ಸಿಗುತ್ತದೆ.

ಕುಂಭ: ಅರ್ಚಕ, ವೈದಿಕ ವೃತ್ತಿಯವರಿಗೆ ಕಾರ್ಯದೊತ್ತಡ ಅಧಿಕ ಮಟ್ಟದಲ್ಲಿದ್ದರೂ, ಸರಿಸಮಾನ ಗೌರವಧನಕ್ಕೆ ಕೊರತೆ ಕಾಣುವುದಿಲ್ಲ. ಬದುಕನ್ನು ಅರ್ಥಪೂರ್ಣವಾಗಿ ನಡೆಸುವ ಬಗ್ಗೆ ಯೋಚನೆಗಳಿರಲಿ.

ಮೀನ: ಮಿತ್ರರ ಜೊತೆಗೂಡಿ ಮಾಡುವ ಸಾಹಸ ಕಾರ್ಯಗಳಿಂದ ಜಯ ಸಿಗುವುದು. ವೃತ್ತಿ ಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆಗೆ ಗೌರವ ಆದರಗಳು ಸಿಗಲಿವೆ. ಹಣ್ಣು ತರಕಾರಿ ವ್ಯಾಪಾರಿಗಳಿಗೆ ಉತ್ತಮ ಆದಾಯದ ಅವಕಾಶವಿದೆ.

ಗುಂಡಣ್ಣ

ಚಿಟಿಕೆ ಸುದ್ದಿ

ಇಂಡಿಗೊ: ಮಾರುಕಟ್ಟೆ ಪಾಲು ಇಳಿಕೆ

ನವದೆಹಲಿ (ಪಿಟಿಐ): ದೇಶದ ನಾಗರಿಕ ವಿಮಾನಯಾನ ಮಾರುಕಟ್ಟೆಯಲ್ಲಿ ಇಂಡಿಗೊ ಕಂಪನಿ ಪಾಲು ನವೆಂಬರ್‌ನಲ್ಲಿ ಶೇ 63.6ಕ್ಕೆ ಇಳಿದಿದೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು ತಿಳಿಸಿದೆ. ಅಕ್ಟೋಬರ್‌ನಲ್ಲಿ ಕಂಪನಿಯು ಶೇ 65.6ರಷ್ಟು ಪಾಲು ಹೊಂದಿತ್ತು.

ಈ ತಿಂಗಳ ಆರಂಭದಲ್ಲಿ ಇಂಡಿಗೊ ವಿಮಾನಗಳ ಕಾರ್ಯಾಚರಣೆಯಲ್ಲಿ ಉಂಟಾದ ಅಡಚಣೆಯು ಇಳಿಕೆಗೆ ಕಾರಣ ಎಂದು ಹೇಳಿದೆ.

ಏರ್ ಇಂಡಿಯಾ ಸಮೂಹ (ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್) ಮತ್ತು ಸ್ಪೈಸ್‌ಜೆಟ್ ಮಾರುಕಟ್ಟೆ ಪಾಲು ಕ್ರಮವಾಗಿ ಶೇ 26.7 ಮತ್ತು ಶೇ 3.7ಕ್ಕೆ ಹೆಚ್ಚಳವಾಗಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹705	100 ಕ್ಕೆ	₹706
12 ಕ್ಕೆ	₹96		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹444-755
ದ್ವಿತಳಿ (ಬಿ.ವಿ)	₹301-889

ಹಡಗು ನಿರ್ಮಾಣ: ಎರಡು ಯೋಜನೆಗೆ ಮಾರ್ಗಸೂಚಿ

ನವದೆಹಲಿ (ಪಿಟಿಐ): ಹಡಗುಗಳ ನಿರ್ಮಾಣಕ್ಕೆ ಸಂಬಂಧಿಸಿದ ಎರಡು ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಕೇಂದ್ರ ಬಂದರು, ಹಡಗು ನಿರ್ಮಾಣ ಮತ್ತು ಜಲಮಾರ್ಗ ಸಚಿವಾಲಯವು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಈ ಎರಡು ಯೋಜನೆಗಳಿಗಾಗಿ ಒಟ್ಟು ₹44,700 ಕೋಟಿ ನಿಗದಿ ಮಾಡಲಾಗಿದೆ.

ಹಡಗು ನಿರ್ಮಾಣಕ್ಕೆ ಹಣಕಾಸಿನ ನೆರವು ಯೋಜನೆ (ಎಸ್‌ಬಿಎಫ್ಎಎಸ್) ಮತ್ತು ಹಡಗು ನಿರ್ಮಾಣ ಅಭಿವೃದ್ಧಿ ಯೋಜನೆ (ಎಸ್‌ಬಿಡಿಎಸ್) ದೇಶದಲ್ಲಿ ಹಡಗು ನಿರ್ಮಾಣ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿವೆ.

ಎಸ್‌ಬಿಎಫ್ಎಎಸ್ ಅಡಿಯಲ್ಲಿ ಒಟ್ಟು ₹24,737 ಕೋಟಿಯನ್ನು ನಿಗದಿ ಮಾಡಲಾಗಿದೆ. ಇದರ ಅಡಿಯಲ್ಲಿ ಕೇಂದ್ರ ಸರ್ಕಾರವು ಪ್ರತಿ ಹಡಗು ನಿರ್ಮಾಣಕ್ಕೆ ಶೇ 15ರಿಂದ ಶೇ 25ರವರೆಗೆ ಹಣಕಾಸಿನ ನೆರವು ಒದಗಿಸುತ್ತದೆ. ಎಸ್‌ಬಿಡಿಎಸ್ ಯೋಜನೆಯು ₹19,989 ಕೋಟಿ ಗಾತ್ರದ್ದಾಗಿದ್ದು, ಇದು ದೀರ್ಘಾವಧಿ ಯಲ್ಲಿ ಸಾಮರ್ಥ್ಯ ಹೆಚ್ಚಿಸುವ ಗುರಿಯನ್ನು ಹೊಂದಿದೆ.

ದೇಶದಲ್ಲಿ ಹಡಗು ನಿರ್ಮಾಣ ಕೆಲಸಗಳಿಗೆ ಈ ಯೋಜನೆಗಳು ಸ್ಥಿರವಾದ ಹಾಗೂ ಪಾರದರ್ಶಕವಾದ ಚೌಕಟ್ಟೊಂದನ್ನು ರೂಪಿಸಿ, ಆ ಚಟುವಟಿಕೆಗಳಿಗೆ ಮತ್ತೆ ಜೀವ ನೀಡಲಿವೆ ಎಂದು ಕೇಂದ್ರ ಬಂದರು ಸಚಿವ ಸರ್ವಾನಂದ ಸೊನೊವಾಲ್ ಅವರು ಹೇಳಿರುವುದಾಗಿ ಪ್ರಕಟಣೆ ತಿಳಿಸಿದೆ.

ಹೊಸ ಯೋಜನೆಗಳು ಹಡಗುಗಳನ್ನು ಭಾರತದಲ್ಲಿಯೇ ಗುಜರಿಗೆ ಹಾಕುವುದನ್ನು ಉತ್ತೇಜಿಸುವ ಅಂಶವನ್ನೂ ಒಳಗೊಂಡಿದೆ. ಭಾರತದಲ್ಲಿ ಹಡಗುಗಳನ್ನು ಗುಜರಿಗೆ ಹಾಕುವ ಮಾಲೀಕರಿಗೆ ಆ ಹಡಗಿನ ಗುಜರಿ ಬೆಲೆಯ ಶೇಕಡ 40ರಷ್ಟನ್ನು ಸಾಲದ ರೂಪದಲ್ಲಿ ಪಡೆಯುವ ಅವಕಾಶ ಇರುತ್ತದೆ.

ಮುಂದಿನ ಒಂದು ದಶಕದಲ್ಲಿ ಎಸ್‌ಬಿಎಫ್ಎಎಸ್ ಮೂಲಕ ₹96 ಸಾವಿರ ಕೋಟಿಯಷ್ಟು ಮೊತ್ತದ ಹಡಗುಗಳ ನಿರ್ಮಾಣಕ್ಕೆ ನೆರವು ಒದಗಿಸುವ ನಿರೀಕ್ಷೆ ಇದೆ, ಇದು ದೇಶದಲ್ಲಿ ಹಡಗು ನಿರ್ಮಾಣಕ್ಕೆ ಉತ್ತೇಜನ ನೀಡುತ್ತದೆ, ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಯೋಜನೆಯು ಹಡಗು ನಿರ್ಮಾಣಕ್ಕಾಗಿನ ಹೊಸ ಕ್ಲಸ್ಟರ್‌ಗಳ ಅಭಿವೃದ್ಧಿಗೆ, ಹಳೆಯ ನಿರ್ಮಾಣ ಘಟಕಗಳ ವಿಸ್ತರಣೆ ಮತ್ತು ಅಭಿವೃದ್ಧಿಗೆ ಕೂಡ ನೆರವಾಗಲಿದೆ ಎಂದು ಹೇಳಲಾಗಿದೆ.

ಮನೆ ಖರೀದಿ: ಯಾವುದು ಒಳಿತು?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಸ್ವಂತ ಮನೆ ಹೊಂದುವುದು ಪ್ರತಿಯೊಬ್ಬರ ಕನಸು. ಆದರೆ ಅದಕ್ಕೆ ಹಣ ಹೊಂದಿಸುವುದು ಸುಲಭದ ಮಾತಲ್ಲ. ರಿಯಲ್ ಎಸ್ಟೇಟ್ ಬೆಲೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಈ ಹೊತ್ತಿನಲ್ಲಿ ಸ್ವಂತ ಸೂರು ಹೊಂದಬೇಕಾದರೆ ದೊಡ್ಡ ಮೊತ್ತ ಅಗತ್ಯ. ಮನೆಯ ಕನಸನ್ನು ಬೇಗ ಸಾಕಾರಗೊಳಿಸಿಕೊಳ್ಳಲು ಅನೇಕರು ಗೃಹಸಾಲದ ಮೊರೆ ಹೋಗುತ್ತಾರೆ. ಬೆಲೆ ಏರಿಕೆಯ ಈ ಕಾಲದಲ್ಲಿ ಸಾಲ ತೆಗೆದುಕೊಂಡು ಗೃಹ ಪ್ರವೇಶ ಮಾಡುವ ನಿರ್ಧಾರಕ್ಕೆ ಬಂದರೆ ಆರ್ಥಿಕ ಒತ್ತಡ ನಿಭಾಯಿಸುವ ಜೊತೆಗೆ ಅನೇಕ ಸವಾಲುಗಳನ್ನು ಎದುರಿಸಲು ಸಜ್ಜಾಗಬೇಕಾಗುತ್ತದೆ. ಮನೆ ಕೊಳ್ಳಲು ಸಾಲದ ಇಎಂಐ ಭಾರವನ್ನು ಹೆಗಲಿಗೇರಿಸಿಕೊಳ್ಳುವ ಪದ್ಧತಿ ಜನರಲ್ಲಿ ಹಲವು ದಶಕಗಳಿಂದ ರೂಢಿಯಲ್ಲಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸಾಲದ ಭಾರ ಹೊರುವ ಬದಲು ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆಯ ಮೂಲಕ ಸ್ವಂತ ಸೂರು ಕೊಳ್ಳಲು ತಯಾರಿ ನಡೆಸಬಹುದೇ ಎಂಬ ಚಿಂತನೆ ಶುರುವಾಗಿದೆ. ಹಾಗಾದರೆ ಸಾಲ ಮಾಡಿ ಮನೆ ಖರೀದಿಸುವುದು ಒಳ್ಳೆಯದೋ ಅಥವಾ ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆ ಮಾದರಿಯಲ್ಲಿ ಹೊಸ ಮನೆಯ ಆಸೆ ಈಡೇರಿಸಿಕೊಳ್ಳುವುದೋ ಎಂಬುದನ್ನು ತಿಳಿಯುವ ಪ್ರಯತ್ನ ಮಾಡೋಣ.

ಸಾಲದಿಂದ ಮನೆ ಖರೀದಿಸಿದರೆ: ಉದಾಹರಣೆಗೆ ₹50 ಲಕ್ಷದ ಗೃಹಸಾಲವನ್ನು ಶೇ 7.9ರ ಬಡ್ಡಿ ದರದಲ್ಲಿ 20 ವರ್ಷಕ್ಕೆ ಪಡೆಯುತ್ತೀರಿ ಎಂದು ಭಾವಿಸಿ. ಇದಕ್ಕೆ ಪ್ರತಿ ತಿಂಗಳು ₹41,511 ಇಎಂಐ ಪಾವತಿಸಬೇಕಾಗುತ್ತದೆ. ಈ ಅವಧಿಯಲ್ಲಿ ₹50 ಲಕ್ಷ ಅಸಲಿನ ಮೊತ್ತದ ಜೊತೆಗೆ ₹49.62 ಲಕ್ಷ ಬಡ್ಡಿ ಪಾವತಿಸಬೇಕಾಗುತ್ತದೆ. ಅಲ್ಲಿಗೆ ಅಸಲು ಮತ್ತು ಬಡ್ಡಿ ಸೇರಿ ಸುಮಾರು ₹99.62 ಲಕ್ಷ ಕಟ್ಟಬೇಕಾಗುತ್ತದೆ. ಸಾಲ ಮಾಡಿ ಮನೆ ಖರೀದಿಸಿದಾಗ ಬಾಡಿಗೆ ಮನೆಗೆ ಕಟ್ಟುವ ಬಾಡಿಗೆಯ ಬಾಬ್ತು ತಕ್ಷಣದಿಂದಲೇ ಉಳಿಯುತ್ತದೆ. ಮನೆಯ ಮಾಲೀಕರಾಗುವ ಜೊತೆಗೆ ತೆರಿಗೆ ವಿನಾಯಿತಿಯ ಅನುಕೂಲಗಳು ನಿಮಗೆ ಸಿಗುತ್ತವೆ. ಆದರೆ ಹೀಗೆ ಸಾಲ ಮಾಡಿ ಮನೆ ಖರೀದಿಸಿದಾಗ ಹಲವು ವರ್ಷ ಸಾಲದ ಇಎಂಐ ಪಾವತಿಸಬೇಕು, ಜೊತೆಗೆ ಪಡೆದ ಅಸಲಿನಷ್ಟೇ ಮೊತ್ತದ ಬಡ್ಡಿಯನ್ನು ಸಾಲಕ್ಕೆ ಕಟ್ಟಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ದೀರ್ಘಾವಧಿಯ ಉಳಿತಾಯ ಮತ್ತು ಹೂಡಿಕೆ ಗುರಿಗಳಿಗೆ ಪೆಟ್ಟು ಬೀಳುವ ಸಾಧ್ಯತೆ ಇರುತ್ತದೆ.

ಹೂಡಿಕೆ ಮೊತ್ತದಲ್ಲಿ ಮನೆ ಖರೀದಿಸಿದರೆ?: ₹50 ಲಕ್ಷ ಸಾಲವನ್ನು ಶೇ 7.9ರ ಬಡ್ಡಿ ದರದಲ್ಲಿ 20 ವರ್ಷಕ್ಕೆ ಪಡೆದಾಗ ಮಾಸಿಕ ₹41,511 ಇಎಂಐ ಬರುತ್ತದೆ. ನೀವು ಸಾಲ ತೆಗೆದುಕೊಳ್ಳುವುದಿಲ್ಲ. ಆದರೆ ಆ ಸಾಲದ ಮೊತ್ತಕ್ಕೆ ಬರುವ ಮಾಸಿಕ ಇಎಂಐ ಪಾಲನ್ನು ಮ್ಯೂಚುವಲ್ ಫಂಡ್ ಎಸ್‌ಐಪಿಯಲ್ಲಿ 20 ವರ್ಷ ಹೂಡಿಕೆ ಮಾಡುತ್ತಾ ಸಾಗುತ್ತೀರಿ ಎಂದುಕೊಳ್ಳಿ. ಹೀಗೆ ಮಾಡಿದಾಗ 20 ವರ್ಷಗಳಲ್ಲಿ ಒಟ್ಟು ₹99.60 ಲಕ್ಷ ಹೂಡಿಕೆಯಾಗಿರುತ್ತದೆ. ಶೇ 12ರ ಗಳಿಕೆ ಅಂದಾಜಿನಲ್ಲಿ ₹2.82 ಕೋಟಿ ಗಳಿಕೆ ಸಿಗುತ್ತದೆ. ಅಂದರೆ, ಹೂಡಿಕೆ ಮೊತ್ತ ಮತ್ತು ಗಳಿಕೆ ಸೇರಿ ಒಟ್ಟು ₹3.81 ಕೋಟಿ ಲಭಿಸುತ್ತದೆ. ಇಎಂಐಗೆ ಹೋಗುವ ಮೊತ್ತವನ್ನು ಮ್ಯೂಚುವಲ್ ಫಂಡ್ ಎಸ್‌ಐಪಿಗಳಲ್ಲಿ ಹೂಡಿಕೆ ಮಾಡಿದರೆ ನಾಲ್ಕೈದು ಪಟ್ಟು ಹೆಚ್ಚು ಹಣ ಗಳಿಸಲು ಸಾಧ್ಯ. ಮನೆ ಖರೀದಿಗೆ 20 ವರ್ಷ ಕಾಯುತ್ತ ಕುಳಿತುಕೊಳ್ಳಲು ಸಾಧ್ಯವೇ ಎಂದು ನೀವು ಪ್ರಶ್ನಿಸಬಹುದು. ನಿಮ್ಮ ಪ್ರಶ್ನೆ ಸರಿ ಇದೆ. ₹41,500 ಎಸ್‌ಐಪಿ ಮಾಡಿದಾಗ ₹50 ಲಕ್ಷ ಹೊಂದಿಸಲು 20 ವರ್ಷವರೆಗೆ ಕಾಯಬೇಕಿಲ್ಲ. ಪ್ರತಿ ತಿಂಗಳು ₹41,500 ಹೂಡಿಕೆ ಮಾಡುತ್ತಾ ಸಾಗಿ ಶೇ 12ರಷ್ಟು ಗಳಿಕೆ ಸಿಕ್ಕರೆ ಮೊದಲ ಏಳು ವರ್ಷಗಳಲ್ಲೇ ನಿಮಗೆ ₹53.45 ಲಕ್ಷ (₹18.59 ಲಕ್ಷ ಗಳಿಕೆ ಸೇರಿ) ಲಭಿಸುತ್ತದೆ. ಆಗ ಮನೆ ಖರೀದಿಸುವ ಬಗ್ಗೆ ಆಲೋಚನೆ ಮಾಡಬಹುದು.

ಉದಾಹರಣೆಗೆ ಬೆಂಗಳೂರಿನ ಹೊರ ವಲಯದಲ್ಲಿ ಏಳೆಂಟು ವರ್ಷದ ಹಿಂದೆ ₹50 ಲಕ್ಷಕ್ಕೆ ಸಿಗುತ್ತಿದ್ದ '2 ಬಿಎಚ್‌ಕೆ' ಅಪಾರ್ಟ್‌ಮೆಂಟ್‌ಗಳ ಬೆಲೆ ಈಗ ಸುಮಾರು ₹80 ಲಕ್ಷದಿಂದ ₹85 ಲಕ್ಷದ ಆಸುಪಾಸಿಗೆ ಬಂದಿದೆ. ಮನೆ ಖರೀದಿಗಾಗಿ ಹಣ ಹೊಂದಿಸಲು ಮ್ಯೂಚುವಲ್ ಫಂಡ್ ಹೂಡಿಕೆ ಮಾಡುತ್ತಿದ್ದಾಗ ಅದು ಹೇಗೆ ವೃದ್ಧಿಸುವುದೋ ಅದೇ ಮಾದರಿಯಲ್ಲಿ ರಿಯಲ್ ಎಸ್ಟೇಟ್ ಬೆಲೆಯೂ ಹೆಚ್ಚುತ್ತಿರುತ್ತದೆ ಎನ್ನುವುದನ್ನು ಪರಿಗಣಿಸಬೇಕಾಗುತ್ತದೆ. ಇನ್ನು ಈಕ್ವಿಟಿ ಮ್ಯೂಚುವಲ್ ಫಂಡ್ ಹೂಡಿಕೆಗಳು ಷೇರು ಮಾರುಕಟ್ಟೆ ಏರಿಳಿತಕ್ಕೆ ಒಳಪಟ್ಟಿರುವುದರಿಂದ ಗಳಿಕೆಯ ಖಾತರಿ ಇರುವುದಿಲ್ಲ. ಇಂತಿಷ್ಟೇ ಲಾಭ ಗಳಿಸಬಹುದು ಎಂದು ಖಂಡಿತವಾಗಿ ಹೇಳಲು ಸಾಧ್ಯವಿಲ್ಲ.

ನೆನಪಿಡಿ: ಮನೆ ಖರೀದಿಗೆ ಸಾಲ ಮಾಡಬೇಕೋ ಇಲ್ಲ ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆ ಮಾದರಿ ಅನುಸರಿಸಬೇಕೋ ಎನ್ನುವುದಕ್ಕೆ 'ಇದೇ ಸರಿ' ಎನ್ನುವ ಸ್ಪಷ್ಟ ಉತ್ತರವಿಲ್ಲ. ಮೇಲಿನ ವಿಶ್ಲೇಷಣೆ ಇರುವುದು ಎರಡೂ ಮಾದರಿಗಳಲ್ಲಿ ಏನು ಅನುಕೂಲ ಮತ್ತು ಏನು ಅನನುಕೂಲ ಇದೆ ಎನ್ನುವುದನ್ನು ತಿಳಿಸಲಷ್ಟೇ. ಯಾವ ದಾರಿಯಲ್ಲಿ ಸ್ವಂತ ಮನೆ ಹೊಂದಬೇಕು ಎನ್ನುವುದು ವ್ಯಕ್ತಿಯ ಆರ್ಥಿಕ ಸ್ಥಿತಿ ಮತ್ತು ಆದ್ಯತೆಗಳನ್ನು ಅವಲಂಬಿಸಿರುತ್ತದೆ. ಯಾವುದೇ ತೀರ್ಮಾನ ಮಾಡುವ ಮುನ್ನ ಸೆಬಿ ನೋಂದಾಯಿತ ಹಣಕಾಸು ತಜ್ಞರ ಸಲಹೆ ಪಡೆಯಿರಿ.

ಇವು ಗಮನದಲ್ಲಿರಲಿ

ಮ್ಯೂಚುವಲ್ ಫಂಡ್ ಮಾರ್ಗದಲ್ಲಿ ಹೂಡಿಕೆ ಮಾಡಿ ಹಣ ಹೊಂದಿಸಿಕೊಂಡು ಮನೆ ಖರೀದಿಸುವ ಮಾದರಿಯಲ್ಲಿ ಕೊರತೆಗಳೇ ಇಲ್ಲ ಎಂದಲ್ಲ. ಇಲ್ಲೂ ಕೆಲ ಮಿತಿಗಳಿವೆ. 2025ರಲ್ಲಿ ₹50 ಲಕ್ಷ ಕೊಟ್ಟು ಖರೀದಿಸುವ ಮನೆಯ ಬೆಲೆ ಇನ್ನು 20 ವರ್ಷದ ಬಳಿಕ ಮತ್ತಷ್ಟು ಏರಿಕೆ ಕಂಡಿರುತ್ತದೆ ಎನ್ನುವುದು ಗಮನದಲ್ಲಿರಲಿ.

ಹಣಕಾಸು ಕಂಪನಿಗಳಿಂದ ತ್ವರಿತ ಮಾಹಿತಿ ಕೇಳಿದ ಕೇಂದ್ರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್, ಬ್ಯಾಂಕೇತರ ಹಣಕಾಸು ಕಂಪನಿ, ವಿಮಾ ಕಂಪನಿಗಳು ತಮ್ಮ ಪೂರ್ಣಾವಧಿ ನಿರ್ದೇಶಕರಿಗೆ ಸಂಬಂಧಿಸಿದ ವಿಚಕ್ಷಣಾ ವಿಚಾರವನ್ನು ಅವು ಗಮನಕ್ಕೆ ಬಂದ ತಕ್ಷಣ ತಿಳಿಸಬೇಕು ಎಂದು ಕೇಂದ್ರ ಹಣಕಾಸು ಸಚಿವಾಲಯವು ನಿರ್ದೇಶನ ನೀಡಿದೆ.

ಹಣಕಾಸು ಕಂಪನಿಗಳು ತಮ್ಮ ಆಡಳಿತ ಮಂಡಳಿಯ ಪೂರ್ಣಾವಧಿ ನಿರ್ದೇಶಕರಿಗೆ ಸಂಬಂಧಿಸಿದ, ಅವರ ವಿರುದ್ಧ ದಾಖಲಾದ ವಿಚಾರಗಳ ಮಾಹಿತಿಯನ್ನು ತಮ್ಮ ಗಮನಕ್ಕೆ ಬಂದ ತಕ್ಷಣ ಒದಗಿಸುತ್ತಿಲ್ಲ. ಹೀಗಾಗಿ ಹಣಕಾಸು ಸಚಿವಾಲಯದ ಅಧೀನದ ಹಣಕಾಸು ಸೇವೆಗಳ ಇಲಾಖೆಯು ಈ ನಿರ್ದೇಶನ ನೀಡಿದೆ.

ಹಲವಾರು ಪ್ರಕರಣಗಳಲ್ಲಿ, ಖಾಸಗಿ ದೂರುಗಳು, ನ್ಯಾಯಾಲಯ ಹೇಳಿದ ಮಾತುಗಳನ್ನು, ಸಿಬಿಐ ಅಥವಾ ಇತರೆ ಕಾನೂನು ಜಾರಿ ಸಂಸ್ಥೆಗಳಿಂದ ಬಂದಿರುವ ಮಾಹಿತಿಗಳನ್ನು ನಿರ್ದಿಷ್ಟವಾಗಿ ಕೋರಿದಾಗ ಮಾತ್ರ ನೀಡಲಾಗುತ್ತಿದೆ ಎಂದು ಹೇಳಿದೆ.

ನೇಮಕಾತಿ, ಬಡ್ತಿ, ಆಡಳಿತ ಮಂಡಳಿಯ ಹುದ್ದೆಗಳು, ಪೂರ್ಣಾವಧಿ ನಿರ್ದೇಶಕರ ನಿಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡದೇ ಇರುವುದು ಗಂಭೀರ, ಕಳವಳಕಾರಿ ವಿಷಯ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮಾಹಿತಿ ನೀಡುವುದು ಕಡ್ಡಾಯವಾಗಿದೆ ಎಂದು ಹೇಳಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಡಾ. ಎನ್. ಕೃಷ್ಣಪ್ಪ
ಎಂ.ಬಿ.ಬಿ.ಎಸ್, ಎಂ.ಎಸ್.(ಆರ್ಥೋ)
29-12-2008
ಇಂತಿ : ಕುಟುಂಬವರ್ಗದವರು

ವೈಕುಂಠ ಸಮಾರಾಧನೆ
ದಿನಾಂಕ: 30–12–2025



ಶ್ರೀ ಚಂದ್ರಣ್ಣನವರು
ಕರಿಯಪ್ಪನಹಳ್ಳಿ, ಬನ್ನೇರುಘಟ್ಟ
ಇಂತಿ ದುಃಖತಪ್ತರು : ಧರ್ಮಪತ್ನಿ ಶ್ರೀಮತಿ ಗಿರಿಜಮ್ಮ, ಕೌಶಲ್ ಚಂದ್ರು, ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು

ಉಪಗ್ರಹ ಆಧಾರಿತ ಸಂವಹನದ ಬಗ್ಗೆ ಕೇಂದ್ರ ದೂರಸಂಪರ್ಕ ಸಚಿವರ ವಿವರಣೆ

ನಿಯಮ ಪಾಲಿಸಿದ ಬಳಿಕ ಉಪಗ್ರಹ ಸಂವಹನ

ನವದೆಹಲಿ (ಪಿಟಿಐ): 'ಸ್ಟಾರ್‌ಲಿಂಕ್ ಸೇರಿದಂತೆ ಉಪಗ್ರಹ ಆಧಾರಿತ ಸಂವಹನ ಸೇವೆ ಒದಗಿಸುವ ಕಂಪನಿಗಳು ಭದ್ರತಾ ನಿಯಮ ಪಾಲಿಸಿದ ಬಳಿಕ ದೇಶದಲ್ಲಿ ಅವುಗಳ ಸೇವೆ ಆರಂಭಿಸಲಿವೆ' ಎಂದು ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.

ದೂರಸಂಪರ್ಕ ಇಲಾಖೆಯು ತರಂಗಾಂತರ ಬೆಲೆಯನ್ನು ಅಂತಿಮಗೊಳಿಸಿದ ನಂತರ ಉಪಗ್ರಹ ಆಧಾರಿತ ಸಂವಹನ ಸೇವೆ ಒದಗಿಸುವ ಸ್ಟಾರ್‌ಲಿಂಕ್, ಯುಟೆಲ್‌ಸ್ಯಾಟ್ ಒನ್ ಮತ್ತು ಜಿಯೊ ಎಸ್‌ಜಿಎಸ್‌ಗೆ ತರಂಗಾಂತರವನ್ನು ಹಂಚಿಕೆ ಮಾಡಲಾಗುವುದು ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಒನ್‌ವೆಬ್, ರಿಲಯನ್ಸ್ ಜಿಯೊ ಮತ್ತು ಸ್ಟಾರ್‌ಲಿಂಕ್ ಭದ್ರತಾ ಸಂಸ್ಥೆಗಳು ನಿಗದಿಪಡಿಸಿದ ನಿಯಮಗಳನ್ನು ಪಾಲಿಸಿ ಸೇವೆ ಆರಂಭಿಸಲು ಅನುಮತಿ ಪಡೆದುಕೊಳ್ಳಬೇಕು ಮತ್ತು ಭಾರತದಲ್ಲಿಯೇ ದತ್ತಾಂಶ ಉಳಿಯುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದ್ದಾರೆ.

ಈಗಾಗಲೇ ಈ ಕಂಪನಿಗಳಿಗೆ ತಾತ್ಕಾಲಿಕ ತರಂಗಾಂತರ ಹಂಚಿಕೆ ಮಾಡಲಾಗಿದೆ.

ದೂರಸಂಪರ್ಕ ಇಲಾಖೆ ಮತ್ತು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ತರಂಗಾಂತರ ಬೆಲೆಯನ್ನು ಅಂತಿಮಗೊಳಿಸುವ ಪ್ರಕ್ರಿಯೆ ನಡೆದಿದೆ. ಇದು ಶೀಘ್ರದಲ್ಲಿ ಮುಕ್ತಾಯಗೊಳ್ಳಲಿದೆ ಎಂದು ಸಚಿವರು ಹೇಳಿದ್ದಾರೆ.

ಟ್ರಾಯ್ ಮತ್ತು ದೂರಸಂಪರ್ಕ ಇಲಾಖೆಯು ಉಪಗ್ರಹ ಆಧಾರಿತ ಸಂವಹನದ ತರಂಗಾಂತರಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿವೆ. ಉಪಗ್ರಹ ಆಧಾರಿತ ಸೇವೆ ಒದಗಿಸುವ ಕಂಪನಿಗಳಿಗೆ ವಾರ್ಷಿಕ ತರಂಗಾಂತರ ಶುಲ್ಕವನ್ನು ಶೇ 4ರ ಬದಲು ಶೇ 5ರಷ್ಟು ವಿಧಿಸುವುದು ಸೇರಿ ಹಲವು ಸಲಹೆಗಳನ್ನು ದೂರಸಂಪರ್ಕ ಇಲಾಖೆ ನೀಡಿತ್ತು. ಈ ಸಲಹೆಗಳನ್ನು ಈ ತಿಂಗಳ ಆರಂಭದಲ್ಲಿ ಟ್ರಾಯ್ ತಿರಸ್ಕರಿಸಿದೆ.

ದೂರಸಂಪರ್ಕ ವಲಯದಲ್ಲಿ ನಿರ್ಧಾರ ತೆಗೆದುಕೊಳ್ಳುವ ಅತ್ಯುನ್ನತ ಸಂಸ್ಥೆಯಾದ ಡಿಜಿಟಲ್ ಸಂವಹನ ಆಯೋಗವು (ಡಿಸಿಸಿ) ತರಂಗಾಂತರದ ಬೆಲೆ ನಿರ್ಧರಿಸಿದ ಬಳಿಕ, ಅದಕ್ಕೆ ಕೇಂದ್ರ ಸಚಿವ ಸಂಪುಟದ ಅನುಮೋದನೆ ಸಿಗಬೇಕಿದೆ ಎಂದು ಹೇಳಿದ್ದಾರೆ.

'ವೊಡಾಫೋನ್ ಐಡಿಯಾಕ್ಕೆ ಪರಿಹಾರ ನೀಡಿಲ್ಲ'

ವೊಡಾಫೋನ್ ಐಡಿಯಾ (ವಿಐಎಲ್) ಕೋರಿರುವ ಪರಿಹಾರ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ ಸಚಿವರು, 'ಈ ವರ್ಷದ ಆರಂಭದಲ್ಲಿ ವೊಡಾಫೋನ್ ಐಡಿಯಾ ಕಂಪನಿಯು ದೂರಸಂಪರ್ಕ ಇಲಾಖೆಗೆ ಬರೆದ ಪತ್ರದಲ್ಲಿ ತಾನು ಸರ್ಕಾರಕ್ಕೆ ₹2 ಲಕ್ಷ ಕೋಟಿ ಸಾಲ ಮರುಪಾವತಿಸಬೇಕಿದೆ ಎಂದು ತಿಳಿಸಿದೆ' ಎಂದಿದ್ದಾರೆ.

ಇದುವರೆಗೆ ಕಂಪನಿಗೆ ಯಾವುದೇ ಪರಿಹಾರ ನೀಡಿಲ್ಲ. ಕಂಪನಿಯಿಂದ ಬರಬೇಕಿರುವ ಬಾಕಿಯನ್ನು ಷೇರುಗಳಾಗಿ ಪರಿವರ್ತನೆ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಕಂಪನಿಯಲ್ಲಿ ಶೇ 49ರಷ್ಟು ಪಾಲನ್ನು ಹೊಂದಲಾಗಿದೆ ಎಂದು ತಿಳಿಸಿದ್ದಾರೆ.

ಕಂಪನಿಗೆ ಪರಿಹಾರ ನೀಡದಿದ್ದರೆ, 2026ರ ಮಾರ್ಚ್ ವೇಳೆಗೆ ಕಂಪನಿಯು ₹18 ಸಾವಿರ ಕೋಟಿ ಪಾವತಿಸಬೇಕಿದೆ. ಇಷ್ಟೇ ಮೊತ್ತವನ್ನು ಮುಂದಿನ 6 ವರ್ಷಗಳ ಕಾಲ ಪ್ರತಿ ವರ್ಷವೂ ಪಾವತಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

ಸುಧಾ, ಮಯೂರ ಓದಿರಿ

'ಯುದ್ಧಾಂತ್ಯ: ರಷ್ಯಾ, ಉಕ್ರೇನ್‌ಗೆ ಆಸಕ್ತಿ'

ವೊಲೊಡಿಮರ್ ಝೆಲೆನ್‌ಸ್ಕಿ ಮತ್ತು ಡೊನಾಲ್ಡ್ ಟ್ರಂಪ್ –ಎಎಫ್‌ಪಿ ಚಿತ್ರ

ಫ್ಲಾರಿಡಾ, ಅಮೆರಿಕ (ಎಎಫ್‌ಪಿ): 'ಯುದ್ಧ ಕೊನೆಗೊಳಿಸುವ ಅಂತಿಮ ಪ್ರಯತ್ನವನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮರ್ ಝೆಲೆನ್‌ಸ್ಕಿ ಹಾಗೂ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಗಂಭೀರವಾಗಿ ಪರಿಗಣಿಸಿದ್ದಾರೆ. ಆದರೆ, ಯುದ್ಧ ಅಂತ್ಯಗೊಳಿಸಲು ಯಾವುದೇ ಗಡುವು ವಿಧಿಸಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಭಾನುವಾರ ಫ್ಲಾರಿಡಾ ಎಸ್ಟೇಟ್‌ನಲ್ಲಿ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರನ್ನು ಸ್ವಾಗತಿಸಿ, ಈ ಹೇಳಿಕೆ ನೀಡಿದ್ದಾರೆ.

ಕಳೆದ ಅಕ್ಟೋಬರ್‌ನಲ್ಲಿ ಝೆಲೆನ್‌ಸ್ಕಿ ಹಾಗೂ ಟ್ರಂಪ್ ಭೇಟಿಯಾಗಿ ಮಾತುಕತೆ ನಡೆಸಿದ್ದರು. ಆದಾದ ಸ್ವಲ್ಪ ಹೊತ್ತಿನಲ್ಲೇ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜೊತೆಗೆ ಟ್ರಂಪ್ ಮಾತುಕತೆ ನಡೆಸಿದ್ದರು. ಇದರಿಂದ ಹೊಸ ಭರವಸೆ ಮೂಡಿತ್ತು.

ಪುಟಿನ್ ಶಾಂತಿ ಮಾತುಕತೆಗೆ ಬದ್ಧರಾಗಿದ್ದಾರಾ ಎಂಬ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, 'ಈ ವಿಚಾರದಲ್ಲಿ ಪುಟಿನ್ ಅವರೂ ಗಂಭೀರವಾಗಿದ್ದಾರೆ' ಎಂದು ಹೇಳಿದ್ದಾರೆ.

ಮನದ ಮಾತು ಕಾರ್ಯಕ್ರಮದಲ್ಲಿ ನರೇಂದ್ರ ಮೋದಿ ಸಲಹೆ

ಆ್ಯಂಟಿಬಯೋಟಿಕ್ಸ್ ಬಳಕೆ; ಎಚ್ಚರಿಕೆ ವಹಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅನೇಕ ರೋಗಗಳ ವಿರುದ್ಧ ಆ್ಯಂಟಿಬಯೋಟಿಕ್ಸ್ (ಪ್ರತಿಜೀವಕ)ಗಳ ಬಳಕೆಯೂ ನಿಷ್ಪ್ರಯೋಜಕವಾಗಿದೆ ಎಂದು ಹಲವು ಸಂಶೋಧನೆಗಳಲ್ಲಿ ಕಂಡುಬಂದಿರುವುದು ಕಳವಳ ಮೂಡಿಸಿದ್ದು, ಅದರ ಬಳಕೆ ಕುರಿತಂತೆ ಜನರು ಎಚ್ಚರ ವಹಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದಾರೆ.

2025ನೇ ವರ್ಷದ ಕೊನೆಯ 'ಮನದ ಮಾತು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಆ್ಯಂಟಿಬಯೋಟಿಕ್ಸ್ ಎಂಬುದು ಔಷಧಿಯಲ್ಲ. ವೈದ್ಯರ ಸೂಚನೆಯಂತೆ ಮಾತ್ರ ಬಳಸಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಇತ್ತೀಚಿಗಿನ ವರದಿಯನ್ನು ಉಲ್ಲೇಖಿಸಿ ಮಾತನಾಡಿದ ಅವರು, ನ್ಯುಮೋನಿಯಾ, ಮೂತ್ರ ನಾಳದ ಸೋಂಕು ಸೇರಿದಂತೆ ಹಲವು ಕಾಯಿಲೆಗಳಿಗೆ ಆ್ಯಂಟಿಬಯೋ ಟಿಕ್ಸ್ ನಿಷ್ಪರಿಣಾಮಕಾರಿಯಾಗಿದೆ. ಹೀಗಾಗಿ, ಇವುಗಳ ಬಳಕೆಯನ್ನು ಜನರೂ ಕೂಡ ನಿಯಂತ್ರಿಸಬೇಕು. ಈ ವಿಚಾರವೂ ಎಲ್ಲರೂ ಕಳವಳ ಪಡುವ ವಿಚಾರವಾಗಿದೆ' ಎಂದು ಹೇಳಿದ್ದಾರೆ.

'ಒಂದು ಮಾತ್ರೆ ತೆಗೆದುಕೊಂಡ ತಕ್ಷಣ ಎಲ್ಲ ಸಮಸ್ಯೆಗಳು ಪರಿಹಾರವಾಗುತ್ತದೆ ಎಂದು ಜನರು ನಂಬಿದ್ದಾರೆ. ಆ್ಯಂಟಿಬಯೋಟಿಕ್‌ಗಳು ಕಾಯಿಲೆ ಹಾಗೂ ಸೋಂಕುಗಳನ್ನು ತಡೆ ಯಲು ಸಾಧ್ಯವಾಗಿಲ್ಲ ಎಂಬುದು ಸಂಶೋಧನೆಯಿಂದಲೂ ಸಾಬೀತಾಗಿದೆ. ನಿಮ್ಮ ಸ್ವಂತ ವಿವೇಚನೆಯಿಂದ ಔಷಧಗಳನ್ನು ಬಳಸಬೇಕು ಎಂದು ಜನರಿಗೆ ಸಲಹೆ ನೀಡುತ್ತೇನೆ' ಎಂದು ವಿವರಿಸಿದ್ದಾರೆ.

'ಆ್ಯಂಟಿ ಬಯೋಟಿಕ್ಸ್ ಬಳಕೆಯ ವಿಚಾರದಲ್ಲಿ ನಿಮಗೊಂದು ಸಲಹೆ ನೀಡುತ್ತೇನೆ. ಔಷಧ ಬಳಕೆಗೆ ಮಾರ್ಗದರ್ಶನದ ಅಗತ್ಯವಿದ್ದು, ಆ್ಯಂಟಿಬಯೋಟಿಕ್ಸ್ ಬಳಕೆಗೆ ವೈದ್ಯರ ಸಲಹೆ ಅಗತ್ಯಬೇಕು. ಇದನ್ನು ಅಭ್ಯಾಸ ಮಾಡಿಕೊಂಡರೆ, ನಿಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಲು ಸಹಾಯವಾಗಲಿದೆ' ಎಂದು ಮೋದಿ ತಿಳಿಸಿದ್ದಾರೆ.

ದುಬೈನಲ್ಲಿ ಕನ್ನಡಾಭಿಮಾನ: ಪ್ರಧಾನಿ ಮೆಚ್ಚುಗೆ

ದುಬೈನಲ್ಲಿ ಕನ್ನಡ ಭಾಷಾ ಬೆಳವಣಿಗೆಯ ಕುರಿತಂತೆ ಪ್ರಧಾನಿ ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ.

'ದುಬೈನಲ್ಲಿ ನೆಲಸಿರುವ ಕನ್ನಡದ ಕುಟುಂಬಗಳು ತಮಗೆ ಒಂದು ಪ್ರಶ್ನೆ ಕೇಳಿಕೊಂಡರು. ನಮ್ಮ ಮಕ್ಕಳು ತಂತ್ರಜ್ಞಾನ ಲೋಕದಲ್ಲಿ ಬಹಳಷ್ಟು ಮುಂದುವರಿದಿದ್ದಾರೆ. ಆದರೆ, ಭಾಷೆಯಿಂದ ದೂರ ಸರಿಯುತ್ತಿದ್ದಾರೆ ಎಂಬುದು ಅವರನ್ನು ಕಾಡತೊಡಗಿತ್ತು.

ಇದಕ್ಕೆ ಉತ್ತರವಾಗಿ 'ಕನ್ನಡ ಪಾಠಶಾಲೆಯೂ ಆರಂಭಗೊಂಡಿತು. ಇದರ ಅಡಿಯಲ್ಲಿ ಮಕ್ಕಳಿಗೆ ಕನ್ನಡವನ್ನು ಕಲಿಸಿ, ಬರೆಯುವ ಜೊತೆಗೆ ಮಾತನಾಡುವುದನ್ನು ಕಲಿಸಿಕೊಡಲಾಯಿತು. ಇದರಿಂದ, ಸಾವಿರಾರು ವಿದ್ಯಾರ್ಥಿಗಳು ಇದರಡಿಯಲ್ಲಿ ಸೇರಿಕೊಂಡಿದ್ದಾರೆ. ನಿಜವಾಗಿಯೂ ಕನ್ನಡ ನಾಡು, ನುಡಿಯೂ ಹೆಮ್ಮೆಯಾಗಿದೆ' ಎಂದು ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಫಿಜಿಯ ಉಲ್ಲೇಖ: ದೇಶದಿಂದ ಸಾವಿರಾರು ಕಿಲೋಮೀಟರ್ ದೂರದಲ್ಲಿರುವ ಫಿಜಿ ದೇಶದಲ್ಲಿ ಕೂಡ ಭಾರತೀಯ ಭಾಷೆಯನ್ನು ಪಸರಿಸಲು ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ. ನಿರಂತರ ಪ್ರಯತ್ನದಿಂದ ಹೊಸ ತಲೆಮಾರಿನ ಮಕ್ಕಳು ಕೂಡ ತಮಿಳು ಕಲಿತಿದ್ದಾರೆ. ಫಿಜಿ ದೇಶದ ರಕಿ–ರಕಿ ಪಟ್ಟಣದಲ್ಲಿ ಶಾಲೆಯಲ್ಲಿ ಮೊದಲ ಬಾರಿಗೆ ತಮಿಳು ದಿನ ಆಚರಿಸಲಾಯಿತು. ಇದರಿಂದ ಮಕ್ಕಳು ಸ್ವಯಂಪ್ರೇರಿತವಾಗಿ ತಮ್ಮ ಭಾಷೆಯಲ್ಲಿ ಭಾಷಣ ಮಾಡುವ ಜೊತೆಗೆ ವೇದಿಕೆಯ ಮೇಲೆ ಆತ್ಮವಿಶ್ವಾಸದಿಂದ ತಮ್ಮ ಸಂಸ್ಕೃತಿಯನ್ನು ಪ್ರದರ್ಶಿಸಿದರು' ಎಂದು ಉಲ್ಲೇಖಿಸಿದ್ದಾರೆ.

ಮಣಿಪುರ ಸಾಧನೆ ಉಲ್ಲೇಖ: ಮಣಿಪುರದ ಕುಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು 40 ವರ್ಷದ ಶ್ರೀರಾಮ್ ಮೊಯಿರಾಂಗ್‌ಥೆಮ್ ಶ್ರಮವನ್ನು ಪ್ರಶಂಸಿದ್ದಾರೆ.

'ಸೌರಶಕ್ತಿ ಬಳಸಿಕೊಂಡು ಅತ್ಯಂತ ಗ್ರಾಮೀಣ ಭಾಗದ ನೂರಾರು ಮನೆಗೂ ವಿದ್ಯುತ್ ಸಂಪರ್ಕ ಸಿಗುವಂತೆ ಮಾಡಿದ್ದಾರೆ. ಎಲ್ಲಿ ಮನಸ್ಸು ಇರುತ್ತದೆಯೋ, ಅಲ್ಲಿ ಮಾರ್ಗವಿರುತ್ತದೆ ಎಂಬುದನ್ನು ನಿರೂಪಿಸಿದ್ದಾರೆ' ಎಂದಿದ್ದಾರೆ.

ಬಂಕರ್‌ನಲ್ಲಿ ಅಡಗಲು ಸಲಹೆ ನೀಡಿದ್ದರು: ಜರ್ದಾರಿ

ಲಾಹೋರ್ (ಪಿಟಿಐ): ಭಾರತವು ಆಪರೇಷನ್ ಸಿಂಧೂರ ಕಾರ್ಯಾಚರಣೆ ಕೈಗೊಂಡ ಸಂದರ್ಭದಲ್ಲಿ ಬಂಕರ್‌ನಲ್ಲಿ ಅಡಗಿ ಕೂರಲು ಸಲಹೆ ಬಂದಿತ್ತು ಎಂದು ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಬಹಿರಂಗ ಪಡಿಸಿದ್ದಾರೆ.

'ಸರ್ ಯುದ್ಧ ಆರಂಭವಾಗಿದೆ. ಬಂಕರ್ ಒಳಗೆ ಹೋಗೋಣ' ಎಂದು ಸೇನಾ ಕಾರ್ಯದರ್ಶಿ ಹೇಳಿದರು. ಆಗ ನಾನು, 'ಸಾವು ಬರುವುದಾದರೆ ಇಲ್ಲಿಗೇ ಬರಲಿ. ನಾಯಕರು ಬಂಕರ್‌ಗಳಲ್ಲಿ ಸಾಯಬಾರದು, ಯುದ್ಧ ಭೂಮಿಯಲ್ಲಿ ಸಾಯಬೇಕು' ಎಂದು ಹೇಳಿದೆ' ಎಂದು ವಿವರಿಸಿದರು.

'ನೂರ್ ಖಾನ್' ಮೇಲೆ ಭಾರತ ದಾಳಿ': ಭಾರತವು ಮೇ 10ರಂದು ಪಾಕಿಸ್ತಾನದ ನೂರ್ ಖಾನ್ ವಾಯುನೆಲೆ ಮೇಲೆ ದಾಳಿ ನಡೆಸಿತ್ತು ಎಂದು ಪಾಕಿಸ್ತಾನದ ಉಪ ಪ್ರಧಾನಿ ಇಶಾಕ್ ಡಾರ್ ಅವರು ಇದೇ ಮೊದಲ ಬಾರಿಗೆ ಒಪ್ಪಿಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ, ಪಾಕಿಸ್ತಾನ ಮತ್ತು ಭಾರತದ ಮಧ್ಯೆ ಮಧ್ಯಸ್ಥಿಕೆಗೆ ನಾವು ಯಾರಿಗೂ ಮನವಿ ಮಾಡಿರಲಿಲ್ಲ. ಆದರೆ, ಅಮೆರಿಕದ ರಕ್ಷಣಾ ಕಾರ್ಯದರ್ಶಿ ಮಾರ್ಕ್ ರುಬಿಯೊ ಮತ್ತು ಸೌದಿ ಅರೇಬಿಯಾದ ವಿದೇಶಾಂಗ ಸಚಿವ ರಾಜಕುಮಾರ ಫೈಸಲ್ ಬಿನ್ ಫರ್ಹಾನ್ ಅವರು ಭಾರತದೊಂದಿಗೆ ಮಾತುಕತೆ ನಡೆಸುವ ಇಂಗಿತ ವ್ಯಕ್ತಪಡಿಸಿದ್ದರು ಎಂದು ಡಾರ್ ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ವ್ಯಾಪಾರ
Business Offers
Distributors

ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಕೆಲಸ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ. ಸ್ಥಳ: ಶೇಷಾದ್ರಿಪುರಂ ಬೆಂಗಳೂರು ದೂರವಾಣಿ ಸಂಖ್ಯೆ: 9019626612.

ಭವಿಷ್ಯ
Astrology

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನಗಳಲ್ಲಿ ಪರಿಹಾರ.9886755306

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188.

ಪ್ರವಾಸ
Travel

26.12.25 5ದಿನಗಳು ದೆಹಲಿ,ಅಗ್ರಾ,ಜೈಪುರ್, ಫತೇಪುರ್ ಶಿಕ್ರಿ,ಇತ್ಯಾದಿ 38000 16.01.26 ಮತ್ತು`02.02.26 ಮಾಘಮೇಳ ಪ್ರಯುಕ್ತ 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಕಾಶಿ,ಗಯಾ,ಅಯೋಧ್ಯ`33000 20.02.26 11ದಿನಗಳು ನೇಪಾಳ ಮುಕ್ತಿನಾಥ ಇತ್ಯಾದಿ.48000 ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

21.01.2026 ಶಿರಡಿ ಪಂಡರಾಪುರ 31.01.26 ಗುಜರಾತ್ ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ 06.02.26 ಪುರಿ ಜಗನ್ನಾಥ ಕೊನಾರ್ಕ್ 17.02.26 ಶ್ರೀಶೈಲ ಮಂತ್ರಾಲಯ 24.02.26 ಕಾಶಿ ಅಯೋಧ್ಯೆ ಮಲ್ಲಿಕಾರ್ಜುನ ಪ್ಯಾಕೇಜ್ ಮೊ: 8496044942/ 8277409101

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಸ್ಥಳೀಯ ಸಹಚರರ ಸಹಾಯದಿಂದ ಮೇಘಾಲಯ ಪ್ರವೇಶಿಸಿದ ಶಂಕಿತರು: ಬಾಂಗ್ಲಾ

'ಹಾದಿ ಹತ್ಯೆ ಶಂಕಿತರು ಭಾರತಕ್ಕೆ ಪರಾರಿ'

ಶರೀಫ್ ಉಸ್ಮಾನ್ ಹಾದಿ

ಢಾಕಾ (ಪಿಟಿಐ): 'ಇನ್‌ಕ್ವಿಲಾಬ್ ಮಂಚ್' ಸಂಘಟನೆಯ ನಾಯಕ ಶರೀಫ್ ಉಸ್ಮಾನ್ ಹಾದಿ ಹತ್ಯೆ ಪ್ರಕರಣದ ಇಬ್ಬರು ಪ್ರಮುಖ ಶಂಕಿತರು ಬಾಂಗ್ಲಾದೇಶದಿಂದ ಪರಾರಿಯಾಗಿದ್ದಾರೆ. ಈ ಇಬ್ಬರು ಪ್ರಸಕ್ತ ಭಾರತದಲ್ಲಿ ಇರುವ ಶಂಕೆ ಇದೆ ಎಂದು ಢಾಕಾ ಮೆಟ್ರೊಪಾಲಿಟನ್ ಪೊಲೀಸ್ (ಡಿಎಂಪಿ) ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ಡಿಸೆಂಬರ್ 12ರಂದು ಢಾಕಾದಲ್ಲಿ ಚುನಾ ವಣಾ ಪ್ರಚಾರ ನಡೆಸುತ್ತಿದ್ದ ವೇಳೆ ಹಾದಿ ಅವರ ಮೇಲೆ ಗುಂಡಿನ ದಾಳಿ ನಡೆಸ ಲಾಗಿತ್ತು. ತೀವ್ರ ಗಾಯಗೊಂಡಿದ್ದ ಅವ ರನ್ನು ಹೆಚ್ಚಿನ ಚಿಕಿತ್ಸೆಗೆ ಸಿಂಗಪುರಕ್ಕೆ ಕಳುಹಿಸಿದ್ದರೂ, ಚಿಕಿತ್ಸೆಗೆ ಸ್ಪಂದಿಸದೆ ಡಿಸೆಂಬರ್ 18ರಂದು ಹಾದಿ ಮೃತಪಟ್ಟಿದ್ದರು.

ಇದೀಗ, ಪ್ರಕರಣದ ಪ್ರಮುಖ ಶಂಕಿತರಾದ ಫೈಸಲ್ ಕರೀಂ ಮಸೂದ್ ಹಾಗೂ ಆಲಂಗೀರ್ ಶೇಖ್ ಪರಾರಿಯಾಗಿರುವ ಬಗ್ಗೆ ಡಿಎಂಪಿ ಎಸ್. ಎನ್.ಮೊಹಮ್ಮದ್ ನಜ್ರುಲ್ ಇಸ್ಲಾಮ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

'ಫೈಸಲ್ ಮತ್ತು ಆಲಂಗೀರ್ ಸ್ಥಳೀಯ ಸಹಚರರ ಸಹಾಯ ಪಡೆದು ಹಲೂಅಘಾಟ್ ಗಡಿ ಮೂಲಕ ಭಾರತದ ಮೇಘಾಲಯ ರಾಜ್ಯ ಪ್ರವೇಶಿಸಿದ್ದಾರೆ. ಅಲ್ಲಿ, ಪೂರ್ತಿ ಎಂಬವರು ಅವರನ್ನು ಕರೆದೊಯ್ದಿದ್ದಾರೆ. ನಂತರ ಸಾಮಿ ಎಂಬ ಹೆಸರಿನ ಟ್ಯಾಕ್ಸಿ ಚಾಲಕ ಆರೋಪಿಗಳನ್ನು ಮೇಘಾಲಯದ ತುರಾ ನಗರಕ್ಕೆ ತಲುಪಿಸಿದ್ದಾನೆ ಎಂದು ತಿಳಿದುಬಂದಿದೆ' ಎಂದಿದ್ದಾರೆ.

ಅಲ್ಲದೇ, ಶಂಕಿತರಿಗೆ ಸಹಾಯ ಮಾಡಿದ ಇಬ್ಬರೂ ವ್ಯಕ್ತಿಗಳನ್ನು ಭಾರತದ ಆಡಳಿತಾಧಿಕಾರಿಗಳು ಬಂಧಿಸಿದ್ದಾರೆ ಎಂದೂ ಮಾಹಿತಿ ದೊರೆತಿದೆ. ಶಂಕಿತರ ಬಂಧನ ಮತ್ತು ಹಸ್ತಾಂತರಕ್ಕೆ ಸಂಬಂಧಿಸಿದಂತೆ ಭಾರತದ ಅಧಿಕಾರಿಗಳ ಜತೆಗೆ ಬಾಂಗ್ಲಾ ಸರ್ಕಾರ ಮಾತುಕತೆ ನಡೆಸುತ್ತಿದೆ ಎಂದೂ ಮೊಹಮ್ಮದ್ ಅವರು ತಿಳಿಸಿದ್ದಾರೆ.

ಬಾಂಗ್ಲಾ ಹೇಳಿಕೆ ತಿರಸ್ಕರಿಸಿದ ಭಾರತ

ಶಿಲ್ಲಾಂಗ್ (ಪಿಟಿಐ): ಉಸ್ಮಾನ್ ಹಾದಿ ಹತ್ಯೆಯ ಶಂಕಿತರು ಮೇಘಾಲಯ ಪ್ರವೇಶಿಸಿದ್ದಾರೆ ಎಂಬ ಬಾಂಗ್ಲಾದೇಶದ ಹೇಳಿಕೆಯನ್ನು ಭಾರತದ ಭದ್ರತಾ ಸಂಸ್ಥೆಗಳು ಭಾನುವಾರ ತಿರಸ್ಕರಿಸಿವೆ. ಜತೆಗೆ ಈ ಹೇಳಿಕೆಯು ಹಾದಿತಪ್ಪಿಸುವಂತದ್ದು ಎಂದೂ ದೂರಿವೆ.

ಬಿಎಸ್‌ಎಫ್ ಮೇಘಾಲಯ ಘಟಕದ ಮುಖ್ಯಸ್ಥರಾದ ಉಪಾಧ್ಯಾಯ ಅವರು ಈ ಬಗ್ಗೆ ಮಾತನಾಡಿ, 'ಹಲೂಅಘಾಟ್ ಮೂಲಕ ಯಾವುದೇ ವ್ಯಕ್ತಿಯು ಅಂತರರಾಷ್ಟ್ರೀಯ ಗಡಿ ದಾಟಿ ಮೇಘಾಲಯ ಪ್ರವೇಶಿಸಿರುವುದಕ್ಕೆ ಸಾಕ್ಷಿಗಳಿಲ್ಲ. ಅಂತಹ ಯಾವುದೇ ಘಟನೆಯೂ ಪತ್ತೆಯಾಗಿಲ್ಲ, ಬಿಎಸ್‌ಎಫ್‌ಗೆ ಈ ಬಗ್ಗೆ ಮಾಹಿತಿಯೂ ಸಿಕ್ಕಿಲ್ಲ' ಎಂದಿದ್ದಾರೆ.

ಮೇಘಾಲಯದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರೂ ಪ್ರತಿಕ್ರಿಯಿಸಿ, ಗರೋ ಹಿಲ್ಸ್ ಪ್ರದೇಶದಲ್ಲಿ ಶಂಕಿತರ ಉಪಸ್ಥಿತಿಯ ಬಗ್ಗೆ ಯಾವುದೇ ಗುಪ್ತಚರ ಮಾಹಿತಿಯೂ ಸಿಕ್ಕಿಲ್ಲ. ಸ್ಥಳೀಯ ಪೊಲೀಸರು ಕೂಡ ಯಾವುದೇ ಅನುಮಾನಸ್ಪದ ವ್ಯಕ್ತಿಗಳನ್ನು ಗುರುತಿಸಿಲ್ಲ ಎಂದಿದ್ದಾರೆ.

ಗಲಭೆಗೆ ಸರ್ಕಾರ ಅವಕಾಶ: ಆರೋಪ

ಶರೀಫ್ ಉಸ್ಮಾನ್ ಹಾದಿ ಹತ್ಯೆ ನಂತರ ಬಾಂಗ್ಲಾದೇಶದಲ್ಲಿ ಗಲಭೆ ನಡೆಯಲು ಮಧ್ಯಂತರ ಸರ್ಕಾರದ ಒಂದು ಗುಂಪು ಅವಕಾಶ ನೀಡಿದೆ ಎಂದು ಬಾಂಗ್ಲಾದ ಪತ್ರಿಕೆಗಳ ಸಂಪಾದಕರ ಮಂಡಳಿ ಆರೋಪಿಸಿದೆ.

ಹಳಿ ತಪ್ಪಿದ ಗೂಡ್ಸ್

ಪಿಟಿಐ ಚಿತ್ರ

ಬಿಹಾರದ ಜಮುಯಿ ಜಿಲ್ಲೆಯಲ್ಲಿ ಸಿಮೆಂಟ್ ತುಂಬಿದ್ದ ಗೂಡ್ಸ್ ರೈಲು ಭಾನುವಾರ ಹಳಿ ತಪ್ಪಿದೆ

2.89 ಕೋಟಿ ಮತದಾರರಿಗೆ ಕೊಕ್

ಲಖನೌ (ಪಿಟಿಐ): ಉತ್ತರಪ್ರದೇಶದಲ್ಲಿ ಡಿಸೆಂಬರ್ 31ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ. ಈ ಪಟ್ಟಿಯಲ್ಲಿ 12.55 ಕೋಟಿ ಮತದಾರರ ಹೆಸರು ಪ್ರಕಟಗೊಳ್ಳಲಿದೆ ಎಂದು ಹೇಳಲಾಗಿದೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ (ಎಸ್‌ಐಆರ್) ಪೂರ್ವ ಮತದಾರರ ಪಟ್ಟಿಯಿಂದ ಸರಿಸುಮಾರು 2.89 ಕೋಟಿ ಹೆಸರು ತೆಗೆದು ಹಾಕಲಾಗಿದೆ.

'ಪಟ್ಟಿಯಿಂದ ತೆಗೆದು ಹಾಕಿದವರ ಹೆಸರುಗಳನ್ನು ಸೂಕ್ತ ದಾಖಲೆಗಳೊಂದಿಗೆ ಜನವರಿ 1ರಿಂದ ಮತ್ತೆ ಸೇರ್ಪಡೆಗೊಳಿಸಲು ಅವಕಾಶವಿದೆ' ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತರು ಭಾನುವಾರ ತಿಳಿಸಿದ್ದಾರೆ.

'ಲಖನೌ, ಗಾಜಿಯಾಬಾದ್, ಪ್ರಯಾಗ್‌ರಾಜ್ ಹಾಗೂ ಕಾನ್ಪುರದಲ್ಲಿ ಹೆಚ್ಚಿನ ಹೆಸರುಗಳನ್ನು ತೆಗೆದು ಹಾಕಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಪೃಥ್ವಿರಾಜ್ ಪಾಟೀಲ್

ತೆರೆಗೆ ಬರಲು ಸಿದ್ಧವಾದ ವಿಕಲ್ಪ

ಬಹುತೇಕ ಹೊಸ ಪ್ರತಿಭೆಗಳೇ ಸೇರಿ ನಿರ್ಮಿಸಿರುವ 'ವಿಕಲ್ಪ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಸೈಕಾಲಜಿಕಲ್, ಥ್ರಿಲ್ಲರ್ ಕಥಾಹಂದರದ ಚಿತ್ರಕ್ಕೆ ಪೃಥ್ವಿರಾಜ್ ಪಾಟೀಲ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ವಿಕಲ್ಪ' ಎಂದರೆ ವಾಸ್ತವ ಮತ್ತು ಕಲ್ಪನೆಗಳ ನಡುವಿನ ಒಂದು ಸ್ಥಿತಿ ಎಂದರ್ಥ. ಇದೊಂದು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಕಥೆ ಎಂದೆನಿಸಿದರೂ, ಸಂಪೂರ್ಣ ಥ್ರಿಲ್ಲರ್ ಚಿತ್ರ. ಜತೆಗೆ ನವಿರಾದ ಹಾಸ್ಯ ಮತ್ತು ಮನೋರಂಜನೆಗೆ ಹೆಚ್ಚಿನ ಒತ್ತು ಕೊಟ್ಟು ಇಡೀ ಚಿತ್ರದ ಕಥೆಯನ್ನು ಹೆಣೆಯಲಾಗಿದೆ. ಈ ಚಿತ್ರಕ್ಕೆ ಚಿತ್ರದ ಕಥೆಯೆ ನಾಯಕ. ಇಲ್ಲಿ ಪ್ರತಿ ಪಾತ್ರಗಳೂ ಮಾತನಾಡುತ್ತವೆ. ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಶೀಘ್ರದಲ್ಲಿ ತೆರೆಗೆ ಬರಲಿದೆ' ಎನ್ನುತ್ತಾರೆ ನಿರ್ದೇಶಕ.

ಬೆಂಗಳೂರು, ತೀರ್ಥಹಳ್ಳಿ, ಸಾಗರ, ಶಿರಸಿ, ಕುಂದಾಪುರ, ಯಲ್ಲಾಪುರ ಸೇರಿದಂತೆ ಸಿಂಗಪುರ, ನೆದರ್ಲೆಂಡ್‌ಗಳಲ್ಲಿಯೂ ಚಿತ್ರೀಕರಣ ಮಾಡಲಾಗಿದೆ. ಪೃಥ್ವಿರಾಜ್ ಪಾಟೀಲ್, ನಾಗಶ್ರೀ ಹೆಬ್ಬಾರ್, ಸಂಧ್ಯಾ ವಿನಾಯಕ್, ಗಣಪತಿ ವಡ್ಡಿನಗದ್ದೆ, ಸ್ವರೂಪ್ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಹರಿಣಿ ಶ್ರೀಕಾಂತ್ ವಿಶೇಷವಾದ ಪಾತ್ರವೊಂದಕ್ಕೆ ಬಣ್ಣ ಹಚ್ಚಿದ್ದಾರೆ. ರಂಗಭೂಮಿ ಕಲಾವಿದರಾದ ಗಣಪತಿ ಹಿತ್ತಲಕೈ, ಪ್ರಜ್ಞಾ ಗಣಪತಿ, ಯಕ್ಷಗಾನ ಕಲಾವಿದ ಗೋಡೆ ನಾರಾಯಣ ಹೆಗಡೆ ಕೂಡ ಚಿತ್ರದಲ್ಲಿ ನಟಿಸಿದ್ದಾರೆ.

ಸಂವತ್ಸರ ಸಂಗೀತ ಸಂಯೋಜಿಸಿದ್ದು, ಪೃಥ್ವಿರಾಜ್ ಪಾಟಿಲ್ ಮತ್ತು ಕೌಂಡಿನ್ಯ ಕುಡ್ಲುತೋಟ ಸಾಹಿತ್ಯವಿದೆ. ಅಭಿರಾಮ್ ಗೌಡ ಛಾಯಾಚಿತ್ರಗ್ರಹಣ, ಸುರೇಶ್ ಆರುಮುಗಮ್ ಸಂಕಲನವಿದೆ.

ಹೊರಬಂತು 'ಸೂರ್ಯ'ನ ಟ್ರೇಲರ್

ಉತ್ತರ ಕರ್ನಾಟಕದ ಕಥೆಯನ್ನು ಹೊಂದಿರುವ 'ಸೂರ್ಯ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಾಗರ್ ದಾಸ್ ನಿರ್ದೇಶನದ ಚಿತ್ರಕ್ಕೆ ಬಸವರಾಜ ಬೆಣ್ಣೆ ಹಾಗೂ ರವಿ ಬೆಣ್ಣೆ ಬಂಡವಾಳ ಹೂಡಿದ್ದಾರೆ.

'ಸ್ಲಂನಲ್ಲಿ ಬೆಳೆದ ಯುವಕನೊಬ್ಬ ತನ್ನ ಪ್ರೀತಿಯನ್ನು ಪಡೆದುಕೊಳ್ಳಲು ಏನೆಲ್ಲ ಹೋರಾಟ, ಸಾಹಸ ಮಾಡುತ್ತಾನೆ, ಆತನಿಗೆ ಯಾರೆಲ್ಲ ಸಹಾಯ ಮಾಡುತ್ತಾರೆ ಎಂಬುದು ಚಿತ್ರದ ಒಟ್ಟಾರೆ ಕಥೆ. ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಜನವರಿ 15ರಂದು ಚಿತ್ರ ಬಿಡುಗಡೆಗೊಳ್ಳಲಿದೆ. ಉತ್ತರ ಕರ್ನಾಟಕ, ಬೆಂಗಳೂರು ಸುತ್ತಮುತ್ತ ಹಾಗೂ ಪುಣೆಯಲ್ಲಿ ಚಿತ್ರದ ಚಿತ್ರೀಕರಣ ನಡೆಸಿದ್ದೇವೆ' ಎಂದರು ನಿರ್ದೇಶಕ.

ಪ್ರಶಾಂತ್‌ಗೆ ಹರ್ಷಿತಾ ಜೋಡಿಯಾಗಿದ್ದಾರೆ. ಪ್ರಮೋದ್ ಶೆಟ್ಟಿ, ಶ್ರುತಿ, ರವಿಶಂಕರ್, ಟಿ.ಎಸ್. ನಾಗಾಭರಣ, ಬಲ ರಾಜವಾಡಿ, ಭಜರಂಗಿ ಪ್ರಸನ್ನ ಮುಂತಾದವರು ಚಿತ್ರದಲ್ಲಿದ್ದಾರೆ.

'ಮೊದಲ ಬಾರಿಗೆ ಉತ್ತರ ಕರ್ನಾಟಕ ಶೈಲಿಯ ಪಾತ್ರ ಮಾಡಿದ್ದೇನೆ. ಸ್ಲಂನಲ್ಲಿ ಬೆಳೆದ ಹುಡುಗನಿಗೆ ಬೆನ್ನೆಲುಬಾಗಿ ನಿಲ್ಲುವ ಬಾಂಡ್ ಬಸು ಪಾತ್ರ ನನ್ನದು' ಎಂದರು ಪ್ರಮೋದ್ ಶೆಟ್ಟಿ.

ಐದು ಹಾಡುಗಳಿಗೆ ಶ್ರೀ ಶಾಸ್ತ್ರ ಅವರು ಸಂಗೀತ ಸಂಯೋಜನೆ ಮಾಡಿದ್ದು, ಬಹದ್ದೂರ್ ಚೇತನ್, ಯೋಗರಾಜ ಭಟ್ ಸಾಹಿತ್ಯವಿದೆ. ಮನುರಾಜ್ ಛಾಯಾಚಿತ್ರಗ್ರಹಣವಿದೆ.

ಹರ್ಷಿತಾ



ಪೃಥ್ವಿರಾಜ್–ಕರೀನಾ ಸಿನಿಮಾ ಶೂಟಿಂಗ್ ಮುಕ್ತಾಯ

ಬಹುಭಾಷಾ ನಟ ಪೃಥ್ವಿರಾಜ್ ಸುಕುಮಾರನ್ ಹಾಗೂ ಬಾಲಿವುಡ್ ನಟಿ ಕರೀನಾ ಕಪೂರ್ ಖಾನ್ ನಟನೆಯ 'ದಾಯ್ರಾ' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ.

ಈ ಕುರಿತು ಪೃಥ್ವಿರಾಜ್ ಇನ್‌ಸ್ಟಾಗ್ರಾಂನಲ್ಲಿ ಮಾಹಿತಿ ನೀಡಿದ್ದಾರೆ. 'ತಲ್ವಾರ್', 'ಸ್ಯಾಮ್ ಬಹದ್ದೂರ್', 'ರಾಝಿ' ಖ್ಯಾತಿಯ ಮೇಘನಾ ಗುಲ್ಜಾರ್ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ಈ ಸಿನಿಮಾದ ಶೂಟಿಂಗ್ ಆರಂಭವಾಗಿತ್ತು. 2026ರಲ್ಲಿ ಚಿತ್ರವು ತೆರೆಗೆ ಬರಲಿದೆ.

ಕ್ರೈಂ ಡ್ರಾಮಾ ಥ್ರಿಲ್ಲರ್ ಜಾನರ್‌ನಲ್ಲಿ ಈ ಸಿನಿಮಾವಿದೆ. ಸಿಮಾ ಅಗರ್‌ವಾಲ್ ಹಾಗೂ ಯಶ್ ಕೇಸ್ವಾನಿ ಬರವಣಿಗೆಯಲ್ಲಿ ಮೇಘನಾಗೆ ಸಾಥ್ ನೀಡಿದ್ದಾರೆ.

ಜಸ್ಟ್ ಅಸ್ ಎಂದ ಪಿ.ಸಿ.ಶೇಖರ್

ಕನ್ನಡ ಚಿತ್ರರಂಗದಲ್ಲಿ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನಿರ್ದೇಶಿಸಿರುವ ಪಿ.ಸಿ.ಶೇಖರ್ ಈಗ ವೆಬ್ ಸಿರೀಸ್ ಲೋಕಕ್ಕೆ ಕಾಲಿಟ್ಟಿದ್ದಾರೆ. ಅವರ ನಿರ್ದೇಶನ ಹಾಗೂ ನಿರ್ಮಾಣದ 'Just us' ಎಂಬ ಎಂಟು ಕಂತುಗಳ ಈ ವೆಬ್ ಸಿರೀಸ್ ಜ.1ರಂದು ಯೂಟ್ಯೂಬ್‌ನಲ್ಲಿ ಬಿಡುಗಡೆಗೊಳ್ಳಲಿದೆ.

'ಎಂಜಿನಿಯರ್ ಆಗಬೇಕಾದರೆ ಬಿ.ಇ ಮಾಡಬೇಕು. ವೈದ್ಯರಾಗಬೇಕೆಂದರೆ ಎಂ.ಬಿ.ಬಿ.ಎಸ್ ಓದಬೇಕು. ಕಾರು ಚಾಲನೆ ಮಾಡಬೇಕಾದರೂ ತರಬೇತಿ ಬೇಕು. ಆದರೆ ಮದುವೆ ವಿಷಯಕ್ಕೆ ಬಂದಾಗ, ಹುಡುಗ - ಹುಡುಗಿಯನ್ನು ಮನೆಯವರು ಮಾತನಾಡಿ ಎಂದು ಕಳುಹಿಸಿದಾಗ ಏನು ಮಾತನಾಡಬೇಕೆಂದು ಹೆಚ್ಚಿನವರಿಗೆ ತಿಳಿದಿರುವುದಿಲ್ಲ. ಹಾಗಾಗಿ ನಾನು ಸೈಕಿಯಾಟ್ರಿಸ್ಟ್ ಹಾಗೂ ಮ್ಯಾರೇಜ್ ಕೌನ್ಸಿಲರ್‌ಗಳಿಂದ ವಿಷಯ ಸಂಗ್ರಹಿಸಿ ಈ ವೆಬ್ ಸಿರೀಸ್ ಮಾಡಿರುವೆ. ಮದುವೆ ಕುರಿತಾದ ಹಾಸ್ಯಮಯ ಕಥೆಯಿದೆ. ಗುಣಮಟ್ಟದಲ್ಲಿ ರಾಜಿಯಾಗಿಲ್ಲ. ಸಿನಿಮಾ ರೀತಿಯಲ್ಲಿಯೇ ಮಾಡಿದ್ದೇವೆ. ನನ್ನದೇ ಯೂಟ್ಯೂಬ್ ಚಾನೆಲ್‌ನಲ್ಲಿ ಈ ಸರಣಿ ಬಿಡುಗಡೆಯಾಗಲಿದೆ' ಎಂದರು ಪಿ.ಸಿ.ಶೇಖರ್.

ವಿವೇಕ್, ಮೇಘಾ ಜಾದವ್ ನಟಿಸಿದ್ದಾರೆ. ಮುರಳಿ ಕ್ರಿಶ್ ಛಾಯಾಚಿತ್ರಗ್ರಹಣ, ಎಸ್. ಪ್ರದೀಪ್ ವರ್ಮ ಸಂಗೀತ ನೀಡಿದ್ದಾರೆ.

ವಿವೇಕ್, ಮೇಘಾ ಜಾದವ್

ಸೆಂಗರ್ ಶಿಕ್ಷೆ ಅಮಾನತು: ವಿಚಾರಣೆ ಇಂದು

ನವದೆಹಲಿ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ ಆರೋಪಿ, ಬಿಜೆಪಿ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್‌ಗೆ ವಿಧಿಸಿರುವ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿರುವುದನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ಮುಖ್ಯಾಂಶಗಳು
- ಉನ್ನಾವೊ ಅತ್ಯಾಚಾರ ಪ್ರಕರಣ
- ಸಿಬಿಐ ಸಲ್ಲಿಸಿದ್ದ ಮೇಲ್ಮನವಿ

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜೆ.ಕೆ ಮಾಹೇಶ್ವರಿ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರನ್ನೊಳಗೊಂಡ ರಜಾ ಕಾಲದ ಪೀಠವು ಅರ್ಜಿಯ ವಿಚಾರಣೆ ನಡೆಸುವ ಸಾಧ್ಯತೆಯಿದೆ.

2019ರಲ್ಲಿ ವಿಚಾರಣಾ ನ್ಯಾಯಾಲಯ ಸೆಂಗರ್‌ಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ದೆಹಲಿ ಹೈಕೋರ್ಟ್ ಡಿ. 23ರಂದು ಅಮಾನತುಗೊಳಿಸಿ, ಜಾಮೀನು ನೀಡಿತ್ತು.

ದೆಹಲಿ ಹೈಕೋರ್ಟ್ ತೀರ್ಪಿಗೆ ತಡೆ ನೀಡುವಂತೆ ಕೋರಿ ವಕೀಲರಾದ ಅಂಜಲೆ ಪಟೇಲ್ ಮತ್ತು ಪೂಜಾ ಶಿಲ್ಪಕರ್ ಅವರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯೂ ಸೋಮವಾರ ನಡೆಯಲಿದೆ. ಸೆಂಗರ್ 2017ರಲ್ಲಿ ಬಾಲಕಿಯೊಬ್ಬಳನ್ನು ಅಪಹರಿಸಿ, ಅತ್ಯಾಚಾರ ಎಸಗಿದ್ದ.

ಪ್ರತಿಭಟನೆ: ಸೆಂಗರ್ ಶಿಕ್ಷೆ ಅಮಾನತನ್ನು ಖಂಡಿಸಿ ಪ್ರಕರಣದ ಸಂತ್ರಸ್ತೆ, ಅವರ ತಾಯಿ ಮತ್ತು ಸಾಮಾಜಿಕ ಹೋರಾಟಗಾರರು ದೆಹಲಿಯ ಜಂತರ್ ಮಂತರ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಅದಾನಿ ಯಶಸ್ಸು ಎಲ್ಲರಿಗೂ ಸ್ಫೂರ್ತಿ: ಶರದ್ ಪವಾರ್

ಪ್ರಜಾವಾಣಿ ವಾರ್ತೆ

ಮುಂಬೈ: 'ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರ ಯಶಸ್ಸು ಎಲ್ಲರಿಗೂ ಸ್ಫೂರ್ತಿದಾಯಕ' ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಬಣ್ಣಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಅದಾನಿ ಅವರು, 'ಹಿರಿಯ ನಾಯಕ ಪವಾರ್ ಎಲ್ಲರಿಗೂ ಮಾರ್ಗದರ್ಶಕ' ಎಂದು ಹೊಗಳಿದ್ದಾರೆ.

ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಅದಾನಿ ವಿರುದ್ಧ ಆಕ್ರಮಣಕಾರಿ ದಾಳಿ ಮುಂದುವರಿಸುತ್ತಿರುವಾಗ, ಈ ಆತ್ಮೀಯ ಮಾತುಕತೆಯು ರಾಜಕೀಯ ಮಹತ್ವವನ್ನು ಪಡೆದುಕೊಂಡಿದೆ.

ಕಾಂಗ್ರೆಸ್ ಹಾಗೂ ಎನ್‌ಸಿಪಿ (ಎಸ್‌ಪಿ) ನಡುವಿನ ಸಂಭಾವ್ಯ ಹೊಂದಾಣಿಕೆ ಬಗ್ಗೆ ಅನೇಕ ಊಹಾಪೋಹಗಳಿದ್ದು, ಈಗಿನ ಬೆಳವಣಿಗೆಯು ಮಹಾರಾಷ್ಟ್ರದಲ್ಲಿ ಸಾಕಷ್ಟು ಸಂಚಲನ ಮೂಡಿಸಿದೆ.

ಪವಾರ್ ಸ್ಥಾಪಿಸಿದ್ದ ವಿದ್ಯಾ ಪ್ರತಿಷ್ಠಾನದ ಭಾಗವಾದ 'ಶರದ್ ಪವಾರ್ ಸೆಂಟರ್ ಫಾರ್ ಎಕ್ಸಲೆನ್ಸ್ ಇನ್ ಆರ್ಟಿಫೀಶಿಯಲ್ ಇಂಟೆಲಿಜೆನ್ಸ್'ನ ಹೊಸ ಸಂಕೀರ್ಣವನ್ನು ಉದ್ಘಾಟಿಸಲು ಅದಾನಿ ಪುಣೆ ಜಿಲ್ಲೆಯ ಬಾರಾಮತಿಗೆ ಭಾನುವಾರ ಭೇಟಿ ನೀಡಿದ್ದರು.

> **ಅದಾನಿ ಮತ್ತು ಪವಾರ್ ಕುಟುಂಬಗಳ ನಡುವೆ 30 ವರ್ಷಗಳಿಂದ ಉತ್ತಮ ಸಂಬಂಧವಿದೆ. ಅವರು ನನಗೆ ಅಣ್ಣನಂತೆ, ಅವರ ಪತ್ನಿ ಪ್ರೀತಿ ಅದಾನಿ ಅತ್ತಿಗೆ ಇದ್ದಂತೆ**
> **ಸುಪ್ರಿಯಾ ಸುಳೆ,** ಬಾರಾಮತಿ ಸಂಸದೆ

'ಗುಜರಾತ್‌ನ ಬರಪೀಡಿತ ಬನಸ್ಕಂತ ಜಿಲ್ಲೆಯವರಾದ ಅದಾನಿ ಅವರು ಇಂದು 23 ರಾಜ್ಯಗಳಲ್ಲಿ ವಿಶಾಲವಾದ ವ್ಯಾಪಾರ ಸಾಮ್ರಾಜ್ಯವನ್ನು ಕಟ್ಟಿದ್ದಾರೆ. ಅವರ ಈ ಪ್ರಯಾಣವು ದೊಡ್ಡ ಕನಸು ಕಾಣುವ ಯುವಕರಿಗೆ ಸ್ಫೂರ್ತಿಯಾಗಿದೆ' ಎಂದು ಪವಾರ್ ಬಣ್ಣಿಸಿದ್ದಾರೆ.

ಗೌತಮ್ ಅದಾನಿ ಮಾತನಾಡಿ, 'ಪವಾರ್ ಅವರೊಂದಿಗಿನ ಮೂರು ದಶಕಗಳ ಒಡನಾಟವು ನನ್ನ ಚಿಂತನೆಯನ್ನು ರೂಪಿಸಿದೆ. ಅವರಿಂದ ನಾನು ಸಾಕಷ್ಟು ಕಲಿತಿದ್ದೇನೆ. ಅವರು ನಿಜವಾದ ಅರ್ಥದಲ್ಲಿ ಮಾರ್ಗದರ್ಶಕರಾಗಿದ್ದಾರೆ' ಎಂದು ಹೊಗಳಿದ್ದಾರೆ.

ಪುಣೆ ಜಿಲ್ಲೆಯ ಬಾರಾಮತಿಯಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶರದ್ ಪವಾರ್ ಹಾಗೂ ಗೌತಮ್ ಅದಾನಿ ಚರ್ಚೆ ನಡೆಸಿದರು —ಪಿಟಿಐ ಚಿತ್ರ

ಓಂಕಾರ್, ತೇಜಸ್ವಿನಿ ಚಾಂಪಿಯನ್ಸ್

ಮೈಸೂರಿನಲ್ಲಿ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್: 8 ವಿಭಾಗಗಳಲ್ಲಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರು ನಗರದ ಓಂಕಾರ್ ರಾಜೇಂದ್ರ ಪನ್ವಾಲ್ಕರ್ (29 ನಿಮಿಷ 15 ಸೆಕೆಂಡ್) ಹಾಗೂ ಎನ್.ಐ. ತೇಜಸ್ವಿನಿ (ಕಾಲ: 34ನಿ. 44ಸೆ) ಅವರು ಇಲ್ಲಿ ಭಾನುವಾರ ನಡೆದ 60ನೇ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 10 ಕಿ.ಮೀ. ಓಟದಲ್ಲಿ ಚಾಂಪಿಯನ್ ಆದರು.

ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಅಕಾಡೆಮಿ ಟ್ರಸ್ಟ್ ಆಯೋಜಿಸಿದ್ದ ಕೂಟದ ಎಂಟು ವಿಭಾಗಗಳಲ್ಲಿ ಮೊದಲೆರಡು ಸ್ಥಾನ ಗಳಿಸಿದವರನ್ನು ರಾಷ್ಟ್ರಮಟ್ಟಕ್ಕೆ ಆಯ್ಕೆ ಮಾಡಲಾಯಿತು. ಅವರಿಗೆ ಕ್ರಮವಾಗಿ ₹3,000 ಹಾಗೂ ₹2,000 ಬಹುಮಾನ ಮತ್ತು ಟ್ರೋಫಿ ನೀಡಲಾಯಿತು. ವಿವಿಧ ಜಿಲ್ಲೆಗಳ ನೂರಾರು ಸ್ಪರ್ಧಿಗಳು ಭಾಗವಹಿಸಿದ್ದರು.

ಫಲಿತಾಂಶ: ಪುರುಷರು: 10 ಕಿ.ಮೀ. ಓಟ: ಓಂಕಾರ್ ರಾಜೇಂದ್ರ ಪನ್ವಾಲ್ಕರ್ (ಕಾಲ:29 ನಿ.15 ಸೆ.)-1, ಕರಣ್ ಗೆಹಂಡೂಲೆ (ಇಬ್ಬರೂ ಬೆಂಗಳೂರು ನಗರ)-2, ಗುರುಪ್ರಸಾದ್ (ತುಮಕೂರು)-3.
20 ವರ್ಷದೊಳಗಿನವರ 8 ಕಿ.ಮೀ. ಓಟ: ಜೆ.ಆರ್.ಕಲ್ಯಾಣ್ (ಬೆಂಗಳೂರು, ಕಾಲ: 24 ನಿ. 51 ಸೆ.)-1, ಅಖಿಲ್ ಕುಮಾರ್ (ರಾಮನಗರ)-2, ಶೈಲೇಶ್ ಕುಶ್ವಾಹ (ಬೆಂಗಳೂರು ನಗರ)-3.
18 ವರ್ಷದೊಳಗಿನವರ 6 ಕಿ.ಮೀ. ಓಟ: ಪ್ರವೀಣ್ ಅರ್ಜುನ್ ಅರಗೆ (ಕೊಡಗು,ಕಾಲ: 18ನಿ.19 ಸೆ)-1, ಚಂದ್ರಶೇಖರ್ ಬಸವರಾಜ್ (ಕೊಪ್ಪಳ)-2, ಲಕ್ಷ್ಮಣ್ ಸಿದ್ದಪ್ಪ ಹಿರಳಿ (ಬೆಂಗಳೂರು ನಗರ)-3.
16 ವರ್ಷದೊಳಗಿನವರ ಬಾಲಕರ 2 ಕಿ.ಮೀ. ಓಟ: ಪ್ರೇಮ್ ಬುರುದ (ಬೆಳಗಾವಿ, ಕಾಲ: 5ನಿ.43 ಸೆ)-1, ಆದಿತ್ಯ ಹೆಗ್ಗಿ (ಕಲಬುರುಗಿ)-2, ಸೋಫಿಯಾನ್ ಸುಧನಿ ಜಮಾದಾರ (ಬೆಳಗಾವಿ)-3
ಮಹಿಳೆಯರು: 10 ಕಿ.ಮೀ. ಓಟ: ಎನ್.ಐ.ತೇಜಸ್ವಿನಿ (ಕಾಲ: 34ನಿ.44ಸೆ)-1, ಆರಾಧನಾ-2, ಸಿ. ಪ್ರಿಯಾಂಕಾ (ಮೂವರೂ ಬೆಂಗಳೂರು ನಗರ)-3
20 ವರ್ಷದೊಳಗಿನವರ 6 ಕಿ.ಮೀ. ಓಟ: ವೈಷ್ಣವಿ ರಾವಲ್ (ಬೆಳಗಾವಿ, ಕಾಲ: 21 ನಿ.25 ಸೆ)-1, ಶಿಲ್ಪಾ ಆರ್. ಹೊಸಮನಿ (ಧಾರವಾಡ)-2, ತಮನ್ನಾ (ಬೆಂಗಳೂರು ನಗರ)-3
18 ವರ್ಷದೊಳಗಿನವರ 4 ಕಿ.ಮೀ. ಓಟ: ನಾಗಿಣಿ (ದಕ್ಷಿಣ ಕನ್ನಡ, ಕಾಲ: 14ನಿ.41 ಸೆ)-1, ಚರಿಷ್ಮಾ-(ದಕ್ಷಿಣ ಕನ್ನಡ)-2, ಅಕ್ಷರಾ ಮಜುಕರ್ (ಬೆಳಗಾವಿ)-3
16 ವರ್ಷದೊಳಗಿನ ಬಾಲಕಿಯರ 2 ಕಿ.ಮೀ. ಓಟ: ಲಕ್ಷ್ಮಿ ಬಿ.ಒಬ್ಬಮ್ಮನವರ್ (ಧಾರವಾಡ, ಕಾಲ: 6 ನಿ.26 ಸೆ)-1, ಮೇಘಾ ಡಿ.ಅಶೋಕ್ (ದಕ್ಷಿಣ ಕನ್ನಡ)-2, ಶ್ರೇಯಾ ಎಸ್. ಘಂಟಿ (ಧಾರವಾಡ)-3

ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಭಾನುವಾರ 60ನೇ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್ ಓಟದಲ್ಲಿ ನೂರಾರು ಮಂದಿ ಪಾಲ್ಗೊಂಡರು

ಭಾರತ ಕುಸ್ತಿ ತಂಡದ ಮುಖ್ಯ ಕೋಚ್ ಆಗಿ ಅತುಲ್ ನೇಮಕ

ಬೆಳಗಾವಿ: ಮಲೇಷ್ಯಾದ ಕ್ವಾಲಾಲಂಪುರದಲ್ಲಿ ಜ.12ರಿಂದ 17ರವರೆಗೆ ನಡೆಯಲಿರುವ ಅಂತರ ರಾಷ್ಟ್ರೀಯ ಕುಸ್ತಿ ಟೂರ್ನಿಯಲ್ಲಿ ಪಾಲ್ಗೊಳ್ಳುವ ಭಾರತ ಕುಸ್ತಿ ತಂಡದ ಮುಖ್ಯ ತರಬೇತುದಾರರಾಗಿ ತಾಲ್ಲೂಕಿನ ಮುಚ್ಚಂಡಿಯ ಅಂತರರಾಷ್ಟ್ರೀಯ ಕುಸ್ತಿಪಟು ಅತುಲ್ ಶಿರೋಳೆ ಅವರನ್ನು ನೇಮಕ ಮಾಡಲಾಗಿದೆ.

ಇಂಟರ್‌ನ್ಯಾಷನಲ್ ಒಲಿಂಪಿಕ್ಸ್ ಸ್ಪೋರ್ಟ್ಸ್ ಆರ್ಗನೈಸೇಷನ್ ಕಮಿಟಿ ಹಾಗೂ ವರ್ಲ್ಡ್ ಫೆಡರೇಷನ್ ಆಫ್ ಮಿಷನ್ ಒಲಿಂಪಿಕ್ಸ್ ಗೇಮ್ಸ್ ಅಸೋಸಿಯೇಷನ್ ಈ ಟೂರ್ನಿ ಆಯೋಜಿಸಿದೆ.

'ಭಾರತ ಕುಸ್ತಿ ತಂಡದ ಮುಖ್ಯ ತರಬೇತುದಾರರಾಗಿ ಆಯ್ಕೆಯಾಗಿದ್ದಕ್ಕೆ ಖುಷಿಯಾಗಿದೆ. ಟೂರ್ನಿಗೂ ಮುನ್ನ ಮುಂಬೈನಲ್ಲಿ ನಡೆಯಲಿರುವ ಶಿಬಿರದಲ್ಲಿ ಪಾಲ್ಗೊಳ್ಳುವೆ. ದೇಶಕ್ಕೆ ಹೆಚ್ಚಿನ ಪದಕಗಳನ್ನು ತರುವುದೇ ನನ್ನ ಗುರಿ' ಎಂದು ಅತುಲ್ ಶಿರೋಳೆ 'ಪ್ರಜಾವಾಣಿ'ಗೆ ತಿಳಿಸಿದರು.

45 ಸಿನಿಮಾ ಭರ್ಜರಿ ಕಲೆಕ್ಷನ್; ರಮೇಶ್ ರೆಡ್ಡಿ

ಬೆಂಗಳೂರು : 'ಸಮಾಜಕ್ಕೊಂದು ಒಳ್ಳೆಯ ಸಿನಿಮಾ ಕೊಡಬೇಕೆಂಬ ಕನಸು ನನ್ನದು. ಗರುಡ ಪುರಾಣದ ಉತ್ತಮ ಸಂದೇಶವುಳ್ಳ ನಮ್ಮ 45 ಸಿನಿಮಾವನ್ನು ಪ್ರೇಕ್ಷಕರು ಮೆಚ್ಚಿದ್ದು, ನಿರೀಕ್ಷೆಗೆ ತಕ್ಕಂತೆ ಸಿನಿಮಾ ಭರ್ಜರಿ ಕಲೆಕ್ಷನ್ ಮಾಡುತ್ತಿದೆ ಎಂದು ನಿರ್ಮಾಪಕ ರಮೇಶ್ ರೆಡ್ಡಿ ಸಂತಸ ವ್ಯಕ್ತಪಡಿಸಿದ್ದಾರೆ.

ಸಿನಿಮಾ ಕಲೆಕ್ಷನ್ ಸೇರಿ ಇನ್ನಿತರೆ ವಿಷಯಗಳ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ರಾಜ್ಯಾದ್ಯಂತ ಬಿಡುಗಡೆಯಾಗಿರುವ 45 ಸಿನಿಮಾ ಕರುನಾಡ ಚಕ್ರವರ್ತಿ ಡಾ.ಶಿವರಾಜ್‌ಕುಮಾರ್, ರಿಯಲ್ ಸ್ಟಾರ್ ಉಪೇಂದ್ರ, ರಾಜ್ ಬಿ ಶೆಟ್ಟಿ ನಟನೆಯಲ್ಲಿ ಗರುಡ ಪುರಾಣದ ಕಥಾಹಂದರ ಹೊಂದಿದ್ದು, ಇಂದಿನ ಪೀಳಿಗೆಗೆ ಸನಾತನ ಧರ್ಮದ ಸಂದೇಶಗಳನ್ನು ಕೊಡಬೇಕೆಂಬ ಉದ್ದೇಶದೊಂದಿಗೆ ಅದ್ದೂರಿಯಾಗಿ ನಿರ್ಮಿಸಿದ್ದೇವೆ. ಸಿನಿಮಾದ ಮೇಕಿಂಗ್‌ನಲ್ಲಿ ಅದ್ದೂರಿಯಾಗಿ ಮೂಡಿಬಂದಿದ್ದು, ಸಿನಿಮಾ ಬಜೆಟ್ ಚಿತ್ರಮಂದಿರಗಳ ಸ್ಕ್ರೀನ್ ಮೇಲೆ ಕಣ್ತುಂಬಿಕೊಳ್ಳಬಹುದಾಗಿದೆ.

ಉಳಿದಂತೆ, ಸಿನಿಮಾ ಬಿಡುಗಡೆಗೂ ಮುನ್ನವೇ ಸಾಕಷ್ಟು ಕಲೆಕ್ಷನ್ ಮಾಡಿತ್ತು. ಪ್ರಸ್ತುತ, ಕನ್ನಡದಲ್ಲಿ ಮಾತ್ರ ಸಿನಿಮಾ ಬಿಡುಗಡೆ ಮಾಡಿದ್ದು, ರಾಜ್ಯಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೈಸೂರು, ದಾವಣಗೆರೆ ಸೇರಿ ಬೇರೆ ಬೇರೆ ಭಾಗಗಳಿಂದ ಜನ ಕರೆ ಮಾಡಿ ಸಿನಿಮಾ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದಾರೆ. ಇಂದಿನ ಪೀಳಿಗೆಗೆ ಸಿನಿಮಾ ಮೂಲಕ ಅತ್ಯುತ್ತಮ ಸಂದೇಶ ನೀಡಿರುವುದಕ್ಕೆ ಶ್ಲಾಘನೆ ವ್ಯಕ್ತವಾಗಿದೆ' ಎಂದು ತಿಳಿಸಿದ್ದಾರೆ.

ರಮೇಶ್ ರೆಡ್ಡಿ
45 ಸಿನಿಮಾ ನಿರ್ಮಾಪಕರು

ಎಲ್ಲರ ಸಂದೇಶ : ಸಮಾಜಕ್ಕೆ ಸಿನಿಮಾ ಮೂಲಕ ಒಂದೊಳ್ಳೆಯ ಸಂದೇಶ ಕೊಡಬೇಕೆನ್ನುವುದು ನಿರ್ದೇಶಕ ಅರ್ಜುನ್ ಜನ್ಯಾ ಸೇರಿ ಪ್ರತಿಯೊಬ್ಬರ ಅಭಿಪ್ರಾಯವಾಗಿತ್ತು. ಒಳ್ಳೆಯ ಸಿನಿಮಾಗೆ ಬಂಡವಾಳ ಹಾಕಬೇಕೆಂದು ಕಾಯುತ್ತಿದ್ದ ನನಗೆ ಅರ್ಜುನ್ ಜನ್ಯಾರವರು ಗರುಡ ಪುರಾಣ ಕಥೆಯನ್ನು ಇಂದಿನ ಪೀಳಿಗೆಗೆ ಅರ್ಥವಾಗುವ ರೀತಿ ತಂತ್ರಜ್ಞಾನ ಬಳಸಿ ಹೇಳಬೇಕೆಂದರು. ತಕ್ಷಣ ನಾನು ಸಿನಿಮಾಗೆ ಒಪ್ಪಿಕೊಂಡೆ. ಅದೇ ರೀತಿ, ಶಿವಣ್ಣ, ಉಪ್ಪಿ ಸರ್ ಸಹ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಸಿನಿಮಾ ಕೊಡಬೇಕೆಂದೇ ಚರ್ಚಿಸುತ್ತಿದ್ದರು. ಹೀಗಾಗಿಯೇ ಎಲ್ಲರೂ ಒಟ್ಟಾಗಿ ಈ ಸಿನಿಮಾ ಮೂಲಕ ಸಮಾಜಕ್ಕೆ ಅರ್ಥಪೂರ್ಣ ಸಂದೇಶ ನೀಡಿದ್ದೇವೆ. ಸಿನಿಮಾ ನೋಡಿ ನಮ್ಮ ಸನಾತನ ಧರ್ಮ, ಗರುಡ ಪುರಾಣ, ಕರ್ಮ ಸಿದ್ಧಾಂತಗಳ ಅವಲೋಕನ ಎಲ್ಲರಿಗೂ ತಿಳಿಯಬೇಕೆಂಬುದೇ ನಮ್ಮ ಆಶಯ' ಎಂದಿದ್ದಾರೆ ನಿರ್ಮಾಪಕ ರಮೇಶ್ ರೆಡ್ಡಿ.

ಪೈರಸಿ ತಡೆಗಟ್ಟಲು ಮನವಿ : 'ರಾಜ್ಯಾದ್ಯಂತ ಸಿನಿಮಾ ಬಿಡುಗಡೆಯಾಗಿ ಪ್ರೇಕ್ಷಕರ ಮೆಚ್ಚುಗೆ ಮಾತುಗಳಿಗೆ ಕಿವಿಯಾಗುತ್ತಿರುವ ವೇಳೆ ನಮ್ಮ ಮೊಬೈಲ್‌ಗೆ ಸಿನಿಮಾ ಪೈರಸಿ ಬಂದರೆ ನಿರ್ಮಾಪಕನಿಗೆಷ್ಟು ನೋವಾಗುವುದಿಲ್ಲ ಹೇಳಿ? ಸತತ 3 ವರ್ಷ ಸಮಾಜಕ್ಕೊಂದು ಸಂದೇಶ ನೀಡಬೇಕೆಂದು ಹಂಬಲಿಸಿ ಅರ್ಥಪೂರ್ಣ ಸಿನಿಮಾ ಮಾಡಿರುತ್ತೇವೆ. ಬಿಡುಗಡೆಯಾದ ಒಂದೇ ದಿನದಲ್ಲಿ ಮೊಬೈಲ್‌ನಲ್ಲಿ ಪೈರಸಿ ಮೂಲಕ ಸಿನಿಮಾ ಹಂಚಿದರೆ ಹೇಗೆ? ಚಿತ್ರತಂಡದ ಉದ್ದೇಶ, ಶ್ರಮವನ್ನು ಹೀಗೆ ಪೈರಸಿ ಮಾಡುವವರು ಹಾಳು ಮಾಡುತ್ತಿದ್ದು, ಈ ಕೃತ್ಯಗಳನ್ನು ತಡೆಗಟ್ಟಬೇಕು.

ಇಲ್ಲವೆಂದರೆ, ಮುಂಬರುವ ದಿನಗಳಲ್ಲಿ ಕಾನೂನು ಮೂಲಕ ಬುದ್ಧಿಕಲಿಸಬೇಕಾಗುತ್ತದೆ. ಸದ್ಯ, ಕನ್ನಡದಲ್ಲಿ ಮಾತ್ರ ಬಿಡುಗಡೆಯಾಗಿರುವ ಸಿನಿಮಾ, ಜನವರಿ ಮೊದಲ ವಾರದಿಂದ ತೆಲುಗು, ತಮಿಳು, ಮಲಯಾಳಂ, ಹಿಂದಿಯಲ್ಲೂ ಬಿಡುಗಡೆಯಾಗಲಿದೆ.

SP SURAJ PRODUCTION

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಕಬಡ್ಡಿ: ಪಾಕಿಸ್ತಾನ ಆಟಗಾರನ ಮೇಲೆ ನಿಷೇಧ ಹೇರಿಕೆ

ಕರಾಚಿ (ಪಿಟಿಐ): ಬಹರೇನ್‌ನಲ್ಲಿ ಈ ತಿಂಗಳ ಆರಂಭದಲ್ಲಿ ಖಾಸಗಿಯಾಗಿ ಆಯೋಜಿಸಲಾಗಿದ್ದ ಟೂರ್ನಿಯಲ್ಲಿ ಭಾರತದ ತಂಡವೊಂದಕ್ಕೆ ಆಡಿದ ಕಾರಣಕ್ಕೆ ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ ಉಬೈದುಲ್ಲಾ ರಜಪೂತ್ ಅವರ ಮೇಲೆ ಪಾಕಿಸ್ತಾನದ ರಾಷ್ಟ್ರೀಯ ಫೆಡರೇಷನ್ ಅನಿರ್ದಿಷ್ಟಾವಧಿ ನಿಷೇಧ ಹೇರಿದೆ.

ಶನಿವಾರ ತುರ್ತುಸಭೆ ನಡೆಸಿದ ಪಾಕಿಸ್ತಾನ ಕಬಡ್ಡಿ ಫೆಡರೇಷನ್ (ಪಿಕೆಎಫ್) ಈ ನಿರ್ಧಾರಕ್ಕೆ ಬಂದಿದೆ. ಈ ನಿರ್ಧಾರದ ವಿರುದ್ಧ ಉಬೈದುಲ್ಲಾ ಅವರಿಗೆ ಶಿಸ್ತು ಸಮಿತಿಯ ಮುಂದೆ ಮನವಿ ಸಲ್ಲಿಸಲು ಅವಕಾಶವಿದೆ ಎಂದು ಪಿಕೆಎಫ್ ಕಾರ್ಯದರ್ಶಿ ರಾಣಾ ಸರ್ವರ್ ತಿಳಿಸಿದ್ದಾರೆ.

ಫೆಡರೇಷನ್‌ನಿಂದ ನಿರಾಕ್ಷೇಪಣಾ ಪತ್ರ ಪಡೆಯದೇ ವಿದೇಶಕ್ಕೆ ಹೋಗಿ ಆಡಿ ಅವರು ನಿಯಮ ಉಲ್ಲಂಘಿಸಿದ್ದಾರೆ ಎಂದು ಪಿಕೆಎಫ್ ತಿಳಿಸಿದೆ. ತಂಡ ಗೆದ್ದ ಮೇಲೆ ಭುಜದ ಮೇಲೆ ಭಾರತದ ತಂಡವೊಂದರ ಜರ್ಸಿ ಧರಿಸಿದ್ದರು. ಗೆದ್ದ ನಂತರ ಭುಜದ ಮೇಲೆ ಭಾರತದ ಧ್ವಜ ಇಳಿಬಿಟ್ಟಿರುವುದನ್ನು ಗಂಭೀರವಾಗಿ ಪರಿಗಣಿಸಿದೆ ಎಂದೂ ರಾಣಾ ತಿಳಿಸಿದ್ದಾರೆ.

ಕಂಬಳ: 100 ಮೀ. ದೂರವನ್ನು 8.69 ಸೆಕೆಂಡ್‌ಗಳಲ್ಲಿ ಓಡಿಸಿದ ಸ್ವರೂಪ್ ಕುಮಾರ್

ಕಲ್ಲಪಾಪು ಕೋಣಗಳ ಹೊಸ ದಾಖಲೆ

ಪ್ರಜಾವಾಣಿ ವಾರ್ತೆ

ಮಂಗಳೂರು: 80 ಬಡಗಬೆಟ್ಟು ಕಲ್ಲಪಾಪು ಶ್ರೀಕಾ ಸಂದೀಪ್ ಶೆಟ್ಟಿ ಅವರ ಕೋಣಗಳ ಜೋಡಿ ಕಂಬಳದ ಅತಿ ವೇಗದ ಓಟದ ದಾಖಲೆಯನ್ನು ಸ್ಥಾಪಿಸಿದೆ. ಮಂಗಳೂರು ರಾಮ-ಲಕ್ಷ್ಮಣ ಜೋಡುಕರೆ ಕಂಬಳದ ನೇಗಿಲು ಹಿರಿಯ ವಿಭಾಗದ ಫೈನಲ್ ಸ್ಪರ್ಧೆಯಲ್ಲಿ ಭಾನುವಾರ ಈ ದಾಖಲೆ ನಿರ್ಮಾಣವಾಯಿತು.

ಸಂಸತ್ ಸದಸ್ಯ ಕ್ಯಾ.ಬ್ರಿಜೇಶ್ ಚೌಟ ನೇತೃತ್ವದಲ್ಲಿ ನಗರದ ಬಂಗ್ರಕೂಳೂರಿನ ಗೋಲ್ಡ್ ಫಿಂಚ್ ಸಿಟಿಯಲ್ಲಿ ನಡೆದ ಕಂಬಳದಲ್ಲಿ ಶ್ರೀಕಾ ಸಂದೀಪ್ ಶೆಟ್ಟಿ ಮಾಲಿಕತ್ವದ ಗಾಂಧಿ ಮೈದಾನ ಸಂತು ಮತ್ತು ಸುರತ್ಕಲ್ ಪಾಂಚ ಕೋಣಗಳನ್ನು ಕುಂದ ಬಾರಂದಡಿ ಮಾಸ್ತಿಕಟ್ಟೆಯ ಸ್ವರೂಪ್ ಕುಮಾರ್ ಓಡಿಸಿದರು. ಆ ಕೋಣಗಳು 125 ಮೀ ದೂರವನ್ನು 10.87 ಸೆಕೆಂಡ್‌ಗಳಲ್ಲಿ ಕ್ರಮಿಸಿದವು. ಈ ಲೆಕ್ಕಾಚಾರದಂತೆ 100 ಮೀ ದೂರವನ್ನು 8.69 ಸೆಕೆಂಡ್‌ಗಳಲ್ಲಿ ಕ್ರಮಿಸಿದಂತಾಗಿದೆ.

ಮಂಗಳೂರಿನಲ್ಲಿ ನಡೆದ ರಾಮ ಲಕ್ಷ್ಮಣ ಜೋಡುಕರೆ ಕಂಬಳದಲ್ಲಿ ಅತಿವೇಗದ ದಾಖಲೆ ನಿರ್ಮಿಸಿದ ಕಲ್ಲಪಾಪು ಶ್ರೀಕಾ ಸಂದೀಪ್ ಶೆಟ್ಟಿ ಅವರ ಕೋಣಗಳು

ಮಂಗಳೂರು ಕಂಬಳದ ಸೆಮಿ ಫೈನಲ್‌ನಲ್ಲಿ ಇದೇ ಕೋಣಗಳ ಜೋಡಿ 125 ಮೀಟರ್ ದೂರವನ್ನು 11.06 ಸೆಕೆಂಡ್ ನಲ್ಲಿ ಕ್ರಮಿಸಿದ್ದು ಈ ಋತುವಿನ ಅತಿ ವೇಗದ ಓಟ ಎಂದು ದಾಖಲಾಗಿತ್ತು. ಫೈನಲ್‌ನಲ್ಲಿ ಅದೇ ಕೋಣಗಳು ಹಿಂದಿನ ಎಲ್ಲಾ ದಾಖಲೆಗಳನ್ನು ಅಳಿಸಿಹಾಕಿದವು.

ಕಂಬಳದ ಅತಿ ವೇಗದ ಓಟ ದಾಖಲೆ ಈ ಹಿಂದೆ ಮಿಜಾರು ಪ್ರಸಾದ್ ನಿಲಯ ಶಕ್ತಿ ಪ್ರಸಾದ್ ಅವರ ಮಾಳ ಪುಟ್ಟ ಮತ್ತು ಮಿಜಾರ್ ಅಪ್ಪು ಕೋಣಗಳ ಹೆಸರಿನಲ್ಲಿತ್ತು. 2021ರಲ್ಲಿ ಕಕ್ಯಪದವು ಕಂಬಳದಲ್ಲಿ ಆ ಕೋಣಗಳನ್ನು ಮಿಜಾರು ಅಶ್ವತ್ಥಪುರ ಶ್ರೀನಿವಾಸ ಗೌಡ ಓಡಿಸಿದ್ದರು. ಅಂದು ಆ ಕೋಣಗಳು 125 ಮೀಟರ್ ಅನ್ನು 10.95 ಸೆಕೆಂಡ್‌ಗಳಲ್ಲಿ ಕ್ರಮಿಸಿದ್ದವು. 100 ಮೀ ದೂರವನ್ನು 8.76 ಸೆಕೆಂಡ್‌ಗಳಲ್ಲಿ ಕ್ರಮಿಸಿದಂತಾಗಿತ್ತು.

ಕಂಬಳದಲ್ಲಿ ಅತಿ ವೇಗದ ದಾಖಲೆ ನಿರ್ಮಿಸಿದ ಕೋಣಗಳ ಓಟಗಾರ ಸ್ವರೂಪ್ ಕುಮಾರ್

ಪ್ರಶಸ್ತಿ ಸುತ್ತಿಗೆ ಕರ್ನಾಟಕ ತಂಡಗಳು

ಮಂಗಳೂರು: ರೋಚಕ ಹೋರಾಟದಲ್ಲಿ ಕೇವಲ ಒಂದು ಪಾಯಿಂಟ್‌ನಿಂದ ಎದುರಾಳಿ ತಂಡ ವನ್ನು ಮಣಿಸಿದ ಕರ್ನಾಟಕದ ಬಾಲಕರ ತಂಡ ಪದವಿ ಪೂರ್ವ ವಿದ್ಯಾರ್ಥಿಗಳ ರಾಷ್ಟ್ರ ಮಟ್ಟದ ನೆಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿತು. ಆತಿಥೇಯ ಬಾಲಕಿಯರ ತಂಡವೂ ಪ್ರಶಸ್ತಿ ಸುತ್ತಿಗೆ ಲಗ್ಗೆ ಇರಿಸಿತು.

ಪಿಲಿಕುಳದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕರ ವಿಭಾಗದಲ್ಲಿ ಕರ್ನಾಟಕ 31-30ರಲ್ಲಿ ಚಂಡೀಗಢವನ್ನು ಮಣಿಸಿತು. ನಾಲ್ಕರ ಘಟ್ಟದ ಮತ್ತೊಂದು ರೋಮಾಂಚಕಾರಿ ಹಣಾಹಣಿಯಲ್ಲಿ ಪಂಜಾಬ್ 39-38ರಲ್ಲಿ ಕೇರಳವನ್ನು ಸೋಲಿಸಿತು.

ಬಾಲಕಿಯರ ವಿಭಾಗದಲ್ಲಿ ಆಧಿಪತ್ಯ ಮುಂದುವರಿಸಿದ ಕರ್ನಾಟಕ ಸೆಮಿಫೈನಲ್‌ನಲ್ಲಿ ಮಹಾರಾಷ್ಟ್ರವನ್ನು 24-14ರಲ್ಲಿ ಮಣಿಸಿತು. ಕೇರಳ 32-27ರಲ್ಲಿ ಪಂಜಾಬ್ ವಿರುದ್ಧ ಜಯ ಸಾಧಿಸಿತು.

ಶಿಖಾ– ಅಶ್ವಿನಿ ಜೋಡಿಗೆ ಪ್ರಶಸ್ತಿ

ವಿಜಯವಾಡ (ಪಿಟಿಐ): ಅನುಭವಿ ಜೋಡಿಯಾದ ಶಿಖಾ ಗೌತಮ್ ಮತ್ತು ಅಶ್ವಿನಿ ಭಟ್ ಕೆ. ಅವರು ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಪ್ರಿಯಾದೇವಿ ಕೊಂಜೆಗ್ಬಾಮ್– ಶ್ರುತಿ ಮಿಶ್ರಾ ಜೋಡಿಯನ್ನು ನೇರ ಗೇಮ್‌ಗಳಿಂದ ಸೋಲಿಸಿ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳಾ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಅಂತಿಮ ಪಂದ್ಯದಲ್ಲಿ ಮೂರನೇ ಶ್ರೇಯಾಂಕ ಪಡೆದಿದ್ದ ಕರ್ನಾಟಕದ ಶಿಖಾ– ಅಶ್ವಿನಿ ಜೋಡಿ 21-14, 21-18 ರಿಂದ ಮಣಿಪುರದ ಪ್ರಿಯಾದೇವಿ– ಉತ್ತರ ಪ್ರದೇಶದ ಶ್ರುತಿ ಮಿಶ್ರಾ ಅವರನ್ನು ಸೋಲಿಸಿತು. 2018ರಲ್ಲೂ ಶಿಖಾ–ಅಶ್ವಿನಿ ಜೋಡಿ ಚಾಂಪಿಯನ್ ಆಗಿತ್ತು.

ರಿತ್ವಿಕ್, ಸೂರ್ಯ ಚಾಂಪಿಯನ್ಸ್: ವಿಜಯವಾಡದ 19 ವರ್ಷ ವಯಸ್ಸಿನ ಸೂರ್ಯ ಚರಿಷ್ಮ ತಮಿರಿ ಅವರು 17-21, 21-12, 21-14 ರಿಂದ ಒಡಿಶಾದ ತನ್ವಿ ಪತ್ರಿ ಅವರನ್ನು ಸೋಲಿಸಿ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

2024 ಒಡಿಶಾ ಮಾಸ್ಟರ್ಸ್ ವಿಜೇತ ರಿತ್ವಿಕ್ ಸಂಜೀವಿ (ತಮಿಳುನಾಡು) ಅವರು ಫೈನಲ್‌ನಲ್ಲಿ ತಮ್ಮ ಅಮೋಘ ರಕ್ಷಣೆಯ ಆಟದ ಬಲದಿಂದ ಹರಿಯಾಣದ ಭರತ್ ಭಾರ್ಗವ್ ಅವರನ್ನು 21-16, 22-20 ರಿಂದ ಸೋಲಿಸಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಪ್ರಶಸ್ತಿಯೊಂದಿಗೆ ಶಿಖಾ ಗೌತಮ್ ಮತ್ತು ಅಶ್ವಿನಿ ಭಟ್ ಜೋಡಿ

ಮಂದಾನ– ಶಫಾಲಿ ಭರ್ಜರಿ ಆಟ

ಟಿ20 ಸರಣಿಯ ನಾಲ್ಕನೇ ಪಂದ್ಯದಲ್ಲೂ ಭಾರತಕ್ಕೆ ಜಯ • ಶ್ರೀಲಂಕಾ ಹೋರಾಟ

ತಿರುವನಂತಪುರ (ಪಿಟಿಐ): ಅಮೋಘ ಲಯದಲ್ಲಿರುವ ಶಫಾಲಿ ವರ್ಮಾ (79) ಮತ್ತು ಉಪನಾಯಕಿ ಸ್ಮೃತಿ ಮಂದಾನ (80) ಮೊದಲ ವಿಕೆಟ್‌ಗೆ ದಾಖಲೆ ಜೊತೆಯಾಟವಾಡಿ ಭಾರತ ತಂಡ ದೊಡ್ಡ ಮೊತ್ತ ಪೇರಿಸಲು ನೆರವಾದರು. ಬಳಿಕ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡಿದರು. ಶ್ರೀಲಂಕಾ ವಿರುದ್ಧ ಟಿ20 ಸರಣಿಯ ನಾಲ್ಕನೇ ಪಂದ್ಯವನ್ನು ಆತಿಥೇಯ ತಂಡ ಭಾನುವಾರ 30 ರನ್‌ಗಳಿಂದ ಗೆದ್ದುಕೊಂಡಿತು.

ಸರಣಿಯಲ್ಲಿ ಭಾರತ 4–0 ಮುನ್ನಡೆ ಗಳಿಸಿತು. ಸರಣಿಯ ಕೊನೆಯ ಪಂದ್ಯ ಇದೇ 30ರಂದು ಇಲ್ಲಿಯೇ ನಡೆಯಲಿದೆ.

ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರ ದಾಖಲೆಯ 162 ರನ್‌ಗಳ ಜೊತೆಯಾಟದ ನೆರವಿನಿಂದ ಭಾರತ ತಂಡ 2 ವಿಕೆಟ್‌ಗೆ 221 ರನ್‌ಗಳ ದೊಡ್ಡ ಮೊತ್ತ ದಾಖಲಿಸಿತು. ಆರಂಭದಲ್ಲಿ ಶ್ರೀಲಂಕಾ ಹೋರಾಟ ನಡೆಸುವಂತೆ ಕಂಡರೂ ಅಂತಿಮವಾಗಿ ಒತ್ತಡಕ್ಕೆ ಸಿಲುಕಿ 6 ವಿಕೆಟ್‌ಗೆ 191 ರನ್ ಗಳಿಸಲಷ್ಟೇ ಶಕ್ತವಾಯಿತು.

ಸರಣಿಯಲ್ಲಿ ಇದೇ ಮೊದಲ ಬಾರಿ ಬ್ಯಾಟಿಂಗಿಗೆ ಇಳಿಸಲ್ಪಟ್ಟ ಭಾರತಕ್ಕೆ ಗ್ರೀನ್‌ಫೀಲ್ಡ್ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ಶಫಾಲಿ ಮತ್ತು ಮಂದಾನ ಅಮೋಘ ಆರಂಭ ಒದಗಿಸಿದರು. 15.2 ಓವರುಗಳಲ್ಲಿ 162 ರನ್ ಸೇರಿಸಿದರು. ಲಂಕಾ ಬೌಲರ್‌ಗಳು ಸವಾಲೇ ಆಗಲಿಲ್ಲ. ಇದು ಟಿ20 ಕ್ರಿಕೆಟ್‌ನಲ್ಲಿ ಭಾರತದ ಪರ ಯಾವುದೇ ವಿಕೆಟ್‌ಗೆ ದಾಖಲೆ ಜೊತೆಯಾಟ ಎನಿಸಿತು.

ಈ ಹಿಂದಿನ ಪಂದ್ಯಗಳಲ್ಲಿ ವಿಫಲರಾಗಿದ್ದ ಮಂದಾನ ಇಲ್ಲಿ ಲಯಕ್ಕೆ ಮರಳಿದರು. ಈ ಜೋಡಿ ನಾಲ್ಕನೇ ಬಾರಿ ಶತಕದ ಜೊತೆಯಾಟದಲ್ಲಿ ಭಾಗಿಯಾಯಿತು. ಮಾತ್ರವಲ್ಲ, 2019ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಗ್ರಾಸ್ ಐಲ್‌ನಲ್ಲಿ ತಾವೇ ಸ್ಥಾಪಿಸಿದ್ದ ಈ ಹಿಂದಿನ ದಾಖಲೆ (143 ರನ್) ಸುಧಾರಿಸಿದರು.

ಈ ಹಿಂದಿನ ಎರಡು ಪಂದ್ಯಗಳಲ್ಲಿ ಅಜೇಯ ಅರ್ಧ ಶತಕ ಗಳಿಸಿದ್ದ ಶಫಾಲಿ ಈ ಪಂದ್ಯದಲ್ಲೂ ಅದೇ ಲಹರಿಯಲ್ಲಿ ರನ್ ಪೇರಿಸುತ್ತಾ ಸಾಗಿದರು. ಅವರು ಈ ಮಾದರಿಯಲ್ಲಿ ಚೊಚ್ಚಲ ಶತಕ ಗಳಿಸುವ ಆಸೆ ಈಡೇರಲಿಲ್ಲ. 16ನೇ ಓವರಿನಲ್ಲಿ ನಿಮಶಾ ಮೀಪಗೆ ತಮ್ಮದೇ ಬೌಲಿಂಗ್‌ನಲ್ಲಿ ಶಫಾಲಿ ಅವರ ಕ್ಯಾಚ್ ಹಿಡಿದರು. 46 ಎಸೆತಗಳ ಅವರ ಇನಿಂಗ್ಸ್‌ನಲ್ಲಿ 12 ಬೌಂಡರಿ, ಒಂದು ಸಿಕ್ಸರ್ ಇತ್ತು.

ಶಫಾಲಿ ಬೆನ್ನ ಹಿಂದೆಯೇ ಮಂದಾನ ಸಹ ನಿರ್ಗಮಿಸಿದರು. ಅವರು 48 ಎಸೆತಗಳಲ್ಲಿ 11 ಬೌಂಡರಿ, ಮೂರು ಸಿಕ್ಸರ್‌ಗಳನ್ನು ಬಾರಿಸಿದರು. ಕೊನೆಯಲ್ಲಿ ರಿಚಾ ಘೋಷ್ ಕೇವಲ 16 ಎಸೆತಗಳಲ್ಲಿ ಅಜೇಯ 40 ರನ್ ಸಿಡಿಸಿ ಮೊತ್ತ 200 ದಾಟಿಸಲು ನೆರವಾದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ಅಜೇಯ 16 ರನ್ (9 ಎಸೆತ) ಗಳಿಸಿದರು.

ಲಂಕಾ ತಂಡಕ್ಕೆ ಹಸಿನಿ ಪೆರೇರಾ (33, 20ಎ) ಮತ್ತು ನಾಯಕಿ ಚಾಮರಿ ಅಟಪಟ್ಟು (52, 37ಎ, 4x3, 6x3) ಅವರು 5.3 ಓವರುಗಳಲ್ಲಿ 59 ರನ್ ಸೇರಿಸುವ ಮೂಲಕ ಉತ್ತಮ ಆರಂಭ ಒದಗಿಸಿದರು. ಚಾಮರಿ ಮತ್ತು ಇಮೇಶಾ ದುಲಾನಿ (29, 28ಎ) ಅವರು ಎರಡನೇ ವಿಕೆಟ್‌ಗೆ 57 ರನ್ ಸೇರಿಸಿದರು. ನಂತರ ನಿಯಮಿತವಾಗಿ ವಿಕೆಟ್‌ಗಳು ಬಿದ್ದು ಪ್ರವಾಸಿ ತಂಡ ಒತ್ತಡಕ್ಕೆ ಸಿಲುಕಿತು. ಸ್ಪಿನ್ನರ್ ವೈಷ್ಣವಿ ಶರ್ಮಾ 24ಕ್ಕೆ2 ವಿಕೆಟ್ ಪಡೆದರೆ, ಮಧ್ಯಮ ವೇಗಿ ಅರುಂಧತಿ 42ಕ್ಕೆ2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: 20 ಓವರುಗಳಲ್ಲಿ 2 ವಿಕೆಟ್‌ಗೆ 221 (ಸ್ಮೃತಿ ಮಂದಾನ 80, ಶಫಾಲಿ ವರ್ಮಾ 79, ರಿಚಾ ಘೋಷ್ ಔಟಾಗದೇ 40, ಹರ್ಮನ್‌ಪ್ರೀತ್ ಕೌರ್ ಔಟಾಗದೇ 16); ಶ್ರೀಲಂಕಾ: 20 ಓವರುಗಳಲ್ಲಿ 6 ವಿಕೆಟ್‌ಗೆ 191 (ಹಸಿನಿ ಪೆರೇರಾ 33, ಚಾಮರಿ ಅಟಪಟ್ಟು 52, ಇಮೇಶಾ ದುಲಾನಿ 29, ಹರ್ಷಿತಾ ಸಮರವಿಕ್ರಮ 20; ಅರುಂಧತಿ ರೆಡ್ಡಿ 42ಕ್ಕೆ2, ವೈಷ್ಣವಿ ಶರ್ಮಾ 24ಕ್ಕೆ2). ಪಂದ್ಯದ ಆಟಗಾರ್ತಿ: ಸ್ಮೃತಿ ಮಂದಾನ



–ಪಿಟಿಐ ಚಿತ್ರ

10 ಸಾವಿರ ರನ್ ದಾಟಿದ ಮಂದಾನ

ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರು ಭಾನುವಾರದ ಇನಿಂಗ್ಸ್ ವೇಳೆ ಅಂತರರಾಷ್ಟ್ರೀಯ ಕ್ರಿಕೆಟ್‌ನ ವಿವಿಧ ಮಾದರಿಗಳಲ್ಲಿ ಒಟ್ಟು 10,000 ರನ್‌ಗಳ ಮೈಲಿಗಲ್ಲು ದಾಟಿದರು. ಈ ಸಾಧನೆಗೆ ಪಾತ್ರರಾದ ಭಾರತದ ಎರಡನೇ ಹಾಗೂ ವಿಶ್ವದ ನಾಲ್ಕನೇ ಆಟಗಾರ್ತಿ ಎಂಬ ಹಿರಿಮೆ ಅವರದಾಯಿತು.

ಈ ಹಿಂದೆ ಭಾರತದ ಮಿಥಾಲಿ ರಾಜ್, ನ್ಯೂಜಿಲೆಂಡ್‌ನ ಸುಝಿ ಬೇಟ್ಸ್ ಮತ್ತು ಇಂಗ್ಲೆಂಡ್‌ನ ಚಾರ್ಲೊಟ್ ಎಡ್ವರ್ಡ್ಸ್ ಮಾತ್ರ ಈ ಮೈಲಿಗಲ್ಲು ಸಾಧಿಸಿದ್ದಾರೆ.

ವಿಶ್ವ ರ್‍ಯಾಪಿಡ್ ಚೆಸ್: ಭಾರತದ ಅರ್ಜುನ್ ಇರಿಗೇಶಿಗೆ ಮೂರನೇ ಸ್ಥಾನ

ಮ್ಯಾಗ್ನಸ್ ಕಾರ್ಲ್‌ಸನ್‌ಗೆ ಆರನೇ ಬಾರಿ ಕಿರೀಟ

ದೋಹಾ: ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಫಿಡೆ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಆರನೇ ಬಾರಿ 'ರಾಜ'ನಾಗಿ ಮೆರೆದರು. ಭಾನುವಾರ ಮುಕ್ತಾಯಗೊಂಡ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಅರ್ಜುನ್ ಇರಿಗೇಶಿ ಮೂರನೇ ಸ್ಥಾನ ಪಡೆದರು.

ಮಹಿಳೆಯರ ವಿಭಾಗದಲ್ಲಿ ಅಗ್ರ ಐದರಲ್ಲಿ ಭಾರತದ ಮೂವರು ಸ್ಥಾನ ಗಳಿಸಿದ್ದು ಕಡಿಮೆ ಸಾಧನೆಯೇನೂ ಆಗಿರಲಿಲ್ಲ. ಕಳೆದ ವರ್ಷದ ಚಾಂಪಿಯನ್ ಕೋನೇರು ಹಂಪಿ ಮೂರನೇ ಸ್ಥಾನ ಗಳಿಸಿದರು.

ಓಪನ್ ವಿಭಾಗದಲ್ಲಿ ಕಾರ್ಲ್‌ಸನ್ 13 ಸುತ್ತುಗಳಲ್ಲಿ 10.5 ಅಂಕ (9 ಗೆಲುವು, 3 ಡ್ರಾ, 1 ಸೋಲು) ಗಳಿಸಿದರು. ರಷ್ಯಾದ ವ್ಲಾದಿಮಿರ್ ಆರ್ಟೆಮೀವ್ (9.5) ಎರಡನೇ ಸ್ಥಾನ ಗಳಿಸಿದರು. ಇಷ್ಟೇ ಅಂಕ ಗಳಿಸಿದ ಅರ್ಜುನ್ ಮತ್ತು ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್, ಡೊಮಿಂಗೆಝ್ ಪೆರೆಝ್ ಲೀನಿಯರ್ ಅವರು ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಮೂರು ನಾಲ್ಕು ಮತ್ತು ಐದನೇ ಸ್ಥಾನ ಪಡೆದರು. ಅರ್ಜುನ್ ಎಂಟು ಪಂದ್ಯ ಗೆದ್ದು, 3 ಡ್ರಾ ಮಾಡಿಕೊಂಡು, ಎರಡು ಸೋತರು. ಅದರಲ್ಲೂ 11ನೇ ಸುತ್ತಿನ ಸೋಲು ಅವರ ಪ್ರಶಸ್ತಿ ಆಸೆಗೆ ಕಡಿವಾಣ ಹಾಕಿತು. ಒಟ್ಟು 247 ಮಂದಿ ಕಣದಲ್ಲಿದ್ದರು.

ಮಹಿಳೆಯರ ವಿಭಾಗದಲ್ಲಿ ಹಾಲಿ ಚಾಂಪಿಯನ್, ಭಾರತದ ಕೋನೇರು ಹಂಪಿ ಮೂರನೇ ಸ್ಥಾನ ಪಡೆಯಬೇಕಾಯಿತು. ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಚಾಂಪಿಯನ್ ಮುಕುಟ ಧರಿಸಿದರು. ಅಲೆಕ್ಸಾಂಡ್ರಾ ಮತ್ತು ಚೀನಾದ ಝು ಜಿನೆರ್ ಅವರು 11 ಸುತ್ತಿನ ಬಳಿಕ ತಲಾ 8.5 ಅಂಕ ಗಳಿಸಿದ್ದರು. ಟೈಬ್ರೇಕರ್‌ನಲ್ಲಿ ಅಲೆಕ್ಸಾಂಡ್ರಾ ಗೆಲುವು ಸಾಧಿಸಿದರು.

ಭಾರತದ ಸವಿತಾ ಶ್ರೀ, ವೈಶಾಲಿ ರಮೇಶಬಾಬು (ತಲಾ 8 ಅಂಕ) ಅವರು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಗಳಿಸಿದರು. ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್ ಎಂಟನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ 141 ಆಟಗಾರ್ತಿಯರು ಕಣದಲ್ಲಿದ್ದರು.

ಮ್ಯಾಗ್ನಸ್ ಕಾರ್ಲ್‌ಸನ್

ವಿಜಯ ಹಜಾರೆ ಟ್ರೋಫಿ: ಮಯಂಕ್ ಪಡೆಗೆ ತಮಿಳುನಾಡು ಸವಾಲು

'ಹ್ಯಾಟ್ರಿಕ್' ಜಯದ ಛಲದಲ್ಲಿ ಕರ್ನಾಟಕ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸತತ ಎರಡು ಗೆಲುವುಗಳಿಂದ ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಎಲೀಟ್ ಎ ಗುಂಪಿನ ಕ್ರಿಕೆಟ್ ಪಂದ್ಯದಲ್ಲಿ ತಮಿಳುನಾಡು ತಂಡವನ್ನು ಎದುರಿಸಲಿದೆ.

ಸೋಮವಾರ ಇಲ್ಲಿ ನಡೆಯಲಿರುವ ಪಂದ್ಯವು ತಮಿಳುನಾಡು ತಂಡಕ್ಕೆ ಮಹತ್ವದ್ದಾಗಿದೆ. ಏಕೆಂದರೆ; ಎನ್. ಜಗದೀಶನ್ ನಾಯಕತ್ವದ ತಂಡವು ಕಳೆದ ಎರಡು ಪಂದ್ಯಗಳಲ್ಲಿ ಒಂದರಲ್ಲಿ ಗೆದ್ದು, ಇನ್ನೊಂದರಲ್ಲಿ ಸೋತಿದೆ. ಅದರಿಂದಾಗಿ ಕೇವಲ 4 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

ಕರ್ನಾಟಕ ತಂಡವು ಎಂಟು ಅಂಕ ಗಳಿಸಿದ್ದರೂ ಎರಡನೇ ಸ್ಥಾನದಲ್ಲಿದೆ. ನೆಟ್ ರನ್ ರೇಟ್‌ನಲ್ಲಿ ಮಧ್ಯ ಪ್ರದೇಶ ಮುಂದಿರುವುದರಿಂದ ಮೊದಲ ಸ್ಥಾನದಲ್ಲಿದೆ. ಅದರಿಂದಾಗಿ ಕರ್ನಾಟಕ ತಂಡವು ಮುಂದಿನ ಹಂತದ ಪಂದ್ಯಗಳಲ್ಲಿ ಜಯದೊಂದಿಗೆ ರನ್‌ರೇಟ್ ಕೂಡ ಉತ್ತಮಪಡಿಸಿಕೊಂಡರೆ ಅಗ್ರಸ್ಥಾನಕ್ಕೇರಬಹುದು.

ತಂಡದ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಸತತ ಎರಡು ಭರ್ಜರಿ ಶತಕ ಗಳಿಸಿ ಅಮೋಘ ಫಾರ್ಮ್‌ನಲ್ಲಿದ್ದಾರೆ. ಕೇರಳದ ವಿರುದ್ಧ ಶತಕ ಬಾರಿಸಿದ್ದ ಅನುಭವಿ ಕರುಣ್ ನಾಯರ್, ಮೊದಲ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದ ನಾಯಕ ಮಯಂಕ್ ಅಗರವಾಲ್, ಭರವಸೆಯ ಆಟಗಾರ ಸ್ಮರಣ್, ಅಭಿನವ್ ಮನೋಹರ್ ಅವರೂ ಉತ್ತಮ ಲಯದಲ್ಲಿದ್ದಾರೆ. ಇದರಿಂದಾಗಿ ಪರಿಣಾಮಕಾರಿ ಬೌಲರ್‌ಗಳಾದ ತಮಿಳುನಾಡಿನ ಗುರ್ಜಪನೀತ್ ಸಿಂಗ್, ಸೋನು ಯಾದವ್ ಮತ್ತು ಆರ್. ಸಾಯಿಕಿಶೋರ್ ಅವರಿಗೆ ಕಠಿಣ ಸವಾಲು ಎದುರಾಗುವುದು ಖಚಿತ.

ಕರ್ನಾಟಕದ ವೇಗಿಗಳಾದ ವಿದ್ವತ್ ಕಾವೇರಪ್ಪ, ಅಭಿಲಾಷ್ ಶೆಟ್ಟಿ ಅವರು ವಿಕೆಟ್ ಗಳಿಸುತ್ತಿದ್ದಾರೆ. ಆದರೆ ರನ್ ನಿಯಂತ್ರಿಸುವತ್ತ ಹೆಚ್ಚು ಗಮನ ನೀಡಬೇಕಿದೆ. ವಿದ್ಯಾಧರ್ ಪಾಟೀಲ, ನವಪ್ರತಿಭೆ ಶ್ರೀಶ ಆಚಾರ್ ಅವರೂ ಲಯ ಕಂಡುಕೊಳ್ಳಬೇಕಿದೆ. ತಮಿಳುನಾಡಿನ ಜಗದೀಶನ್, ಪ್ರದೋಷ್ ಪಾಲ್, ಇಂದ್ರಜೀತ್ ಮತ್ತು ಸನ್ನಿ ಸಂಧು ಅವರು ಬೌಲರ್‌ಗಳಿಗೆ ಸವಾಲೊಡ್ಡಬಲ್ಲ ಬ್ಯಾಟರ್‌ಗಳಾಗಿದ್ದಾರೆ. ಅವರನ್ನು ಕಟ್ಟಿಹಾಕಲು 'ಹಾಲಿ ಚಾಂಪಿಯನ್' ಕರ್ನಾಟಕದ ಬೌಲರ್‌ಗಳು ವಿಶೇಷ ತಂತ್ರಗಾರಿಕೆಯೊಂದಿಗೆ ಕಣಕ್ಕಿಳಿಯುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಮಯಂಕ್ ಅಗರವಾಲ್ ಮತ್ತು ದೇವದತ್ತ ಪಡಿಕ್ಕಲ್

ಅಗ್ರಸ್ಥಾನದಲ್ಲಿ ಮೂರು ಮಂದಿ

ಮಂಗಳೂರು: ಕೇರಳದ ಅಜೀಶ್ ಆ್ಯಂಟನಿ, ಕರ್ನಾಟಕದ ಇಶಾನ್ ಭನ್ಸಾಲಿ ಮತ್ತು ತಮಿಳುನಾಡಿನ ವಿಘ್ನೇಶ್ವರನ್ ಇಲ್ಲಿ ನಡೆಯುತ್ತಿರುವ ರಾಷ್ಟ್ರ ಮಟ್ಟದ ಫಿಡೆ ರೇಟೆಡ್ ಮುಕ್ತ ಚೆಸ್ ಟೂರ್ನಿಯ ಆರನೇ ಸುತ್ತಿನ ಮುಕ್ತಾಯಕ್ಕೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಕರ್ನಾಟಕ ತುಳು ಅಕಾಡೆಮಿಯಲ್ಲಿ ನಡೆಯುತ್ತಿರುವ ಟೂರ್ನಿ ಯಲ್ಲಿ ಮೂವರೂ ತಲಾ 5.5 ಅಂಕ ಗಳಿಸಿದ್ದು ಉತ್ತಮ ಟೈಬ್ರೇಕರ್ ಆಧಾರದಲ್ಲಿ ಅಜೀಶ್ ಮೊದಲ ಸ್ಥಾನ ದಲ್ಲಿದ್ದಾರೆ. ಎರಡನೇ ಶ್ರೇಯಾಂಕದ ಆಟಗಾರ, ಐಎಂ ಬಾಲಸುಬ್ರಹ್ಮಣ್ಯಂ ರಾಮನಾಥನ್ ಸೇರಿದಂತೆ 10 ಮಂದಿ ತಲಾ 5 ಅಂಕ ಗಳಿಸಿದ್ದಾರೆ.

ಶನಿವಾರ ಅಗ್ರಸ್ಥಾನದಲ್ಲಿದ್ದ ಅಜೀಶ್ ಮಂಗಳೂರಿನ ರವೀಶ್ ಕೋಟೆ ಜೊತೆ ಐದನೇ ಸುತ್ತಿನ ಪಂದ್ಯವನ್ನು ಡ್ರಾ ಮಾಡಿಕೊಂಡರು. ಮುಂದಿನ ಸುತ್ತಿನಲ್ಲಿ ಅಜೀಶ್, ಮೂರನೇ ಶ್ರೇಯಾಂಕದ ಪ್ರಸನ್ನ ಕಾರ್ತಿಕ್ (ತಮಿಳುನಾಡು) ವಿರುದ್ಧ ಜಯ ಸಾಧಿಸಿದರು. ರವೀಶ್ ಕೋಟೆ ಅವರು ಬಾಲಸುಬ್ರಹ್ಮಣ್ಯಂ ರಾಮನಾಥನ್ ಜೊತೆಯೂ ಡ್ರಾ ಸಾಧಿಸಿದರು.

ರವೀಶ್, ಗೋವಾದ ಜೋಶುವಾ ಮಾರ್ಕ್ ಟೆಲಿಸ್, ಕೇರಳದ ವೈಷ್ಣವ್ ಎಸ್, ಜಾಯ್ ಲಾಜರ್, ಸಿದ್ಧಾರ್ಥ್ ಶ್ರೀಕುಮಾರ್, ಸನೂಸ್ ಶಿಬು, ಅನಿಲ್ ಕುಮಾರ್ ಒ.ಟಿ, ಕರ್ನಾಟಕದ ರಾಘವ ಬೂಡೂರು ಹಾಗೂ ಗವಿಸಿದ್ದಯ್ಯ ತಲಾ 5 ಪಾಯಿಂಟ್ ಗಳಿಸಿದ್ದಾರೆ. ಅಗ್ರ ಶ್ರೇಯಾಂಕದ ಮಾರ್ತಾಂಡನ್ 4.5 ಅಂಕ ಗಳಿಸಿದ್ದಾರೆ.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಅಧ್ಯಕ್ಷರಾಗಿ ಕುಮಾರ್ ಬಂಗಾರಪ್ಪ

ಕುಮಾರ್ ಬಂಗಾರಪ್ಪ

ಮುರಳೀಧರ್

ಬೆಂಗಳೂರು: ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರು ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಅಧ್ಯಕ್ಷರಾಗಿ ಭಾನುವಾರ ಅವಿರೋಧವಾಗಿ ಚುನಾಯಿತರಾದರು.

ಮುಂದಿನ ನಾಲ್ಕು ವರ್ಷಗಳ ಅವಧಿಗೆ ಸಂಸ್ಥೆಯ ಪದಾಧಿಕಾರಿಗಳನ್ನು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಯಾಗಿ ವಿ. ಮುರಳೀಧರ್, ಖಜಾಂಚಿಯಾಗಿ ಜಿ.ಎಂ.ನಿಶ್ಚಿತಾ, ಜಂಟಿ ಕಾರ್ಯದರ್ಶಿಯಾಗಿ ಅನೂಪ್ ಶ್ರೀಧರ್, ಉಪಾಧ್ಯಕ್ಷರಾಗಿ ಡಾ.ಎಚ್.ಅನಿಲ್ ಕುಮಾರ್, ಬಸವರಾಜ ಎಸ್.ಎನ್, ಕಿರಣ್ ಬೆಲ್ಲಂ, ಟಿ.ಎಸ್.ವಿಶ್ವಾಸ್, ಸಿ.ಎಸ್. ಮಹೇಶ್ ಆಯ್ಕೆಯಾದರು.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎನ್.ಸಿ.ಸುಧೀರ್, ಡಾ. ನಿಶಾಂತ್ ಹಿರೇಮಠ ಎಸ್, ವಿಜಯ್ ಎನ್, ಗುರುಪ್ರಸಾದ್, ಹರೀಶ್ ಕುಮಾರ್ ಬಿ.ಆರ್, ಅರವಿಂದ್ ಭಟ್, ಆರ್. ಅರುಣ್, ಸಂತೋಷ್ ಕುಮಾರ್ ಶೆಟ್ಟಿ, ಆನಂದ್ ಬಿ ಹವಣ್ಣವರ್, ರಾಜೇಶ್ ಪಿ. ಆಯ್ಕೆಯಾದರು.

ವಾಟರ್ ಪೋಲೊ: ಫೈನಲ್‌ಗೆ ಕರ್ನಾಟಕ

ಬೆಂಗಳೂರು: ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ವಾಟರ್ ಪೋಲೊ ತಂಡಗಳು ಹೈದರಾಬಾದಿನ ಗಚ್ಚಿಬೌಲಿಯಲ್ಲಿ ನಡೆಯುತ್ತಿರುವ 36ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದವು.

ಭಾನುವಾರ ನಡೆದ ಸೆಮಿಫೈನಲ್‌ನಲ್ಲಿ ಕರ್ನಾಟಕ ಬಾಲಕರ ತಂಡವು 23–4ರಿಂದ ಆಂಧ್ರಪ್ರದೇಶ ವಿರುದ್ಧ ಪಾರಮ್ಯ ಮೆರೆಯಿತು. ರಾಜ್ಯದ ಬಾಲಕಿಯರ ತಂಡವು 19–0ಯಿಂದ ಆಂಧ್ರಪ್ರದೇಶ ತಂಡವನ್ನು ಮಣಿಸಿತು.

ಕರ್ನಾಟಕದ ಈಜುಪಟು ಅನೀಶ್ ಅನಿರುದ್ಧ ಕೋರೆ 100 ಮೀಟರ್ ಬಟರ್‌ಫ್ಲೈ (ಗುಂಪು 1) ಸ್ಪರ್ಧೆಯನ್ನು 58.20 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಗೆದ್ದರು.

ಈಜು ಸ್ಪರ್ಧೆಯ ಫಲಿತಾಂಶ: (ಗುಂಪು 1): ಬಾಲಕರು: 800 ಮೀಟರ್ ಫ್ರೀಸ್ಟೈಲ್: ರೇಣುಕಾಚಾರ್ಯ ಹೊದಮನಿ (ಕರ್ನಾಟಕ, ಕಾಲ: 9ನಿ.04.66ಸೆ)–1. **400 ಮೀಟರ್ ಮೆಡ್ಲೆ:** ರಾಘವ್ ಎಸ್. (ಕರ್ನಾಟಕ, ಕಾಲ: 4ನಿ.51.16ಸೆ)–1. **200 ಮೀಟರ್ ಬಟರ್‌ಫ್ಲೈ:** ಸ್ವರೂಪ್ ಧನುಚೆ (ಕರ್ನಾಟಕ, ಕಾಲ: 2ನಿ.13.45ಸೆ)–1. **ಬಾಲಕಿಯರು: 800 ಮೀಟರ್ ಫ್ರೀಸ್ಟೈಲ್:** ಅದಿತಿ ವಿನಾಯಕ ರೆಲೆಕರ್ (ಕರ್ನಾಟಕ, ಕಾಲ: 9ನಿ.53.58ಸೆ)–1. **200 ಮೀಟರ್ ಬಟರ್‌ಫ್ಲೈ:** ವೈಷ್ಣವಿ ಜಿ (ಕರ್ನಾಟಕ, ಕಾಲ: 2ನಿ. 45.81ಸೆ)–1. **100 ಮೀ ಫ್ರೀಸ್ಟೈಲ್:** ತಿಸ್ಯಾ ಸೋನಾರ್ (ಕರ್ನಾಟಕ, ಕಾಲ: 1ನಿ.02.26ಸೆ)–1.

ಗೆಲುವಿನಲ್ಲಿ ಮಿಂಚಿದ ಕಶ್ವಿ, ಶ್ರೇಯಾ

ಬೆಂಗಳೂರು: ಕಶ್ವಿ ಕಂಡಿಕೊಪ್ಪ ಅವರ ಆಲ್‌ರೌಂಡ್ ಆಟ ಮತ್ತು ಶ್ರೇಯಾ ಎಸ್. ಚವಾನ್ ಅವರ ಅಮೋಘ ಶತಕದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 19 ವರ್ಷದೊಳಗಿನ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 36 ರನ್‌ಗಳಿಂದ ಬಂಗಾಳ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿತು.

ಪುಣೆಯ ವೀರಂಗನ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಭಾನುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ಶ್ರೇಯಾ (108 ರನ್) ಮತ್ತು ಕಶ್ವಿ (94) ಅವರ ಬ್ಯಾಟಿಂಗ್ ನೆರವಿನಿಂದ 50 ಓವರ್‌ಗಳಲ್ಲಿ 8 ವಿಕೆಟ್‌ಗೆ 270 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಬಂಗಾಳ ತಂಡವು 46 ಓವರ್‌ಗಳಲ್ಲಿ 236 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಶಿವಾಂಶಿ (60) ಏಕಾಂಗಿ ಹೋರಾಟ ನಡೆಸಿದರು. ಕರ್ನಾಟಕ ತಂಡದ ವಂದಿತಾ ಕೆ.ರಾವ್ ಮೂರು ವಿಕೆಟ್ ಪಡೆದರೆ, ಹರಿಣಿ ಎನ್, ಕಶ್ವಿ ಮತ್ತು ನಂದಿನಿ ಚವಾನ್ ತಲಾ ಎರಡು ವಿಕೆಟ್ ಪಡೆದರು.

ಇದೇ 30ರಂದು ನಡೆಯಲಿರುವ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು ಗುಜರಾತ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 50 ಓವರ್‌ಗಳಲ್ಲಿ 270 (ರಚಿತಾ ಹತ್ವಾರ್ 37, ಶ್ರೇಯಾ ಎಸ್. ಚವಾನ್ 108, ಕಶ್ವಿ ಕಂಡಿಕೊಪ್ಪ 94; ಸ್ನಿಗ್ಧಾ ಬ್ಯಾಗ್ 29ಕ್ಕೆ 3). ಬಂಗಾಳ: 46 ಓವರ್‌ಗಳಲ್ಲಿ 236 (ಶಿವಾಂಶಿ 60; ಹರಿಣಿ ಎನ್. 22ಕ್ಕೆ 2, ವಂದಿತಾ ಕೆ.ರಾವ್ 33ಕ್ಕೆ 3, ಕಶ್ವಿ ಕಂಡಿಕೊಪ್ಪ 48ಕ್ಕೆ 2, ನಂದಿನಿ ಚವಾನ್ 29ಕ್ಕೆ 2).

10 YEAR WARRANTY | BAJAJ SECURE • AMC • ROAD SIDE ASSISTANCE | 72198 21111 | SHRIRAM Finance | IDFC FIRST Bank ALWAYS YOU FIRST | BAJAJ AUTO CREDIT | L&T Finance | TATA CAPITAL Two Wheeler Loans

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಡಿಸೆಂಬರ್ 22 ರಿಂದ ಡಿಸೆಂಬರ್ 31, 2025 ರ ವರೆಗೆ ಅನ್ವಯವಾಗುವ ಉಳಿತಾಯ. ಕ್ಯಾಶ್ ಬ್ಯಾಕ್ ಉಲ್ಲೇಖಿಸಲ್ಪಟ್ಟ ಒಟ್ಟು ಉಳಿತಾಯ. ಶೂನ್ಯ ಪ್ರೊಸೆಸಿಂಗ್ ಶುಲ್ಕ ಮತ್ತು ಉಚಿತ ಸೇವೆಗಳಿಂದ (3 ಸ್ಟ್ಯಾಂಡರ್ಡ್ ಫ್ರೀ ಸರ್ವಿಸಸ್ ಮತ್ತು 2 ಹೆಚ್ಚುವರಿ ಫ್ರೀ ಸರ್ವಿಸಸ್) ಉಳಿಯುವ ಮೊತ್ತವಾಗಿದೆ. ಉಚಿತ ಸೇವೆಯ ಉಳಿತಾಯವು ನಿಗದಿತ ಲೇಬರ್ ಶುಲ್ಕಗಳಿಗೆ ಅನ್ವಯಿಸುತ್ತದೆ. ಅನ್ವಯವಾಗುವ ಕೊಡುಗೆಗಳು ಮೋಡೆಲ್ಸ್/ರಾಜ್ಯಗಳಲ್ಲಿ ಬದಲಾಗಬಹುದು. ಶೂನ್ಯ PF ಮೇಲಿನ ಉಳಿತಾಯ ಫೈನಾನ್ಸರ್‌ರನ್ನು ಅವಲಂಬಿಸಿದೆ ಮತ್ತು ಆಯಾಯ ಸ್ಥಳಗಳಲ್ಲಿ ಬದಲಾಗಬಹುದು. ಫೈನಾನ್ಸರ್‌ರ ಸ್ವಂತ ವಿವೇಚನೆಯಡಿ ಹಣಕಾಸು ಲಭ್ಯ. ಸಾಹಸಗಳನ್ನು ತಜ್ಞರು ವೃತ್ತಿಪರ ಮೇಲ್ವಿಚಾರಣೆಯಲ್ಲಿ ನಿಯಂತ್ರಿತ ಮತ್ತು ಸುರಕ್ಷಿತ ವಾತಾವರಣದಲ್ಲಿ ಸಾರ್ವಜನಿಕ ಅಥವಾ ಸಾರ್ವಜನಿಕ ರಸ್ತೆಗಳಿಂದ ಪ್ರತ್ಯೇಕವಾಗಿ ನಿರ್ವಹಿಸಿರುತ್ತಾರೆ. ಇಂತಹ ಸಾಹಸಗಳನ್ನು ಪುನರಾವರ್ತಿಸಬಾರದಾಗಿ ವಿನಂತಿ. ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಿ. ಪಲ್ಸರ್ 125 ಆಫರ್ ನಿಯಾನ್ ಮತ್ತು ಕಾರ್ಬನ್ ಫೈಬರ್ ಮೋಡೆಲ್‌ಗಳ ಮೇಲೆ.

Authorised Dealers for Bajaj Auto Ltd.: Bangalore • **Bommanahalli** AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur** : KHIVRAJ BAJAJ: - 9148752305 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 9900072690 • **Hubli** CHANNAMMA BAJAJ: 9008030908 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, **MISHA BAJAJ**: 9632684225. • **Chikodi** MISHA BAJAJ: 9632765225 • **Gokak** MISHA BAJAJ: 9035454225 • **Bellary AADI BAJAJ: 9606050250• Raichur SHREE BALAJI AUTOMOBILES: 9880235539• Koppal I A BAJAJ: 9632512938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 7022627411•(Bus Stand Road) 7022627412• **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805, 9663566620 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.